ಮಂಗಳವಾರ, ಜನವರಿ 14, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯಕ್ಷಗಾನ

ಮೈಸೂರಿನ ರಂಗಾಯಣ ಆಯೋಜಿಸಿದ್ದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಜನಪದ ಉತ್ಸವದಲ್ಲಿ ಯಕ್ಷಮಿತ್ರ ಬಳಗ, ಮಂಗಳೂರು ತಂಡ 'ನರಕಾಸುರ ವಧೆ' ಯಕ್ಷಗಾನ ಪ್ರಸಂಗ ನಡೆಸಿಕೊಟ್ಟರು



ಒಂದೂವರೆ ವರ್ಷ ಕಳೆದರೂ ನಮ್ಮ ಗುರಿ ಈಡೇರಿಲ್ಲ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಬೇಸರ

29 ಸಾವಿರ ಪ್ರಕರಣ ಇತ್ಯರ್ಥಕ್ಕೆ 6 ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ವಿಭಾಗಾಧಿಕಾರಿಗಳ (ಎ.ಸಿ) ನ್ಯಾಯಾಲಯಗಳಲ್ಲಿ ಸುಮಾರು 29 ಸಾವಿರಕ್ಕೂ ಅಧಿಕ ಪ್ರಕರಣಗಳು ಬಾಕಿ ಇದ್ದು, ಇನ್ನು ಆರು ತಿಂಗಳಲ್ಲಿ ಎಲ್ಲವನ್ನೂ ಇತ್ಯರ್ಥ ಗೊಳಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಗಡುವು ನೀಡಿದ್ದಾರೆ.



ಕೃಷ್ಣ ಬೈರೇಗೌಡ

ವಿಕಾಸಸೌಧದಲ್ಲಿ ವಿಡಿಯೊ ಸಂವಾದದ ಮೂಲಕ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಜತೆಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿ ಅವರು ಮಾತನಾಡಿದರು.

'ಪ್ರಕರಣಗಳು ಇತ್ಯರ್ಥಗೊಳ್ಳದೇ ಬಾಕಿ ಇರುವುದರಿಂದ ಜನಸಾಮಾನ್ಯರು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಧಿಕಾರಿಗಳು ಅಭಿಯಾನದ ಮಾದರಿಯಲ್ಲಿ ವಿಲೇ ಕಾರ್ಯಕ್ಕೆ ಮುಂದಾಗಬೇಕು' ಎಂದು ಸೂಚಿಸಿದರು.

'ಎ.ಸಿ ನ್ಯಾಯಾಲಯಗಳಲ್ಲಿ ಯಾವ ಪ್ರಕರಣವನ್ನೂ ಆರು ತಿಂಗಳಿಗಿಂತಲೂ ಹೆಚ್ಚು ಇಟ್ಟುಕೊಳ್ಳುವಂತಿಲ್ಲ ಎಂಬ ಕಾನೂನಿದೆ. ಆದರೆ, ಕಳೆದ ವರ್ಷ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೇರಿದ ವೇಳೆ ಎ.ಸಿ ನ್ಯಾಯಾಲಯಗಳಲ್ಲಿ ಅವಧಿ ಮೀರಿದ 60 ಸಾವಿರಕ್ಕೂ ಅಧಿಕ ಪ್ರಕರಣಗಳಿದ್ದವು. ಈ ಎಲ್ಲಾ ಪ್ರಕರಣಗಳನ್ನು ಮುಂದಿನ ಒಂದು ವರ್ಷದಲ್ಲಿ ಇತ್ಯರ್ಥಗೊಳಿಸಿ, ಸರ್ಕಾರಿ ಕಚೇರಿಗಳಿಗೆ ಜನರ ಅನಗತ್ಯ ಅಲೆದಾಟಕ್ಕೆ ಕಡಿವಾಣ ಹಾಕಬೇಕು ಎಂಬುದು ನಮ್ಮ ಸರ್ಕಾರದ ಮಹತ್ವಾಕಾಂಕ್ಷೆಯ ಉದ್ದೇಶವಾಗಿತ್ತು' ಎಂದು ಅವರು ಹೇಳಿದರು.

'ಆದರೆ ಒಂದೂವರೆ ವರ್ಷ ಕಳೆದರೂ ನಮ್ಮ ಉದ್ದೇಶ ಈಡೇರಿಲ್ಲ. ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ವಿಶೇಷ ಉಪ-ವಿಭಾಗಾಧಿಕಾರಿಗಳನ್ನು ನೇಮಕ ಮಾಡಿದರೂ ಶೇ 55ರಷ್ಟು ಪ್ರಕರಣಗಳನ್ನು ಮಾತ್ರ ವಿಲೇ ಮಾಡಲಾಗಿದೆ. ಒಂದು ವರ್ಷದಲ್ಲಿ ಆಗಬೇಕಾದ ಕೆಲಸ ಎರಡು ವರ್ಷ ಕಳೆದರೂ ಆಗಿಲ್ಲ ಎಂದರೆ ನಿಮಗೆ ಶೋಭೆ ತರುವುದಿಲ್ಲ. ಹೀಗಾಗಿ ಈ ವಾರದಿಂದಲೇ ರೆಗ್ಯುಲರ್ ಎ.ಸಿಗಳು ತಿಂಗಳೊಂದಕ್ಕೆ 200ರಿಂದ 250 ಪ್ರಕರಣಗಳನ್ನು ವಿಲೇ ಮಾಡಿದರೆ, ವಿಶೇಷ ಉಪ ವಿಭಾಗಾಧಿಕಾರಿಗಳು ಕನಿಷ್ಠ 70ರಿಂದ 100 ಪ್ರಕರಣಗಳನ್ನು ವಿಲೇಗೊಳಿಸಬೇಕು. ಆರು ತಿಂಗಳ ನಂತರವೂ ಪ್ರಕರಣಗಳನ್ನು ಬಾಕಿ ಉಳಿಸಿಕೊಂಡಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮವಹಿಸಲಾಗುವುದು. ಅಲ್ಲದೇ, ಪ್ರತಿ ತಿಂಗಳೂ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತೇನೆ' ಎಂದರು.

'ನ್ಯಾಯಾಲಯಗಳ ತಕರಾರು ಪ್ರಕರಣಗಳ ವಿಲೇವಾರಿಯ ಜೊತೆಗೆ ಪೋಡಿ ದುರಸ್ತಿ, ನಮೂನೆ 3-9 ಮಿಸ್‌ಮ್ಯಾಚ್ ಹಾಗೂ ಪೌತಿ ಖಾತೆ ಆಂದೋಲನ ಉಪವಿಭಾಗಾಧಿಕಾರಿಗಳ ಮಟ್ಟದಲ್ಲೇ ನಡೆಯಬೇಕು' ಎಂದು ಹೇಳಿದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಆಯುಕ್ತರಾದ ಸುನಿಲ್‌ಕುಮಾರ್, ಸರ್ವೇ ಇಲಾಖೆ ಆಯುಕ್ತರಾದ ಮಂಜುನಾಥ್ ಸಭೆಯಲ್ಲಿ ಇದ್ದರು.

'90 ಲಕ್ಷ ಆಸ್ತಿಗಳಿಗೆ ಶೀಘ್ರವೇ ಇ–ಸ್ವತ್ತು ವಿತರಣೆ'

ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿನ ಆಸ್ತಿಗಳ ನೋಂದಣಿಗೆ ಕಂದಾಯ ಇಲಾಖೆಯು ಇ–ಸ್ವತ್ತು ಕಡ್ಡಾಯಗೊಳಿಸಿರುವುದರಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಾಕಿ ಇರುವ ಸುಮಾರು 90 ಲಕ್ಷ ಆಸ್ತಿಗಳಿಗೆ ಕಾಲಮಿತಿಯೊಳಗೆ ಇ–ಸ್ವತ್ತು ವಿತರಣೆ ಮಾಡಿ, ಆಸ್ತಿ ತೆರಿಗೆ ಸಂಗ್ರಹ ಅಭಿಯಾನ ಆರಂಭಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.

ಇಲಾಖೆಯ ಅಧಿಕಾರಿಗಳ ಜತೆ ಸಭೆ ನಡೆಸಿದ ಸಚಿವರು, ಇನ್ನು ಮುಂದೆ ಕಂದಾಯ ಜಮೀನಿನಲ್ಲಿ ಬಡಾವಣೆ ನಿರ್ಮಾಣಕ್ಕೆ ಅವಕಾಶ ನೀಡಬಾರದು. ಹೊಸ ಬಡಾವಣೆಗಳ ನಿರ್ಮಾಣವನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದೂ ಅವರು ಸೂಚಿಸಿದರು.



ಪ್ರಿಯಾಂಕ್ ಖರ್ಗೆ

ಖಾತಾ ಇಲ್ಲದ ಬಹಳಷ್ಟು ಆಸ್ತಿಗಳ ಸಂಬಂಧ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ನಿವೇಶನ ಹಾಗೂ ಮನೆಗಳನ್ನು ನೋಂದಣಿ ಮಾಡುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ಇಂತಹ ಪ್ರಕ್ರಿಯೆಗೆ ಕಡಿವಾಣ ಹಾಕಬೇಕು.

ಇದಕ್ಕಾಗಿ ಗ್ರಾಮಪಂಚಾಯಿತಿ ಮತ್ತು ನೋಂದಣಿ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸುವ ಮೂಲಕ ಇಂತಹ ಪ್ರಕರಣಗಳನ್ನು ತಡೆಯಬೇಕೆಂದು ಸಚಿವರು ನಿರ್ದೇಶನ ನೀಡಿದರು.

ಇದೇ 6ರಂದು ಇ–ಸ್ವತ್ತು ವಿತರಣೆಗೆ ಸಂಬಂಧಿಸಿದಂತೆ ಸಭೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 90 ಲಕ್ಷ ಆಸ್ತಿಗಳಿಗೆ ಇ–ಸ್ವತ್ತು ವಿತರಿಸದಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಅಲ್ಲದೇ, ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿಯಾನ ರೂಪದಲ್ಲಿ ನಿಯಮಬದ್ಧ ಆಸ್ತಿಗಳಿಗೆ ಇ–ಸ್ವತ್ತು ವಿತರಿಸುವ ಮೂಲಕ ತೆರಿಗೆ ಸಂಗ್ರಹವನ್ನು ಮಾಡಬೇಕು ಎಂದು ಹೇಳಿದ್ದರು.

ಆದ್ದರಿಂದ, ಇ–ಸ್ವತ್ತು ಮತ್ತು ಆಸ್ತಿ ತೆರಿಗೆ ಸಂಗ್ರಹಣೆ ಅಭಿಯಾನ ನಡೆಸಲು ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಪ್ರಿಯಾಂಕ್ ಅವರು, ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಉಮಾ ಮಹಾದೇವನ್ ಅವರಿಗೆ ಸೂಚಿಸಿದರು.



'ಮನೆಗೊಂದು ಗ್ರಂಥಾಲಯ'ಕ್ಕೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಸ್ಥಾಪನೆಯಾಗಿರುವ ಮೊದಲ 'ಮನೆಗೊಂದು ಗ್ರಂಥಾಲಯ'ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಚಾಲನೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹಾಗೂ ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಗ್ರಂಥಾಲಯದ ಫಲಕವನ್ನು ಅನಾವರಣಗೊಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಯೋಜನೆಯಾದ 'ಮನೆಗೊಂದು ಗ್ರಂಥಾಲಯ'ವನ್ನು ಪ್ರತಿ ಮನೆಯಲ್ಲಿ ಸ್ಥಾಪಿಸುವ ಮೂಲಕ, ಪುಸ್ತಕ ಸಂಸ್ಕೃತಿಯನ್ನು ಉಳಿಸುವ ಉದ್ದೇಶವನ್ನು ಹೊಂದಲಾಗಿದೆ. ಪ್ರಾಧಿಕಾರದ ಅವಧಿಯಲ್ಲಿ, ರಾಜ್ಯದಾದ್ಯಂತ ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಗುರಿ ಹೊಂದಲಾಗಿದೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮಾಹಿತಿ ನೀಡಿದರು.

ಮನೆ, ಸಂಘ–ಸಂಸ್ಥೆ, ಕಚೇರಿಗಳಲ್ಲಿ ಗ್ರಂಥಾಲಯ ಸ್ಥಾಪಿಸಬಹುದು. ಮನೆ ಮಾಲೀಕರು 100 ಪುಸ್ತಕಗಳಿಂದ ಗ್ರಂಥಾಲಯ ಸ್ಥಾಪನೆ ಮಾಡಬೇಕು. ಪುಸ್ತಕಗಳ ಖರೀದಿ ಹಾಗೂ ಅವುಗಳನ್ನು ಸುಸಜ್ಜಿತವಾಗಿಡುವ ಜವಾಬ್ದಾರಿ ಮನೆಯ ಮಾಲೀಕರದ್ದಾಗಿರುತ್ತದೆ. ಗ್ರಂಥಾಲಯವನ್ನು ಗಣ್ಯರಿಂದ ಉದ್ಘಾಟನೆ ಮಾಡಿಸುವ ಜವಾಬ್ದಾರಿಯನ್ನು ಪ್ರಾಧಿಕಾರ ವಹಿಸಿಕೊಳ್ಳಲಿದೆ. ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಗ್ರಂಥಾಲಯ ಜಾಗೃತ ಸಮಿತಿ ರಚಿಸಿ, ಗ್ರಂಥಾಲಯ ಸ್ಥಾಪಿಸಲು ಉತ್ತೇಜಿಸಲಾಗುತ್ತದೆ ಎಂದು ಹೇಳಿದರು.



ಮೊದಲ 'ಮನೆಗೊಂದು ಗ್ರಂಥಾಲಯ'ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಚಾಲನೆ ನೀಡಿದರು. ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಸಾಹಿತಿ ಹಂ.ಪ. ನಾಗರಾಜಯ್ಯ ಭಾಗವಹಿಸಿದ್ದರು

ಇದೇ ಸಂದರ್ಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ 'ಕುಮಾರ ವ್ಯಾಸ ಭಾರತ' ಕೃತಿಯ ಸಂಪುಟಗಳನ್ನು ಬಿಡುಗಡೆ ಮಾಡಿದರು.

'ಕನ್ನಡ ಸಾಹಿತ್ಯ ಲೋಕದ ಅಜರಾಮರ ಕೃತಿಯಾದ ಕುಮಾರವ್ಯಾಸ ಭಾರತವನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಓದುಗರಿಗೆ ಒದಗಿಸಲಾಗುವುದು' ಎಂದು ಗದಗದಲ್ಲಿ ನಡೆದ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಘೋಷಿಸಿದ್ದರು. ಅದರಂತೆ, ಕನ್ನಡ ಪುಸ್ತಕ ಪ್ರಾಧಿಕಾರ 'ಕುಮಾರವ್ಯಾಸ ಭಾರತ'ವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ. ಈ ಎರಡೂ ಸಂಪುಟಗಳು ಸೇರಿ ಒಟ್ಟು ₹500 ಬೆಲೆ ನಿಗದಿಪಡಿಸಲಾಗಿದೆ ಎಂದು ಮಾನಸ ಮಾಹಿತಿ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕಿರಣ್ ಸಿಂಗ್ ಉಪಸ್ಥಿತರಿದ್ದರು.

'ಬೆಳಗಾವಿ ಸಮಾವೇಶಕ್ಕೆ ಮುಕ್ತ ಆಹ್ವಾನ'

'ದೇಶದ ಸ್ವಾತಂತ್ರ್ಯ ಮತ್ತು ಸಂವಿಧಾನದ ಬಗ್ಗೆ ಗೌರವ ಇರುವ ಎಲ್ಲರೂ ಬೆಳಗಾವಿಯಲ್ಲಿ ಇದೇ 21ರಂದು ನಡೆಯಲಿರುವ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶದಲ್ಲಿ ಭಾಗವಹಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ಅಂಬೇಡ್ಕರ್, ಗಾಂಧಿ, ನೆಹರೂ ಮತ್ತು ಕಾಂಗ್ರೆಸ್ಸಿನ ಹೋರಾಟದ ಚರಿತ್ರೆಯನ್ನು ಮುಂದಿನ ಪೀಳಿಗೆಗೆ ಅರ್ಥ ಮಾಡಿಸಬೇಕಿದೆ' ಎಂದರು. 'ನಾವು (ಕಾಂಗ್ರೆಸ್‌ನವರು) ಗಾಂಧಿ ವಂಶಸ್ಥರು, ಬಿಜೆಪಿಯವರು ಗೋಡ್ಸೆ ವಂಶಸ್ಥರು. ಬಿಜೆಪಿ ಮತ್ತು ಕಾಂಗ್ರೆಸ್‌ನ ಈ ಸೈದ್ಧಾಂತಿಕ ವ್ಯತ್ಯಾಸವನ್ನು ಯುವ ಪೀಳಿಗೆಗೆ ಅರ್ಥಮಾಡಿಸಬೇಕಿದೆ' ಎಂದರು.

'ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಬಗ್ಗೆ ಗೌರವ ಇಲ್ಲದೆ, ಅವರ ವಿಗ್ರಹ ಮಾಡಿ ಇಟ್ಟುಕೊಂಡಿರುವ ಬಿಜೆಪಿಯವರಿಗೆ ಗಾಂಧಿ ಬಗ್ಗೆಯೂ ಗೌರವ ಇಲ್ಲ. ಸ್ವಾತಂತ್ರ್ಯ ಹೋರಾಟದ ಬಗ್ಗೆಯೂ ಗೌರವ ಇಲ್ಲ. ಅಂಬೇಡ್ಕರ್, ನೆಹರೂ ಹೀಗೆ ಯಾರ ಬಗ್ಗೆಯೂ ಗೌರವ ಇಲ್ಲ. ಅಷ್ಟೇ ಅಲ್ಲ, ದೇಶದ ಸಂವಿಧಾನ ಮತ್ತು ಚರಿತ್ರೆಯ ಬಗ್ಗೆಯೂ ಗೌರವ ಇಲ್ಲ' ಎಂದು ಟೀಕಿಸಿದರು.

17ರಿಂದ ಬ್ರಾಹ್ಮಣ ಮಹಾ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸುವರ್ಣ ಸಂಭ್ರಮದ ಅಂಗವಾಗಿ ಜನವರಿ 17ರಿಂದ 19ರವರೆಗೆ ಅರಮನೆ ಮೈದಾನದ ತ್ರಿಪುರವಾಸಿನಿ ಸಭಾಂಗಣದಲ್ಲಿ 'ವಿಶ್ವಾಮಿತ್ರ' ಎಂಬ ಘೋಷವಾಕ್ಯದಡಿಯಲ್ಲಿ ಬ್ರಾಹ್ಮಣ ಮಹಾ ಸಮ್ಮೇಳನ ನಡೆಯಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ, 'ಮೂರು ದಿನ ನಡೆಯುವ ಸಮ್ಮೇಳನದಲ್ಲಿ ರಾಜ್ಯದಲ್ಲಿ ಅಗ್ನಿಹೋತ್ರ ಮಾಡುವ 18 ಮಂದಿಯನ್ನು ಗೌರವಿಸಲಾಗುವುದು. ಪಾವಗಡ ಪ್ರಕಾಶರಾವ್ ನೇತೃತ್ವದಲ್ಲಿ ಸನಾತನ ಧರ್ಮಕ್ಕೆ ಆಚಾರ್ಯತ್ರಯರ ಕೊಡುಗೆಗಳ ಬಗ್ಗೆ ವಿಚಾರಗೋಷ್ಠಿ ನಡೆಯಲಿದೆ. ಆಹಾರ ಮೇಳ, ವಾಣಿಜ್ಯ ಮೇಳವೂ ನಡೆಯಲಿದೆ. 150ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ. ಕಲಾವಿದರಿಂದ ವಿವಿಧ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಪ್ರಜ್ವಲ್ ರೇವಣ್ಣ ಖುದ್ದು ಹಾಜರಿ ವಿನಾಯಿತಿಗೆ ಕೋರ್ಟ್ ನಕಾರ

ಬೆಂಗಳೂರು: 'ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಖುದ್ದು ಹಾಜರುಪಡಿಸುವ ಬದಲು ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಲು ಅವಕಾಶ ನೀಡಬೇಕು'ಎಂಬ, ಮಹಿಳೆಯರ ಮೇಲಿನ ಅತ್ಯಾಚಾರ ಆರೋಪ ಎದುರಿಸುತ್ತಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಮನವಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಳ್ಳಿ ಹಾಕಿದೆ.

ಈ ಕುರಿತಂತೆ ವಿಚಾರಣೆ ನಡೆಸುತ್ತಿರುವ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಸೆಷನ್ಸ್ ನ್ಯಾಯಾಲಯಕ್ಕೆ ಪ್ರಜ್ವಲ್ ಪರ ವಕೀಲರು ಸೋಮವಾರ ಮನವಿ ಮಾಡಿದರು.

ಪ್ರಜ್ವಲ್ ಪರ ವಕೀಲ ಜಿ.ಅರುಣ್, 'ಪ್ರಜ್ವಲ್ ಕೋರ್ಟ್‌ಗೆ ಖುದ್ದು ಹಾಜರಾದರೆ, ಮಾಧ್ಯಮದವರು ಉತ್ಪ್ರೇಕ್ಷಿಸಿ ವರದಿ ಮಾಡುತ್ತಾರೆ' ಎಂದು ಆಕ್ಷೇಪಿಸಿದರು. ಅಂತೆಯೇ, 'ಕೇಸಿಗೆ ಸಂಬಂಧಿಸಿದ ಸಿಡಿಆರ್ (ಕಾಲ್ ಡೀಟೆಲ್ಸ್ ರೆಕಾರ್ಡ್) ಅನ್ನು ಪ್ರಾಸಿಕ್ಯೂಷನ್ ಒದಗಿಸಿಲ್ಲ' ಎಂದೂ ದೂರಿದರು.

ಇದನ್ನು ತಳ್ಳಿ ಹಾಕಿದ ಪ್ರಾಸಿಕ್ಯೂಷನ್ ವಕೀಲ, ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಈಗಿಂದೀಗಲೇ ಸಿಡಿಆರ್ ದಾಖಲೆಗಳನ್ನು ಮತ್ತೊಮ್ಮೆ ಒದಗಿಸುವುದಾಗಿ ತಿಳಿಸಿ ಅದನ್ನು ಅರುಣ್ ಅವರಿಗೆ ನೀಡಿದರು. ಅಂತೆಯೇ, 'ಆರೋಪಿ ಕೋರ್ಟ್‌ಗೆ ಖುದ್ದು ಹಾಜರಾಗುವುದಕ್ಕೆ ವಿನಾಯತಿ ನೀಡಿ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಲು ಅವಕಾಶ ನೀಡಬಾರದು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು, ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿ ಆದೇಶಿಸಿದರು. ಪ್ರಜ್ವಲ್ ರೇವಣ್ಣ ಅವರನ್ನು ನ್ಯಾಯಾಲಯಕ್ಕೆ ಖುದ್ದು ಹಾಜರುಪಡಿಸಲಾಗಿತ್ತು.



'ಏಪ್ರಿಲ್, ಮೇ ತಿಂಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ'

ಬೆಳಗಾವಿ: 'ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯನ್ನು ಇದೇ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಘೋಷಣೆ ಮಾಡಲಾಗುವುದು' ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಹೇಳಿದರು.

'ರಾಜ್ಯದಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮರು ವಿಂಗಡಣೆ ಕಾರಣ ಚುನಾವಣೆ ವಿಳಂಬವಾಗಿವೆ. ಕ್ಷೇತ್ರವಾರು ಮೀಸಲಾತಿಯನ್ನು ಪ್ರಕಟಿಸಿದ ತಕ್ಷಣ ಚುನಾವಣೆ ಘೋಷಿಸಲಾಗುವುದು. ವಿದ್ಯುನ್ಮಾನ ಮತಪೆಟ್ಟಿಗೆ ಬದಲು ಮತಪತ್ರಗಳನ್ನೇ ಬಳಸುವ ಉದ್ದೇಶವಿದ್ದು, ಅಂತಿಮ ನಿರ್ಣಯ ಕೈಗೊಳ್ಳಲಾಗುವುದು' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಪ್ರತಿ ಸಲ ಚುನಾವಣೆ ಮುಗಿದ ಬಳಿಕ ಇವಿಎಂ ಯಂತ್ರಗಳ ವಿಶ್ವಾಸಾರ್ಹತೆ ಪ್ರಶ್ನಿಸಲಾಗುತ್ತದೆ. ರಾಜಕೀಯ ಪಕ್ಷಗಳ ನಾಯಕರು ಮತ್ತು ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ, ಮತಪತ್ರಗಳ ಬಳಕೆ ಬಗ್ಗೆ ತೀರ್ಮಾನಿಸಲಾಗುವುದು' ಎಂದರು.

'ಬೆಳಗಾವಿ ಜಿಲ್ಲೆಯಲ್ಲಿ 91 ಜಿಲ್ಲಾ ಪಂಚಾಯಿತಿ ಮತ್ತು 301 ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳನ್ನು ಮರು ವಿಂಗಡಣೆ ಮಾಡಲಾಗಿದೆ. ಹೊಸದಾಗಿ 7 ಪಟ್ಟಣ ಪಂಚಾಯಿತಿಗಳು ರಚನೆಯಾಗಿದ್ದು, ಈ ಚುನಾವಣೆಗಳನ್ನೂ ಇದೇ ವೇಳೆ ನಡೆಸುವ ಸಾಧ್ಯತೆ ಇದೆ' ಎಂದರು.



ರಥೋತ್ಸವ

ಬಾಗಲಕೋಟೆ ಜಿಲ್ಲೆ ಬಾದಾಮಿ ಸಮೀಪದ ಬನಶಂಕರಿದೇವಿ ರಥೋತ್ಸವವು ಸೋಮವಾರ ಸಂಭ್ರಮದಿಂದ ನಡೆಯಿತು. ಭಕ್ತರು ಉತ್ತತ್ತಿ, ಬಾಳೆಹಣ್ಣು ಎಸೆದು ಭಕ್ತಿ ಅರ್ಪಿಸಿದರು
ಚಿತ್ರ: ರಾಜು ಅಮಿತ್

ಗುತ್ತಿಗೆದಾರರಿಗೆ ₹30 ಸಾವಿರ ಕೋಟಿ ಬಿಲ್ ಪಾವತಿ ಬಾಕಿ

ಡಿಸಿಎಂ ಸೇರಿ 7 ಸಚಿವರಿಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ₹30 ಸಾವಿರ ಕೋಟಿ ಬಿಲ್ ಪಾವತಿ ಸೇರಿದಂತೆ ಹಲವು ಸಮಸ್ಯೆಗಳನ್ನು ಈಡೇರಿಸುವಂತೆ ವಾರದ ಗಡುವು ನೀಡಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಏಳು ಸಚಿವರಿಗೆ ರಾಜ್ಯ ಗುತ್ತಿಗೆದಾರರ ಸಂಘ ಪತ್ರ ಬರೆದಿದೆ.

ಜಲ ಸಂಪನ್ಮೂಲ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್, ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ, ಪೌರಾಡಳಿತ ಸಚಿವ ರಹೀಂ ಖಾನ್ ಅವರಿಗೆ ಜನವರಿ 9ರಂದು ಪತ್ರ ಬರೆಯಲಾಗಿದೆ.

'ರಾಜ್ಯ ಗುತ್ತಿಗೆದಾರರ ಕುಂದುಕೊರತೆ ಮತ್ತು ಬಾಕಿ ಬಿಲ್ ಪಾವತಿ ವಿಳಂಬಕ್ಕೆ ಸಂಬಂಧಿಸಿದ ವಿಷಯಗಳನ್ನು ಹಲವು ಬಾರಿ ನಿಮ್ಮ ಗಮನಕ್ಕೆ ತಂದಿದ್ದೇವೆ. ಆದರೆ ಇದುವರೆಗೂ ತಾವು ಒಂದು ಪತ್ರವನ್ನೂ ಬರೆದಿಲ್ಲ. ಆದ್ದರಿಂದ ತಾವೂ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲು ಸಭೆ ಕರೆಯಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.



ಡಿ.ಕೆ. ಶಿವಕುಮಾರ್

'ಪತ್ರ ತಲುಪಿದ ಏಳು ದಿನಗಳಲ್ಲಿ ಸಭೆ ಕರೆದು ಗುತ್ತಿಗೆದಾರರಿಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಈ ವಿಷಯವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಮುಂದಿನ ಹೋರಾಟ ಆರಂಭಿಸಲಾಗುವುದು' ಎಂದು ರಾಜ್ಯ ಗುತ್ತಿಗೆದಾರ ಸಂಘದ ಅಧ್ಯಕ್ಷ ಜಗನ್ನಾಥ್ ಬಿ. ಶೇಗಜಿ ಹಾಗೂ ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ಪತ್ರದಲ್ಲಿ ತಿಳಿಸಿದ್ದಾರೆ.

'ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಅವರು ಗುತ್ತಿಗೆದಾರರೊಂದಿಗೆ ಜ.9ರಂದು ಸಭೆ ನಡೆಸಿ, ಇಲಾಖೆಯಲ್ಲಿ ಬಾಕಿಯಿರುವ ಬಿಲ್‌ಗಳನ್ನು 2023ರ ಮಾರ್ಚ್‌ವರೆಗೆ ಜೇಷ್ಠತೆ ಆಧಾರದಲ್ಲಿ ಪಾವತಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದರು. ಹೀಗಾಗಿ, ಗುತ್ತಿಗೆದಾರರು ಅವರಿಗೆ ಪತ್ರ ಬರೆದಿಲ್ಲ' ಎಂದು ಸಂಘದ ಕಾರ್ಯಾಧ್ಯಕ್ಷ ಆರ್. ಮಂಜುನಾಥ್ ಹೇಳಿದರು.

'ಏಳು ಇಲಾಖೆಗಳಲ್ಲಿ ₹30 ಸಾವಿರ ಕೋಟಿಗೂ ಹೆಚ್ಚು ಬಿಲ್ ಬಾಕಿ ಉಳಿದಿದ್ದು, ಆಯಾ ಸಚಿವರಿಗೆ ಪತ್ರ ಬರೆಯಲಾಗಿದೆ. ಅಧಿಕಾರಿಗಳನ್ನು ಕೇಳಿದರೆ, ಸಚಿವರನ್ನು ಭೇಟಿ ಮಾಡಲು ಹೇಳುತ್ತಾರೆ. ಸಚಿವರು ಕೊಟ್ಟ ಪಟ್ಟಿಯ ಪ್ರಕಾರ ಜೇಷ್ಠತೆಯನ್ನು ಕಡೆಗಣಿಸಿ ಹಣ ಪಾವತಿ ಮಾಡಲಾಗುತ್ತಿದೆ. ಇದರಿಂದ ಎಲ್ಲ ಗುತ್ತಿಗೆದಾರರಿಗೆ ಅನ್ಯಾಯ ಆಗುತ್ತಿದೆ ಎಂಬುದನ್ನು ಸಚಿವರ ಗಮನಕ್ಕೆ ತಂದಿದ್ದೇವೆ. ಸ್ಪಂದಿಸದಿದ್ದರೆ ಹೋರಾಟ ಅನಿವಾರ್ಯವಾಗುತ್ತದೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ತಿಳಿಸಿದರು.

ಜಯಲಲಿತಾ: ಚಿನ್ನಾಭರಣ ವಾಪಸು ಕೋರಿದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಜಯಲಲಿತಾ ವಿರುದ್ಧದ ಅಕ್ರಮ ಆಸ್ತಿ ಗಳಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ವಶಕ್ಕೆ ಪಡೆಯಲಾಗಿದ್ದ ಬಹುಕೋಟಿ ಮೌಲ್ಯದ ಚಿನ್ನಾಭರಣ ಸೇರಿದಂತೆ ಇತರೆ ವಸ್ತುಗಳನ್ನು ಕಾನೂನುಬದ್ಧ ವಾರಸುದಾರರಾದ ನಮಗೇ ಮರಳಿಸು ವಂತೆ ನಿರ್ದೇಶಿಸಬೇಕು' ಎಂದು ಅವರ ಪರ ವಾರಸುದಾರರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ದಿವಂಗತ ಜಯಲಲಿತಾ ಸಹೋದರ ಜಯಕುಮಾರ್ ಮಕ್ಕಳಾದ ಜೆ.ದೀಪಕ್ ಮತ್ತು ಜೆ.ದೀಪಾ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಗಳನ್ನು ನ್ಯಾ. ವಿ.ಶ್ರೀಶಾನಂದ ಅವರಿದ್ದ ಪೀಠವು ವಜಾಗೊಳಿಸಿ ಆದೇಶಿಸಿದೆ.

'ಆಸ್ತಿ ಮತ್ತು ಚಿನ್ನಾಭರಣ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸುಪ್ರೀಂ ಕೋರ್ಟ್ ಈಗಾಗಲೇ ಪುಷ್ಟೀಕರಿಸಿದ್ದು, ಅರ್ಜಿದಾರರು ಕೇಳಿರುವ ಲಗತ್ತಿನ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಅರ್ಜಿದಾರರು ಜಯಲಲಿತಾ ವಾರಸುದಾರರೇ ಇರಬಹುದು. ಆದರೆ, ಈ ಹಿಂದೆ ಎಂದೂ ಅವರು ನ್ಯಾಯಾಲಯದ ಮುಂದೆ ಬಂದಿಲ್ಲ. ವಶಪಡಿಸಿಕೊಳ್ಳದೇ ಇರುವ ವಸ್ತುಗಳನ್ನು ಮರಳಿಸುವಂತೆ ಕೋರಿದ್ದಾರೆ. ಆದರೆ, ಅವುಗಳಿಗೆ ಯಾವುದೇ ಆಧಾರವಿಲ್ಲ. ಹೀಗಾಗಿ, ಈ ಅರ್ಜಿಗಳನ್ನು ಪರಿಗಣಿಸಲಾಗದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.



ಕೋರಿಕೆ ಏನಿತ್ತು?: 'ಜಯಲಲಿತಾ ಅವರಿಗೆ ಸೇರಿದ ಚಿನ್ನಾಭರಣ ಮತ್ತು ಇತರ ವಸ್ತುಗಳನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸುವಂತೆ ನಗರದ 36ನೇ ಹೆಚ್ಚುವರಿ ಸಿಸಿಎಚ್ ಕೋರ್ಟ್‌ನ ವಿಶೇಷ ನ್ಯಾಯಾಲಯ 2023ರ ಜುಲೈ 12ರಂದು ಆದೇಶಿಸಿದೆ. ಈ ಆದೇಶವನ್ನು ರದ್ದುಗೊಳಿಸಿ ಜಯಲಲಿತಾರ ಕಾನೂನುಬದ್ಧ ವಾರಸುದಾರರಾಗಿರುವ ನಮಗೇ ಎಲ್ಲ ಚಿನ್ನಾಭರಣಗಳನ್ನು ಹಸ್ತಾಂತರಿಸಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಕಲಬುರ್ಗಿ ಹತ್ಯೆ ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧಕ ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣದ ಮೂವರು ಆರೋಪಿಗಳಿಗೆ ಧಾರವಾಡ ಜಿಲ್ಲಾ ನ್ಯಾಯಾಲಯ ಇತ್ತೀಚೆಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಪ್ರಕರಣದ ಒಂದನೇ ಆರೋಪಿ ಪುಣೆಯ ಚಿಂಚವಾಡಾದ ಅಮೋಲ್ ಎ.ಕಾಳೆ, ಎರಡನೇ ಆರೋಪಿಯಾದ ಹುಬ್ಬಳ್ಳಿಯ ಗಣೇಶ್ ಮಿಸ್ಕಿನ್ ಮತ್ತು ಐದನೇ ಆರೋಪಿ ಮಹಾರಾಷ್ಟ್ರದ ಸಂಭಾಜಿ ನಗರದ (ಔರಂಗಾಬಾದ್) ಶರದ್ ಕಲಾಸ್ಕರ್ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡದ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಪೂರ್ಣಿಮಾ ಎನ್.ಪೈ ಪುರಸ್ಕರಿಸಿದ್ದಾರೆ.

'ಪ್ರಕರಣದ ಮೂರನೇ ಆರೋಪಿ ಪ್ರವೀಣ್, ನಾಲ್ಕನೇ ಆರೋಪಿ ವಾಸುದೇವ್ ಸೂರ್ಯವಂಶಿ, ಆರನೇ ಆರೋಪಿ ಅಮಿತ್ ಬಡ್ಡಿ ಅವರಿಗೆ ಹೈಕೋರ್ಟ್ ಈಗಾಗಲೇ ಜಾಮೀನು ಮಂಜೂರು ಮಾಡಿದೆ. ಪ್ರಕರಣದ ವಿಚಾರಣೆ ಶೀಘ್ರದಲ್ಲೇ ಮುಗಿಯುವ ಸಾಧ್ಯತೆಯೂ ಕಾಣುತ್ತಿಲ್ಲ. ಅರ್ಜಿದಾರರು ಜಾಮೀನು ಪಡೆಯಲು ಸೂಕ್ತ ಕಾರಣಗಳನ್ನು ನೀಡಿದ್ದಾರೆ' ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ವಿವರಿಸಿದೆ.

ಧಾರವಾಡದ ಕಲ್ಯಾಣನಗರದಲ್ಲಿ 2015ರ ಆಗಸ್ಟ್ 30ರಂದು ಬೆಳಿಗ್ಗೆ ಶರದ್ ಕಲಾಸ್ಕರ್ ಜೊತೆ ಬೈಕಿನಲ್ಲಿ ಬಂದಿದ್ದ ಗಣೇಶ್ ಮಿಸ್ಕಿನ್, ಕಲಬುರ್ಗಿ ಅವರಿಗೆ ಗುಂಡು ಹಾರಿಸಿ ಕೊಲೆ ಮಾಡಿ ಪರಾರಿಯಾಗಿದ್ದರು' ಎಂದು ಆರೋಪಿಸಿ ಕಲಬುರ್ಗಿ ಅವರ ಪುತ್ರಿ ರೂಪದರ್ಶಿ ನೀಡಿದ ದೂರಿನ ಮೇರೆಗೆ ಧಾರವಾಡದ ವಿದ್ಯಾಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



'ಕೋವಿಡ್: ಸಾರಿಗೆ ನೌಕರರ ಕುಟುಂಬಕ್ಕೆ ದಕ್ಕದ ಪರಿಹಾರ'

ಬೆಂಗಳೂರು: 'ಕೊರೊನಾ ಸೋಂಕಿನಿಂದ ಮೃತಪಟ್ಟಿರುವ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ನೌಕರರ ಕುಟುಂಬದ ಸದಸ್ಯರಿಗೆ ತಲಾ ₹30 ಲಕ್ಷ ಪರಿಹಾರ ನೀಡುವುದಾಗಿ ಹೇಳಿದ್ದ ರಾಜ್ಯ ಸರ್ಕಾರ ಇದುವರೆಗೂ ಹಣ ಬಿಡುಗಡೆ ಮಾಡಿಲ್ಲ' ಎಂದು ಅರ್ಜಿದಾರರ ಪರ ವಕೀಲರು ಹೈಕೋರ್ಟ್‌ಗೆ ಮೌಖಿಕ ಆಕ್ಷೇಪಣೆ ಸಲ್ಲಿಸಿದರು.

ಈ ಸಂಬಂಧ ಹರಿಹರದ ತಾಹಿರ್ ಹುಸೇನ್ ಮತ್ತು ರಾಯಚೂರಿನ ಅಜೀಜ್ ಪಾಷಾ ಜಾಗೀರದಾರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಉಸ್ಮಾನ್, 'ಕೋವಿಡ್ ಸಂದರ್ಭದಲ್ಲಿ ಮೃತರಾದ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ನೌಕರರ ಕುಟುಂಬಕ್ಕೆ ನೀಡುವುದಾಗಿ ಹೇಳಿದ್ದ ₹30 ಲಕ್ಷ ಪರಿಹಾರವನ್ನು ಇನ್ನೂ ನೀಡಿಲ್ಲ' ಎಂದು ಆಕ್ಷೇಪಿಸಿದರು. ವಾದ ಆಲಿಸಿದ ಪೀಠ ಇದೇ 27ಕ್ಕೆ ವಿಚಾರಣೆ ಮುಂದೂಡಿತು.

ನೇಮಕಾತಿ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ, ಒಎಂಆರ್ ಶೀಟ್ ತಿದ್ದುವಿಕೆಗೆ ಕಡಿವಾಣ

ಅಕ್ರಮ ತಡೆಗೆ ಸರ್ಕಾರ 'ಸಿಬಿಟಿ' ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ವೃಂದಗಳ ಹುದ್ದೆಗಳಿಗೆ ನೇಮಕಾತಿ ಮತ್ತು ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ, ಒಎಂಆರ್ (ಆಪ್ಟಿಕಲ್ ಮಾರ್ಕ್ಸ್ ರೆಕಗ್ನಿಷನ್) ಶೀಟ್ ತಿದ್ದುವುದು ಸೇರಿದಂತೆ ನಡೆಯುವ ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಹಾಕಲು 'ಕಂಪ್ಯೂಟರ್ ಆಧಾರಿತ ಪರೀಕ್ಷೆ' (ಸಿಬಿಟಿ) ಪದ್ಧತಿಯನ್ನು ಅಳವಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಕುರಿತಂತೆ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕನಿರ್ದೇಶಕ, ಶಿಕ್ಷಕರ ಅರ್ಹತಾ ಪರೀಕ್ಷೆ ನಡೆಸುವ ಪರೀಕ್ಷಾ ಮೌಲ್ಯಮಾಪನ ಮಂಡಳಿಯ ಮುಖ್ಯಸ್ಥರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಪತಿಯನ್ನು ಒಳಗೊಂಡ ಸಮಿತಿಯು 15 ದಿನಗಳ ಒಳಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಕಾರ್ಯಸಾಧ್ಯತಾ ವರದಿ ಸಲ್ಲಿಸಲಿದೆ.

ಮುಖ್ಯಾಂಶಗಳು


- ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲು ಸೂಚನೆ
- ಕಾರ್ಯಸಾಧ್ಯತಾ ವರದಿ 15 ದಿನಗಳ ಒಳಗೆ ಸಲ್ಲಿಕೆ
- ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಮೂಲಸೌಲಭ್ಯ ಮಾಹಿತಿ ಸಂಗ್ರಹ

ನೇಮಕಾತಿ ಪ್ರಾಧಿಕಾರಗಳು ಇತ್ತೀಚಿನ ದಿನಗಳಲ್ಲಿ ನಡೆಸುತ್ತಿರುವ ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳನ್ನು ಗಂಭೀರವಾಗಿ ಪರಿಗಣಿಸಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರು ಕೆಪಿಎಸ್‌ಸಿ ಕಾರ್ಯದರ್ಶಿ, ಕೆಇಎ ಕಾರ್ಯನಿರ್ವಾಹಕ ನಿರ್ದೇಶಕರೂ ಸೇರಿದಂತೆ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಪರೀಕ್ಷೆಗಳನ್ನು ಪಾರದರ್ಶಕ ಮತ್ತು ನ್ಯಾಯಸಮ್ಮತ ರೀತಿಯಲ್ಲಿ ಆಯೋಜಿಸಲು ಕ್ರಮ ಕೈಗೊಳ್ಳುವ ಅಗತ್ಯ ಮತ್ತು ಹೊಸ ಪದ್ಧತಿಯನ್ನು ಜಾರಿಗೊಳಿಸುವ ಕುರಿತು ಸಮಾಲೋಚನೆ ನಡೆಸಿದ್ದಾರೆ. ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ 'ನೀಟ್–ಯುಜಿ' ಪರೀಕ್ಷೆಯ ಅಕ್ರಮಗಳ ಕುರಿತು ತನಿಖೆ ನಡೆಸಿದ್ದ ಸಮಿತಿ ಕೂಡಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕಂಪ್ಯೂಟರ್ ಆಧಾರಿತವಾಗಿ ನಡೆಸುವಂತೆ ಸಲಹೆ ನೀಡಿದೆ. ಹೀಗಾಗಿ, ವಿವಿಧ ವೃಂದಗಳ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಾಧಿಕಾರಗಳು ಏಕೀಕೃತ ಕಂಪ್ಯೂಟರ್ ಆಧಾರಿತ ಆನ್‌ಲೈನ್ ಪರೀಕ್ಷೆ ನಡೆಸಲು, ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಮತ್ತು ಇಲಾಖಾ ಪರೀಕ್ಷೆಗಳಿಗೂ ಇದೇ ಮಾದರಿಯನ್ನು ಅಳವಡಿಸಲು ನಿರ್ಧರಿಸಲಾಗಿದೆ. ಈ ಪದ್ಧತಿ ಅನುಷ್ಠಾನಗೊಳಿಸಲು ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕಿದೆ. ಜೊತೆಗೆ ಪರೀಕ್ಷಾ ಕೇಂದ್ರಗಳಿಗೆ ಹೆಚ್ಚಿನ ಮೂಲ ಸೌಲಭ್ಯವನ್ನು ಒದಗಿಸಬೇಕಿದೆ.



ಪರೀಕ್ಷೆಗಳಲ್ಲಿ ಹಂತ ಹಂತವಾಗಿ ಸಿಬಿಟಿ ವ್ಯವಸ್ಥೆ ಅಳವಡಿಸಲು ಚರ್ಚೆ ನಡೆದಿದ್ದು, ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿರುವ ಮೂಲಸೌಲಭ್ಯಗಳ ಕುರಿತು ವರದಿ ನೀಡಲಾಗುವುದು

ಎಚ್. ಪ್ರಸನ್ನ
ಕೆಇಎ, ಕಾರ್ಯನಿರ್ವಾಹಕ ನಿರ್ದೇಶಕ



ಹಲವು ಖಾಸಗಿ ಏಜೆನ್ಸಿಗಳು ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ನಡೆಸುತ್ತಿವೆ. ಈ ಏಜೆನ್ಸಿಗಳ ಬಳಿ ಅಂತಹ ತಂತ್ರಾಂಶವಿದೆ. ಅದೇ ಮಾದರಿಯಲ್ಲಿ ಇ– ಆಡಳಿತ ಮತ್ತು ರಾಷ್ಟ್ರೀಯ ದತ್ತಾಂಶ ನಿರ್ವಹಣಾ ಕೇಂದ್ರದ (ಎನ್‌ಐಸಿ) ಸಹಭಾಗಿತ್ವದಲ್ಲಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಲಾಗಿದೆ. ಜೊತೆಗೆ, ಎಂಜಿನಿಯರಿಂಗ್, ಬಿಸಿಎ, ಎಂಸಿಎ ಕೋರ್ಸ್ ಇರುವ ಶಿಕ್ಷಣ ಸಂಸ್ಥೆಗಳಲ್ಲಿರುವ ಮೂಲಸೌಲಭ್ಯ ವ್ಯವಸ್ಥೆಯ ಬಗ್ಗೆ ಮಾಹಿತಿ ಸಂಗ್ರಹಿಸಿದ ನಂತರ ಸಿಬಿಟಿ ಪದ್ಧತಿ ಜಾರಿಗೆ ತರಲು ತೀರ್ಮಾನಿಸಲಾಗಿದೆ.

ರಾಜ್ಯದಲ್ಲಿ ಖಾಸಗಿ, ಸರ್ಕಾರಿ, ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳ ಪೈಕಿ ಶೇ 80ರಲ್ಲಿ ಕಂಪ್ಯೂಟರ್ ವಿಭಾಗಗಳಿವೆ. ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿ ಕಂಪ್ಯೂಟರ್ ಇರಬೇಕು ಎಂಬ ನಿಯಮವನ್ನು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು (ಎಐಸಿಟಿಇ) ರೂಪಿಸಿದೆ. ಹೀಗಾಗಿ, ರಾಜ್ಯದಲ್ಲಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಪರೀಕ್ಷಾ ಕೇಂದ್ರಗಳಾಗಿ ಬಳಸಿಕೊಂಡು ಸಿಬಿಟಿ ಮಾದರಿ ಅಳವಡಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ.

'ಕೆಇಎ ಇತ್ತೀಚೆಗೆ ನಡೆಸಿರುವ 15 ಪರೀಕ್ಷೆಗಳಲ್ಲಿ ಎಂಟು ಪರೀಕ್ಷೆಗಳಲ್ಲಿ 25 ಸಾವಿರಕ್ಕೂ ಕಡಿಮೆ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ದೊಡ್ಡ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಕೆ ಆಗದ ಹುದ್ದೆಗಳಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ನಡೆಸಿ, ಮುಂದಿನ ದಿನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅರ್ಜಿ ಸಲ್ಲಿಕೆಯಾಗುವ ಹುದ್ದೆಗಳ ನೇಮಕಾತಿಗೆ ನಡೆಸುವ ಪರೀಕ್ಷೆಗಳಿಗೆ ಸಿಬಿಟಿ ಪದ್ಧತಿ ಅಳವಡಿಸುವ ಕುರಿತು ಚರ್ಚೆ ನಡೆದಿದೆ. ಈ ವ್ಯವಸ್ಥೆಯಿಂದ ಪರೀಕ್ಷೆಗಳನ್ನು ನಡೆಸಲು ತಗಲುವ ವೆಚ್ಚವೂ ಕಡಿಮೆ ಆಗಲಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದರು.

ಹುದ್ದೆ ಭರ್ತಿ: ಕೆಪಿಟಿಸಿಎಲ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿನ (ಕೆಪಿಟಿಸಿಎಲ್) ಜ್ಯೂನಿಯರ್ ಪವರ್ ಆಪರೇಟರ್ ಹಾಗೂ ಜ್ಯೂನಿಯರ್ ಪವರ್ ಮ್ಯಾನ್ ಹುದ್ದೆಗಳನ್ನು ನೇರ ನೇಮಕಾತಿ ವಿಧಾನದ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೆಪಿಟಿಸಿಎಲ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, 'ಆಲ್ ಕರ್ನಾಟಕ ಸ್ಟೇಟ್ ಸ್ಟೂಡೆಂಟ್ಸ್ ಅಸೋಸಿಯೇಷನ್' ಅಧ್ಯಕ್ಷ ಆರ್.ಕಾಂತಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಎಸ್. ಸುಶೀಲಾ ಅವರ ವಾದ ಆಲಿಸಿದ ನ್ಯಾಯಪೀಠ, 'ನೇಮಕಾತಿಗೆ ಯಾವ ಪ್ರಕ್ರಿಯೆ ಅಥವಾ ವಿಧಾನ ಅನುಸರಿಸಲಾಗುತ್ತಿದೆ ಎಂಬುದರ ಬಗ್ಗೆ ವಿವರಣೆ ನೀಡಿ' ಎಂದು ಕೆಪಿಟಿಸಿಎಲ್‌ಗೆ ಸೂಚಿಸಿ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು. ವಕೀಲ ಜಿ.ಸುಹಾಸ್ ವಕಾಲತ್ತು ವಹಿಸಿದ್ದಾರೆ.

ಕೋರಿಕೆ ಏನು?: 'ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಡೆದ ಗರಿಷ್ಠ ಅಂಕಗಳ ಆಧಾರದಲ್ಲಿ ನೇರ ನೇಮಕಾತಿ ಮಾಡಿಕೊಳ್ಳುವ ಅಧಿಸೂಚನೆಯನ್ನು ರದ್ದುಪಡಿಸಬೇಕು. ನೇಮಕಾತಿ ಪ್ರಕ್ರಿಯೆ ಮರು ಪರಿಗಣಿಸುವಂತೆ ಕೆಪಿಟಿಸಿಎಲ್‌ಗೆ ನಿರ್ದೇಶಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ ನಡೆಸುವ ಪಂಜಾಬ್ ಹಾಗೂ ತೆಲಂಗಾಣ ರಾಜ್ಯಗಳ ವಿದ್ಯುತ್ ನಿಗಮಗಳ ವಿಧಾನವನ್ನು ಅಳವಡಿಸಿಕೊಳ್ಳುವಂತೆ ರಾಜ್ಯ ಸರ್ಕಾರ ಮತ್ತು ಕೆಪಿಟಿಸಿಎಲ್‌ಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಮಂಗಳವಾರ, ಜನವರಿ 14, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಸ್ಮರಣಶಕ್ತಿ ಕುಂಠಿತವಾಗುತ್ತಿರುವುದು ಅನುಭವಕ್ಕೆ ಬಂದರೆ ನಿರ್ಲಕ್ಷ್ಯ ಮಾಡಬೇಡಿ



ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಉತ್ಸವಕ್ಕೆ ವಿಧ್ಯುಕ್ತ ಚಾಲನೆ • ಎಲ್ಲೆಡೆಯಿಂದ ಹರಿದು ಬಂದ ಭಕ್ತಸಾಗರ

ಮಹಾಕುಂಭ: ಭಕ್ತರ ಮಹಾಸಂಗಮ

ಪ್ರಜಾವಾಣಿ ವಾರ್ತೆ/ಪಿಟಿಐ

ಮಹಾಕುಂಭ ನಗರ/ ಲಖನೌ (ಉತ್ತರ ಪ್ರದೇಶ): ಆಧ್ಯಾತ್ಮಿಕತೆ ಮತ್ತು ನಂಬಿಕೆ, ಸಂಸ್ಕೃತಿ ಮತ್ತು ಧರ್ಮ ಹಾಗೂ ಸಂಪ್ರದಾಯ ಮತ್ತು ಆಧುನಿಕ ತಂತ್ರಜ್ಞಾನವು ಪ್ರಯಾಗ್‌ರಾಜ್‌ನ ಸಂಗಮದಲ್ಲಿ (ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಕೂಡುವ ಸ್ಥಳ) ಒಂದಾಗಿ ಬೆಸೆದುಕೊಂಡಿದೆ.

12 ವರ್ಷಗಳ ಬಳಿಕ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಸೋಮವಾರ ವಿಧ್ಯುಕ್ತ ಆರಂಭ ಲಭಿಸಿದ್ದು, ಮುಂದಿನ 45 ದಿನಗಳಲ್ಲಿ 40 ಕೋಟಿಗೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಹಿಂದೂ ಸಂತರ ವೇಷ ಧರಿಸಿದ ವಿದೇಶಿ ಭಕ್ತರ ಉಪಸ್ಥಿತಿಯು ಕುಂಭಮೇಳದ ಆಕರ್ಷಣೆ ಮಾತ್ರವಲ್ಲದೆ, ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಉತ್ಸವದ ದೈವಿಕ ಪ್ರಭೆಯನ್ನು ಹೆಚ್ಚಿಸಿದೆ.

> **ಭಾರತೀಯ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಪಾಲಿಸುವ ಕೋಟ್ಯಂತರ ಮಂದಿಗೆ ಇದು ವಿಶೇಷವಾದ ದಿನ**
> **ನರೇಂದ್ರ ಮೋದಿ**
> ಪ್ರಧಾನಿ

ಫ್ರಾನ್ಸ್, ಅಮೆರಿಕ, ದಕ್ಷಿಣ ಆಫ್ರಿಕಾ, ರಷ್ಯಾ, ಉಕ್ರೇನ್, ಬ್ರೆಜಿಲ್, ಇಟಲಿ ಮತ್ತು ಸ್ಪೇನ್ ಒಳಗೊಂಡಂತೆ ವಿವಿಧ ದೇಶಗಳ ಪುರುಷ ಹಾಗೂ ಮಹಿಳಾ ಭಕ್ತರು ಸೋಮವಾರ ಪವಿತ್ರ ಸ್ನಾನ ಮಾಡಿದರು.

ಈಗ 'ಬಾಬಾ ಮೋಕ್ಷಪುರಿ' ಎಂಬ ಹೆಸರಿನಿಂದ ಕರೆಯಲಾಗುವ ಅಮೆರಿಕದ ಮಾಜಿ ಸೈನಿಕ ಮೈಕಲ್, ಇದೇ ಮೊದಲ ಬಾರಿ ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಿದರು.

'ನಾನು ಎಲ್ಲರಂತೆಯೇ ಕುಟುಂಬವನ್ನು ಹೊಂದಿರುವ ಸಾಮಾನ್ಯ ವ್ಯಕ್ತಿಯಾಗಿದ್ದೆ. ಆದರೆ ಜೀವನದಲ್ಲಿ ಯಾವುದೂ ಶಾಶ್ವತವಲ್ಲ ಎಂಬುದನ್ನು ಅರಿತುಕೊಂಡೆ. ಮೋಕ್ಷಕ್ಕಾಗಿ ಹುಡುಕಾಟ ಪ್ರಾರಂಭಿಸಿದೆ. ಈಗ ಸನಾತನ ಧರ್ಮದ ಪ್ರಚಾರಕ್ಕೆ ಜೀವನ ಮುಡಿಪಾಗಿಟ್ಟಿದ್ದೇನೆ' ಎಂದರು.

'ಇದೊಂದು ಅದ್ಭುತ ಕ್ಷಣ. ಇಂತಹ ಕಾರ್ಯಕ್ರಮವನ್ನು ಹಿಂದೆಂದೂ ನೋಡಿಯೇ ಇಲ್ಲ' ಎಂದು ಸ್ಪೇನ್‌ನ ಕ್ರಿಸ್ಟಿನಾ ಪ್ರತಿಕ್ರಿಯಿಸಿದರು.



ಮಹಾಕುಂಭ ಮೇಳದ ಮೊದಲ ದಿನವಾದ ಸೋಮವಾರ ಪವಿತ್ರ ಸ್ನಾನ ಮಾಡಲು ಪ್ರಯಾಗ್‌ರಾಜ್‌ನ ಸಂಗಮದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದ ಭಕ್ತರು —ಎಎಫ್‌ಪಿ ಚಿತ್ರ



ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ ವಿದೇಶಿ ಮಹಿಳೆ


'ನಾನು ಮೊದಲ ಬಾರಿಗೆ ಇಲ್ಲಿಗೆ ಬಂದಿದ್ದು, ಇದೊಂದು ಅಪೂರ್ವ ಅನುಭವವಾಗಿದೆ. ಸಂಗಮದಲ್ಲಿ ಸ್ನಾನ ಮಾಡಲು ಇಷ್ಟೊಂದು ಜನ ಇಲ್ಲಿಗೆ ಬಂದಿದ್ದಾರೆ ಎಂದರೆ ನಂಬುವುದು ಕಷ್ಟ. ಅದನ್ನು ನಂಬಲು ಇಲ್ಲಿಗೆ ಬಂದು ನೋಡಬೇಕು' ಎಂದು ರಷ್ಯಾದಿಂದ ಬಂದ ಮಹಿಳೆಯೊಬ್ಬರು ಹೇಳಿದರು. ಅವರು ಸಂಗಮದಲ್ಲಿ ಪವಿತ್ರ ಸ್ನಾನವನ್ನೂ ಮಾಡಿದರು.

13 ಆಖಾಡಾಗಳು ಭಾಗಿ: ಕುಂಭ ಮೇಳದಲ್ಲಿ ಸಾಧು ಸಂತರ 13 ಆಖಾಡಾಗಳು (ಗುಂಪು) ಭಾಗವಹಿಸಿವೆ. ನಾಗಾ–ಸಾಧುಗಳು, ಅಘೋರಿಗಳು ಸೇರಿದಂತೆ ದೇಶದಾದ್ಯಂತ ವಿವಿಧ ರಾಜ್ಯಗಳ ಸಾಧು ಸಂತರು ಈ ಕುಂಭಮೇಳದಲ್ಲಿ ಭಾಗವಹಿಸಿರುವುದು ವಿಶೇಷ.

ದೇಶದ ಹಲವು ರಾಜ್ಯಗಳಿಂದ ಬಂದ ಭಕ್ತರ ಗುಂಪು ಪ್ರಯಾಗ್‌ರಾಜ್‌ನ ವಿವಿಧ ಸ್ನಾನಘಟ್ಟಗಳಲ್ಲಿ ಕಂಡುಬಂದಿತು. ಉತ್ತರ ಪ್ರದೇಶದ ಸಿದ್ಧಾರ್ಥನಗರದಿಂದ ಬಂದ ಮಹಿಳೆಯರ ತಂಡವೊಂದು ಜನಪದ ಗೀತೆಗಳನ್ನು ಹಾಡುವುದರಲ್ಲಿ ನಿರತವಾಗಿತ್ತು.

ಜಪಾನ್ ಮತ್ತು ದಕ್ಷಿಣ ಕೊರಿಯಾದಿಂದ ಬಂದ ಯೂಟ್ಯೂಬರ್‌ಗಳು ಪ್ರಯಾಗ್ ರಾಜ್‌ನ ವಿವಿಧ ದೃಶ್ಯಗಳನ್ನು ಸೆರೆಹಿಡಿಯುವುದರಲ್ಲಿ ತೊಡಗಿದ್ದರು.

ಡಿಜಿಟಲ್ ಯುಗದಲ್ಲಿ, ಮಹಾಕುಂಭ ಮೇಳವು ಸಾಮಾಜಿಕ ಮಾಧ್ಯಮಗಳಲ್ಲೂ ಟ್ರೆಂಡಿಂಗ್ ಆಗಿದೆ. ಫೋಟೊ ಮತ್ತು ವಿಡಿಯೊಗಳನ್ನು ಪೋಸ್ಟ್ ಮಾಡುವ ಮೂಲಕ ಭಕ್ತರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅನೇಕ ಮಂದಿ ತಮ್ಮ ಕುಟುಂಬದ ಸದಸ್ಯರಿಗೆ ವಿಡಿಯೊ ಕರೆ ಮೂಲಕ ಗಂಗೆಯ ವರ್ಚುವಲ್ 'ದರ್ಶನ' ನೀಡಿದರು.



ಮೊದಲ 'ಶಾಹೀ ಸ್ನಾನ' ಇಂದು



ಮಹಾಕುಂಭ ಮೇಳದ ಮೊದಲ 'ಶಾಹೀ ಸ್ನಾನ' ಮಂಗಳವಾರ (ಜ.14) ಮಕರ ಸಂಕ್ರಾಂತಿಯಂದು ನಡೆಯಲಿದ್ದು, ಸಂಗಮದ ನೀರಿನಲ್ಲಿ ಪವಿತ್ರ ಸ್ನಾನ ಮಾಡುವವರ ಸಂಖ್ಯೆ ಇನ್ನಷ್ಟು ಹೆಚ್ಚುವ ನಿರೀಕ್ಷೆ ಇದೆ. ಇದೇ 29ಕ್ಕೆ ಮೌನಿ ಅಮಾವಾಸ್ಯೆ ಮತ್ತು ಫೆ.3ರಂದು ವಸಂತ ಪಂಚಮಿ ದಿನಗಳಂದೂ 'ಶಾಹೀ ಸ್ನಾನ' ನೆರವೇರಲಿದೆ. ಕೊನೆಯ ಶಾಹೀ ಸ್ನಾನ ಫೆ.26ರಂದು ನಡೆಯಲಿದೆ.

ಮೇಳದಲ್ಲಿ ನಂದಿನಿ ಹಾಲಿನ ಚಹಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಕುಂಭ ಮೇಳದಲ್ಲಿ ಚಹಾ ವಿತರಿಸಲು 'ಚಾಯ್ ಪಾಯಿಂಟ್'ನೊಂದಿಗೆ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಒಪ್ಪಂದ ಮಾಡಿಕೊಂಡಿದೆ.

ಕುಂಭಮೇಳದ ವಿವಿಧೆಡೆ ಚಾಯ್ ಪಾಯಿಂಟ್ 10 ಮಳಿಗೆಗಳನ್ನು ತೆರೆಯಲಿದ್ದು, ಸುಮಾರು 1 ಕೋಟಿ ಕಪ್ ಚಹಾ ವಿತರಿಸುವ ಗುರಿ ಹಾಕಿಕೊಂಡಿದೆ. ಈ ಮೂಲಕ ಒಂದೇ ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಚಹಾ ಮಾರಾಟ ಮಾಡಿ ಗಿನ್ನೆಸ್ ದಾಖಲೆ ಮಾಡಲಾಗುವುದು ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ. ಶಿವಸ್ವಾಮಿ ತಿಳಿಸಿದ್ದಾರೆ.

ನಂದಿನಿಯ ಪರಿಶುದ್ಧ ಹಾಗೂ ಉತ್ಕೃಷ್ಟ ಗುಣಮಟ್ಟದ ಹಾಲನ್ನು ಬಳಸಿ ಪ್ರತಿ ಕಪ್ ಚಹಾ ತಯಾರಿಸಲಾಗುತ್ತದೆ. ಚಹಾದ ಜೊತೆಗೆ ನಂದಿನಿಯ ಸಿಹಿ ಉತ್ಪನ್ನ, ಮಿಲ್ಕ್ ಶೇಕ್ ಸೇರಿದಂತೆ ವಿವಿಧ ಉತ್ಪನ್ನಗಳು ಮಾರಾಟವಾಗಲಿವೆ. ಜನವರಿ 13ರಿಂದ ಫೆಬ್ರುವರಿ 16ರವರೆಗೆ ಕುಂಭಮೇಳ ನಡೆಯಲಿದೆ.

'ಚಾಯ್ ಪಾಯಿಂಟ್'ನೊಂದಿಗೆ ಸಹಯೋಗ ಪಡೆಯುವ ಮೂಲಕ ನಂದಿನಿಯು ಉತ್ತರ ಭಾರತದಲ್ಲಿ ತನ್ನ ಮಾರುಕಟ್ಟೆ ವಿಸ್ತರಿಸಲು ಹೆಜ್ಜೆ ಇಟ್ಟಿದೆ ಎಂದು ಶಿವಸ್ವಾಮಿ ತಿಳಿಸಿದ್ದಾರೆ.



ಭಕ್ತರೊಬ್ಬರು ಮಗುವಿನೊಂದಿಗೆ ಪವಿತ್ರ ಸ್ನಾನ ಮಾಡಿದರು —ಪಿಟಿಐ ಚಿತ್ರ



ಪವಿತ್ರ ಸ್ನಾನ ಮಾಡಿದ ಭಕ್ತರು ಸಂಗಮಕ್ಕೆ ಆರತಿ ಬೆಳಗಿದರು —ಪಿಟಿಐ ಚಿತ್ರ

'ದೇವಾಲಯಗಳ ಮೇಲೆ ನಿರ್ಮಿಸಿರುವ ಮಸೀದಿ ಬಿಟ್ಟುಕೊಡಿ'

ಮಂದಿರ-ಮಸೀದಿ ವಿವಾದವನ್ನು ಮತ್ತೆ ಕೆದಕಿರುವ ಅಖಿಲ ಭಾರತೀಯ ಆಖಾಡಾ ಪರಿಷತ್ತಿನ ಅಧ್ಯಕ್ಷ ಮಹಾಂತ್ ರವೀಂದ್ರ ಪುರಿ, 'ಮಸೀದಿಗಳಾಗಿ ಪರಿವರ್ತನೆ ಮಾಡಿರುವ ಎಲ್ಲ ಪ್ರಾಚೀನ ದೇವಾಲಯಗಳನ್ನು ತೆರವು ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

'ನಾನು ಧರ್ಮ ಪ್ರಚಾರಕ್ಕಾಗಿ ದೇಶದಾದ್ಯಂತ ಪ್ರವಾಸ ಕೈಗೊಂಡ ಸಂದರ್ಭದಲ್ಲಿ, ಹೆಚ್ಚಿನ ಮಸೀದಿಗಳ ಗುಮ್ಮಟವು ದೇವಸ್ಥಾನದ ಗುಮ್ಮಟವನ್ನೇ ಹೋಲುತ್ತಿರುವುದನ್ನು ಗಮನಿಸಿದ್ದೇನೆ. ಮಸೀದಿಗಳ ಒಳಗೆ 'ಸನಾತನ'ದ ಕುರುಹುಗಳನ್ನು ನಿಮಗೆ ಕಾಣಬಹುದು. ದೇಶದಾದ್ಯಂತವಿರುವ ಮಸೀದಿಗಳಲ್ಲಿ ಶೇ 80ರಷ್ಟನ್ನೂ ದೇವಾಲಯಗಳ ಮೇಲೆ ನಿರ್ಮಿಸಲಾಗಿದೆ' ಎಂದರು.

'ಮಸೀದಿಗಳಾಗಿ ಪರಿವರ್ತನೆ ಮಾಡಿರುವ ಪ್ರಾಚೀನ ದೇವಾಲಯಗಳನ್ನು ಹಿಂದೂಗಳಿಗೆ ಬಿಟ್ಟುಕೊಡುವಂತೆ ಮುಸ್ಲಿಮರಿಗೆ ಸಾವಿರ ಬಾರಿ ಮನವಿ ಮಾಡಿದ್ದೇವೆ. ಮಹಾಕುಂಭ ಮೇಳದಲ್ಲಿ ಮತ್ತೊಮ್ಮೆ ಅದೇ ಮನವಿ ಮಾಡುತ್ತೇನೆ. ಮಸೀದಿಗಳ ಮೇಲೆ ನಿರ್ಮಿಸಿರುವ ದೇವಾಲಯಗಳನ್ನು ಬಿಟ್ಟುಕೊಡಲು ನಾವು ಸಿದ್ಧರಿದ್ದೇವೆ' ಎಂದು ತಿಳಿಸಿದರು.

ಮುಸ್ಲಿಮರು ಕುಂಭಮೇಳಕ್ಕೆ ಭೇಟಿ ನೀಡುವುದಕ್ಕೆ ಯಾವುದೇ ನಿರ್ಬಂಧವಿಲ್ಲ ಎಂದು ಅವರು ಇದೇ ವೇಳೆ ಸ್ಪಷ್ಟಪಡಿಸಿದರು.



ಆತ್ಮಹತ್ಯೆಗೆ ಯತ್ನ: ತಾಯಿ ಪಾರು, ಇಬ್ಬರು ಮಕ್ಕಳು ಸಾವು, ಇನ್ನಿಬ್ಬರು ನೀರುಪಾಲು

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆಗೆ (ಬೇನಾಳ ಬ್ರಿಜ್, ಪಾರ್ವತಿಕಟ್ಟಾ ಸೇತುವೆ ಬಳಿ) ಮಹಿಳೆಯೊಬ್ಬರು ಸೋಮವಾರ ನಾಲ್ವರು ಮಕ್ಕಳೊಂದಿಗೆ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದು, ಮಹಿಳೆಯನ್ನು ರಕ್ಷಿಸಲಾಗಿದೆ. ಇಬ್ಬರು ಮಕ್ಕಳು ಸಾವನ್ನಪ್ಪಿದ್ದು, ಇನ್ನಿಬ್ಬರು ನೀರು ಪಾಲಾಗಿದ್ದಾರೆ. ಶೋಧ ಮುಂದುವರೆದಿದೆ.

'ಕೊಲ್ಹಾರ ತಾಲ್ಲೂಕಿನ ತೆಲಗಿ ಗ್ರಾಮ ಪಂಚಾಯಿತಿ ಸದಸ್ಯ ನಿಂಗಪ್ಪ ಭಜಂತ್ರಿ ಅವರ ಪತ್ನಿ ಭಾಗ್ಯ ಆತ್ಮಹತ್ಯೆಗೆ ಯತ್ನಿಸಿದವರು. ಮಕ್ಕಳಾದ ತನುಶ್ರೀ (5), ರಕ್ಷಾ (3) ಮೃತಪಟ್ಟಿದ್ದು, ಅವಳಿ ಮಕ್ಕಳಾದ ಹಸೇನ್ ಮತ್ತು ಹುಸೇನ್ (13 ತಿಂಗಳು) ಪತ್ತೆಗಾಗಿ ಶೋಧ ಮುಂದುವರೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆತ್ಮಹತ್ಯೆ ಯತ್ನಕ್ಕೆ ಕೌಟಂಬಿಕ ಕಲಹ ಕಾರಣವಾಗಿರಬಹುದು. ಭಾಗ್ಯ ಅವರನ್ನು ಮೀನುಗಾರರು ರಕ್ಷಿಸಿದರು. ಇಬ್ಬರು ಮಕ್ಕಳಿಗಾಗಿ ರಾತ್ರಿಯವರೆಗೆ ಶೋಧ ನಡೆಸಿದರೂ ಪತ್ತೆ ಆಗಲಿಲ್ಲ. ಮಂಗಳವಾರ ಶೋಧ ಕಾರ್ಯಾಚರಣೆ ಮುಂದುವರೆಸುತ್ತೇವೆ' ಎಂದು ಅವರು ತಿಳಿಸಿದ್ದಾರೆ.



ತನು, ರಕ್ಷಾ



ಹಸೇನ್, ಹುಸೇನ್

ಆಸ್ಪತ್ರೆ ಆವರಣದಲ್ಲಿ ಮಲಗಿದ್ದ ವ್ಯಕ್ತಿ ಸಾವು

ತೀವ್ರ ಚಳಿಯಿಂದ ಮೃತಪಟ್ಟಿರುವ ಶಂಕೆ: ತಂಗಲು ವ್ಯವಸ್ಥೆ ಇಲ್ಲದ್ದಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಚೌಡಳ್ಳಿ ಗ್ರಾಮದ ಶಿವಗೋಪಾಲಯ್ಯ(45) ಇಲ್ಲಿನ ಚಲುವಾಂಬ ಆಸ್ಪತ್ರೆ ಆವರಣದಲ್ಲಿ ಭಾನುವಾರ ರಾತ್ರಿ ಮಲಗಿದ್ದಲ್ಲೇ ಮೃತಪಟ್ಟಿದ್ದಾರೆ.

ಅವರು ತೀವ್ರ ಚಳಿಯ ಕಾರಣದಿಂದ ಮೃತಪಟ್ಟಿರಬಹುದು ಎನ್ನಲಾಗುತ್ತಿದೆ. ರೋಗಿಗಳ ಸಂಬಂಧಿಕರಿಗೆ ತಂಗಲು ಸೂಕ್ತ ವ್ಯವಸ್ಥೆ ಇಲ್ಲದಿರುವ ಬಗ್ಗೆ ಸಾರ್ವಜನಿಕರಿಂದ ಆಕ್ರೋಶವೂ ವ್ಯಕ್ತವಾಗಿದೆ.

ಶಿವಗೋಪಾಲಯ್ಯ ಊರಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಪತ್ನಿಯನ್ನು ಹೆರಿಗಾಗಿ ಶುಕ್ರವಾರ ಬೆಳಿಗ್ಗೆ ಆಸ್ಪತ್ರೆಗೆ ಕರೆತಂದಿದ್ದರು. ಅಂದು ರಾತ್ರಿ ಆಕೆ ಗಂಡು ಮಗುವಿಗೆ ಜನ್ಮ ನೀಡಿದ್ದರು. ಆರೋಗ್ಯದ ಸಮಸ್ಯೆ ಇದ್ದ ಕಾರಣ ತಾಯಿ, ಮಗುವಿಗೆ ತೀವ್ರ ನಿಗಾ ಘಟಕ (ಐಸಿಯು)ದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಹೀಗಾಗಿ, ಶಿವಗೋಪಾಲಯ್ಯ ಆಸ್ಪತ್ರೆ ಆವರಣದ ಗೋಡೆ ಬದಿಯಲ್ಲಿ ಮಲಗಿದ್ದರು. ಅವರು ಮೃತಪಟ್ಟಿರುವುದು ಸೋಮವಾರ ಬೆಳಿಗ್ಗೆ ಗೊತ್ತಾಗಿದೆ.



ಮೈಸೂರಿನ ಚಲುವಾಂಬ ಆಸ್ಪತ್ರೆ ಆವರಣದಲ್ಲಿ ಮಲಗಿದ್ದಲ್ಲೇ ಮೃತಪಟ್ಟ ಶಿವಗೋಪಾಲಯ್ಯ

ಮೃತದೇಹವನ್ನು ಕೆ.ಆರ್.ಆಸ್ಪತ್ರೆ ಶವಾಗಾರಕ್ಕೆ ರವಾನಿಸಿ, ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕುಟುಂಬಕ್ಕೆ ಹಸ್ತಾಂತರಿಸಲಾಯಿತು.

'ಚಾಮರಾಜನಗರ ಜಿಲ್ಲಾಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ರೋಗಿಯನ್ನು ಕಳಿಸಿಕೊಟ್ಟಿದ್ದರು. ಅಂದು ರಾತ್ರಿ ಹೆರಿಗೆಯಾಗಿತ್ತು. ತಾಯಿಗೆ ಬಿ.ಪಿ. ಸಮಸ್ಯೆಯಿದ್ದ ಕಾರಣ ಐಸಿಯುನಲ್ಲಿ ಚಿಕಿತ್ಸೆ ನೀಡುತ್ತಿದ್ದೇವೆ. ಶಿವಗೋಪಾಲಯ್ಯ ಒಬ್ಬರೇ ಎಲ್ಲಾ ವಿಚಾರಕ್ಕೂ ಓಡಾಡುತ್ತಿದ್ದರು. ಯಾವ ಕಾರಣದಿಂದ ಮೃತಪಟ್ಟಿದ್ದಾರೆ ಎಂದು ತಿಳಿದಿಲ್ಲ. ಹೃದಯಾಘಾತ ಆಗಿರುವ ಸಾಧ್ಯತೆಯೂ ಇರಬಹುದು' ಎಂದು ಆಸ್ಪತ್ರೆಯ ಸೂಪರಿಂಟೆಂಡೆಂಟ್ ಡಾ.ಸುಧಾ 'ಪ್ರಜಾವಾಣಿ'ಗೆ ತಿಳಿಸಿದರು.

ಮೃತರ ಅಣ್ಣ ಶಿವಗೋವಿಂದ ಮಾತನಾಡಿ, 'ತಮ್ಮ ಕೂಲಿ ಕೆಲಸ ಮಾಡಿಕೊಂಡು, ಆರಾಮವಾಗಿದ್ದ. ಯಾವುದೇ ಆರೋಗ್ಯ ಸಮಸ್ಯೆ ಇರಲಿಲ್ಲ' ಎಂದು ತಿಳಿಸಿದರು.

ಆಸ್ಪತ್ರೆಯಲ್ಲಿ ರೋಗಿಗಳ ಸಂಬಂಧಿಕರಿಗಾಗಿ ತಂಗಲು ವ್ಯವಸ್ಥೆ ಇದೆ. ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಕೊಠಡಿ ಇದ್ದು, 30- 40 ಜನ ಉಳಿದುಕೊಳ್ಳಬಹುದು. ರೋಗಿಗಳ ಸಂಖ್ಯೆ ಹೆಚ್ಚಿರುವುದರಿಂದ ಈ ಕೊಠಡಿಗಳು ನಿತ್ಯವೂ ತುಂಬಿರುತ್ತವೆ. ಹೀಗಾಗಿ ಅನೇಕರು ಕೆ.ಆರ್. ಆಸ್ಪತ್ರೆ ಹಾಗೂ ಚಲುವಾಂಬ ಆಸ್ಪತ್ರೆ ಆವರಣದ ಮೂಲೆಗಳಲ್ಲಿ ಮಲಗುವುದು ಕಂಡುಬರುತ್ತದೆ.

'ಶಿವಗೋಪಾಲಯ್ಯ ಹೊರಗಡೆ ಮಲಗಿದ್ದಾಗ, ಚಳಿಯಿಂದಾಗಿ ಹೃದಯಾಘಾತವಾಗಿರಬಹುದು' ಎಂದು ಹೇಳಲಾಗುತ್ತಿದೆ.

ವೀಣಾ, ಎಸ್.ಜಿ.ಸಿದ್ಧರಾಮಯ್ಯಗೆ ಅಂಬಿಕಾತನಯದತ್ತ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ಡಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ'ಗೆ ಸಾಹಿತಿ ವೀಣಾ ಶಾಂತೇಶ್ವರ ಹಾಗೂ ಸಾಹಿತಿ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಆಯ್ಕೆಯಾಗಿದ್ದಾರೆ.

'ಪುರಸ್ಕಾರವು ತಲಾ ₹50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಜನವರಿ 31ರಂದು ನಗರದ ಬೇಂದ್ರೆ ಭವನದಲ್ಲಿ ನಡೆಯುವ ಬೇಂದ್ರೆ ಜನ್ಮದಿನದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಟ್ರಸ್ಟ್ ಅಧ್ಯಕ್ಷ ಡಿ.ಎಂ. ಪಾಟೀಲ ತಿಳಿಸಿದ್ದಾರೆ.



ವೀಣಾ ಶಾಂತೇಶ್ವರ



ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ

'ದೇಶದ್ರೋಹ ಪ್ರಕರಣ ದಾಖಲಿಸಿ'

ಗದಗ: 'ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ಯುವಜನರಿಗೆ ಅಕ್ರಮವಾಗಿ ಬಂದೂಕು ತರಬೇತಿ ನೀಡುವ ಮೂಲಕ ಶ್ರೀರಾಮ ಸೇನೆ ಸಂಘಟನೆಯು ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಲು ಮುಂದಾಗಿದೆ. ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ವಿರುದ್ಧ ಸರ್ಕಾರ ತಕ್ಷಣವೇ ದೇಶದ್ರೋಹದ ಪ್ರಕರಣ ದಾಖಲಿಸಬೇಕು. ಸಂಘಟನೆಯನ್ನೂ ನಿಷೇಧಿಸಬೇಕು' ಎಂದು ಸಾಹಿತಿ ಬಸವರಾಜ ಸೂಳಿಭಾವಿ ಆಗ್ರಹಿಸಿದರು.

ಸಿ.ಟಿ.ರವಿಗೆ ಬೆದರಿಕೆ ಪತ್ರ: ಸ್ಥಳೀಯ ಅಂಚೆ ಪೆಟ್ಟಿಗೆಯಿಂದಲೇ ಪೋಸ್ಟ್

ಚಿಕ್ಕಮಗಳೂರು: ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ಕಚೇರಿಗೆ ಬಂದಿದ್ದ ಬೆದರಿಕೆ ಪತ್ರವನ್ನು ಸ್ಥಳೀಯ ಅಂಚೆ ಪೆಟ್ಟಿಗೆಯಿಂದಲೇ ಪೋಸ್ಟ್ ಮಾಡಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.


ಸಿ.ಟಿ.ರವಿ ಅವರ ನಿವಾಸದಲ್ಲಿನ ಕಚೇರಿಗೆ ಜ.11ರಂದು ಪತ್ರವೊಂದು ಬಂದಿತ್ತು. 'ಬೆಳಗಾವಿಯಿಂದ ಚಿಕ್ಕಮಗಳೂರಿಗೆ ನಿನ್ನನ್ನು ಹುಡುಕಿಕೊಂಡು ಬಂದಿದ್ದೇವೆ. 15 ದಿನದೊಳಗೆ ಮನೆಗೆ ನುಗ್ಗಿ ಕೈ-ಕಾಲು ಮುರಿಯುತ್ತೇವೆ. ಮಗನ ಜೀವಕ್ಕೂ ಅಪಾಯವಿದೆ' ಎಂದು ಪತ್ರದಲ್ಲಿ ಬರೆಯಲಾಗಿತ್ತು.

ಸಿ.ಟಿ.ರವಿ ಅವರು ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ಆರಂಭಿಸಿರುವ ಪೊಲೀಸರು, ನಗರದ ವಿಜಯಪುರ ಬಡಾವಣೆಯಲ್ಲಿನ ಅಂಚೆ ಪೆಟ್ಟಿಗೆಯಿಂದ ಪೋಸ್ಟ್ ಮಾಡಲಾಗಿದೆ ಎಂಬುದನ್ನು ಪತ್ತೆ ಮಾಡಿದ್ದಾರೆ.

ಕಮ್ಯುನಿಸ್ಟ್ ನಾಯಕ ಕೃಷ್ಣ ಮೆಣಸೆ ನಿಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸ್ವಾತಂತ್ರ್ಯ ಹೋರಾಟಗಾರ, ಕಮ್ಯುನಿಸ್ಟ್ ನಾಯಕ ಕೃಷ್ಣ ಮೆಣಸೆ (97) ಅವರು ಸೋಮವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.



ಕೃಷ್ಣ ಮೆಣಸೆ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ಅವರು, ಸ್ವಾತಂತ್ರ್ಯೋತ್ತರ ಕಾರ್ಮಿಕ ಚಳವಳಿಯಲ್ಲಿ ಪಾಲ್ಗೊಂಡಿದ್ದರು.

ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ರಾಜ್ಯ ಸಮಿತಿ ಹಾಗೂ ರಾಷ್ಟ್ರೀಯ ಮಂಡಳಿ ಸದಸ್ಯರಾಗಿದ್ದರು.

ಮರಾಠಿ ಸಾಹಿತಿಯಾಗಿ ಹೆಸರು ಗಳಿಸಿದ್ದರು. ಪತ್ರಕರ್ತರೂ ಆಗಿದ್ದರು. ಗಡಿ ಸಂಬಂಧಿ ಹೋರಾಟದಲ್ಲೂ ಮುಂಚೂಣಿಯ ನಾಯಕರಾಗಿದ್ದರು.

1975ರಲ್ಲಿ ಮುಂಬೈನಲ್ಲಿ ಅನ್ನಪೂರ್ಣ ಮಹಿಳಾ ಮಂಡಲ ಸ್ಥಾಪಿಸಿ, ಮಹಿಳಾ ಕಾರ್ಮಿಕರ ಹೋರಾಟಕ್ಕೆ ಧ್ವನಿ ನೀಡಿದ್ದರು. 1984ರಲ್ಲಿ ಬೆಳಗಾವಿ ಸಿಟಿ ಮಜ್ದೂರ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಸ್ಥಾಪಿಸುವಲ್ಲಿ ಮುಂಚೂಣಿ ವಹಿಸಿದ್ದರು.

1988ರಲ್ಲಿ 'ಪೂರ್ವಗಾಮಿ' ಎಂಬ ಹೋರಾಟದ ಸಂಸ್ಥೆ ಸ್ಥಾಪಿಸಿದರು. ಅವರು ಆರಂಭಿಸಿದ 'ಸಾಮ್ಯವಾದಿ' ಎಂಬ ಮರಾಠಿ ವಾರಪತ್ರಿಕೆ ಇನ್ನೂ ಪ್ರಕಟವಾಗುತ್ತಿದೆ.

ಅರಣ್ಯ ಇಲಾಖೆ, ಎನ್‌ಜಿಒಗಳ ಜಂಟಿ ಕಾರ್ಯಾಚರಣೆ; ಮೂರು ವರ್ಷದಲ್ಲಿ ನಿರ್ಮೂಲನೆ ಗುರಿ

ಕಾಡಿನ 200 ಎಕರೆಯಲ್ಲಿ ಲಂಟಾನಾ ಕಳೆ ತೆರವು

• ಬಾಲಚಂದ್ರ ಎಚ್.

ಚಾಮರಾಜನಗರ: ಅರಣ್ಯ ಹಾಗೂ ವನ್ಯಜೀವಿಗಳ ಪಾಲಿಗೆ ಕಂಟಕವಾಗಿರುವ ಲಂಟಾನಾ, ಕರಿಕಡ್ಡಿ ಸಹಿತ ಹಲವು ಮಾದರಿಯ ಕಳೆಗಿಡಗಳನ್ನು ಹಂತಹಂತವಾಗಿ ನಿರ್ಮೂಲನೆ ಮಾಡಲು ಅರಣ್ಯ ಇಲಾಖೆ ಮುಂದಾಗಿದ್ದು, ಸ್ವಾಮಿ ವಿವೇಕಾನಂದ ಟ್ರಸ್ಟ್ ಮತ್ತು ಐಸಿಐಸಿಐ ಫೌಂಡೇಶನ್ ಕೈಜೋಡಿಸಿವೆ.

ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ ಅರಣ್ಯದ ಕೆ.ಗುಡಿ ವಲಯದಲ್ಲಿ ಪರಿಸರ ರಕ್ಷಣೆ ಹಾಗೂ ಆದಿವಾಸಿಗಳ ಸಬಲೀಕರಣದಲ್ಲಿ ತೊಡಗಿರುವ ಟ್ರಸ್ಟ್ ಹಾಗೂ ಮಲೆ ಮಹದೇಶ್ವರ ಬೆಟ್ಟದ ಕಾವೇರಿ ವನ್ಯಧಾಮದಲ್ಲಿ ಫೌಂಡೇಷನ್ ಕಳೆಗಿಡಗಳನ್ನು ತೆರವುಗೊಳಿಸುತ್ತಿದೆ. ಎರಡೂ ಅರಣ್ಯ ವ್ಯಾಪ್ತಿಯಲ್ಲಿ 200 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಕಳೆಗಿಡಗಳನ್ನು ತೆರವುಗೊಳಿಸಲಾಗಿದೆ.

ಕೆ.ಗುಡಿ ಅರಣ್ಯದಲ್ಲಿ ಟ್ರಸ್ಟ್ ತನ್ನದೇ ಆರ್ಥಿಕ ಸಂಪನ್ಮೂಲ ಬಳಸಿ ಜುಲೈನಿಂದ ಕೆಲಸ ಆರಂಭಿಸಿದ್ದು, ಮೂರು ವರ್ಷಗಳಲ್ಲಿ 300ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಕಳೆ ನಿರ್ಮೂಲನೆ ಗುರಿ ಹೊಂದಿದೆ.

ಹಾಡಿಜನರಿಗೆ ಉದ್ಯೋಗ: 'ಜೆಸಿಬಿ ಸೇರಿದಂತೆ ಬೃಹತ್ ಯಂತ್ರಗಳನ್ನು ಬಳಸಿದರೆ ಸ್ಥಳೀಯ ಸಸ್ಯ ಪ್ರಭೇದಗಳು, ಹುಲ್ಲುಗಾವಲು ಹಾಗೂ ಜೀವವೈವಿಧ್ಯತೆಗೆ ಹಾನಿಯಾಗುತ್ತದೆಂಬ ಕಾರಣಕ್ಕೆ, ಹಾಡಿಗಳ ಗಿರಿಜನರಿಗೇ ಉದ್ಯೋಗ ನೀಡಿ ಗುದ್ದಲಿ, ಕುಡುಗೋಲುಗಳಿಂದ ಕಳೆ ತೆರವು ಮಾಡಲಾಗುತ್ತಿದೆ. ಪ್ರತಿದಿನ 20 ಆದಿವಾಸಿಗಳು ಶ್ರಮ ವಹಿಸುತ್ತಿದ್ದಾರೆ' ಎಂದು ಸ್ವಾಮಿ ವಿವೇಕಾನಂದ ಸೇವಾ ಟ್ರಸ್ಟ್‌ನ ಅಧ್ಯಕ್ಷ ಮಲ್ಲೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆಗಿಡಗಳನ್ನು ಭೂಮಿಯ ಮಟ್ಟಕ್ಕೆ ಕತ್ತರಿಸಿ ಬಿಸಾಡಿದರೆ ಮತ್ತೆ ಚಿಗುರಿ ಕಾಡಿನ ತುಂಬೆಲ್ಲ ವ್ಯಾಪಿಸುತ್ತದೆ. ಬೇರುಸಹಿತ ಕಿತ್ತು ಮತ್ತೆ ಭೂಮಿಗೆ ಸೇರದಂತೆ ನಾಶ ಮಾಡಲಾಗುತ್ತಿದೆ. ಇದು ನಿರಂತರವಾಗಿ ನಡೆದರೆ ಮಾತ್ರ ಹೆಚ್ಚು ಪರಿಣಾಮಕಾರಿ. ಹೀಗಾಗಿ ಮೂರು ವರ್ಷ ನಿರ್ದಿಷ್ಟ ಜಾಗದಲ್ಲಿಯೇ ಕಳೆಗಿಡಗಳನ್ನು ನಿರ್ಮೂಲನೆ ಮಾಡಲಾಗುತ್ತದೆ. ಕಿತ್ತ ಜಾಗದಲ್ಲಿ 22 ಜಾತಿಯ ಸ್ಥಳೀಯ ಹುಲ್ಲಿನ ಬೀಜಗಳನ್ನು ನೆಡಲಾಗುತ್ತಿದೆ. ಅದರಿಂದ ಸಸ್ಯಾಹಾರಿ ಪ್ರಾಣಿಗಳ ಮೇವಿನ ಕೊರತೆಯೂ ನೀಗುತ್ತದೆ' ಎಂದು ತಿಳಿಸಿದರು.

ಆಹಾರ ಸರಪಳಿಗೆ ಅಡ್ಡಿ: 'ಲಂಟಾನಾವನ್ನು ಜಿಂಕೆ, ಆನೆ ಸಹಿತ ಸಸ್ಯಹಾರಿ ಪ್ರಾಣಿಗಳು ತಿನ್ನುವುದಿಲ್ಲ. ಸ್ವಲ್ಪ ತೇವಾಂಶ ದೊರೆತರೂ ಹುಲುಸಾಗಿ ಪೊದೆಗಳಾಗಿ ಬೆಳೆಯುತ್ತವೆ. ಅವುಗಳ ನೆರಳಿನಲ್ಲಿ ಹುಲ್ಲು ಚಿಗುರುವುದಿಲ್ಲ. ಅದರಿಂದ ಕಾಡಿನಲ್ಲಿ ಆಹಾರ ಸರಪಳಿಗೆ ಬಲವಾದ ಪೆಟ್ಟುಬೀಳುತ್ತಿದ್ದು, ಮೇವಿನ ಕೊರತೆ ಎದುರಾಗುತ್ತದೆ' ಎಂದು ಮಲೆ ಮಹದೇಶ್ವರ ಬೆಟ್ಟದ ಕಾವೇರಿ ವನ್ಯಧಾಮದ ಡಿಸಿಎಫ್ ಡಾ.ಕೆ. ಸಂತೋಷ್ ಕುಮಾರ್ ತಿಳಿಸಿದರು.

'ಅದೇ ಕಾರಣದಿಂದ ಜಿಂಕೆ, ಆನೆ ಸೇರಿ ಹಲವು ಪ್ರಾಣಿಗಳು ಕಾಡಂಚಿನ ಜಮೀನುಗಳಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿವೆ. ಮಾನವ – ಪ್ರಾಣಿ ಸಂಘರ್ಷವೂ ಹೆಚ್ಚಾಗುತ್ತಿದೆ. ಕಳೆಗಿಡಗಳನ್ನು ನಿರ್ಮೂಲನೆಗೊಳಿಸಿ ಸಮೃದ್ಧ ಮೇವು ಸಿಗುವಂತೆ ಮಾಡಿದರೆ ಸಂಘರ್ಷ ತಪ್ಪಿಸಬಹುದು' ಎಂದು ಪ್ರತಿಪಾದಿಸಿದರು.



ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದ ಕೆ.ಗುಡಿ ಅರಣ್ಯ ವ್ಯಾಪ್ತಿಯಲ್ಲಿ ಆದಿವಾಸಿ ಮಹಿಳೆಯರು ಕಳೆಗಿಡಗಳನ್ನು ತೆರವುಗೊಳಿಸಿದರು

ಅಂಕಿ ಅಂಶಗಳು

57,482 ಹೆಕ್ಟೇರ್ – ಬಿಆರ್‌ಟಿ ವ್ಯಾಪ್ತಿಗೊಳಪಡುವ ಅರಣ್ಯ

91,000 ಹೆಕ್ಟೇರ್ – ಮಲೆಮಹದೇಶ್ವರ ಬೆಟ್ಟ ವನ್ಯಧಾಮ


> **ಲಂಟಾನ ತೆರವಿನ ವೇಳೆ ಯಂತ್ರಗಳ ಬಳಕೆಯನ್ನು ತಗ್ಗಿಸಿದ್ದು, ಜೀವ ವೈವಿಧ್ಯಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸಲಾಗಿದೆ**
> **ಡಾ.ಜಿ.ಸಂತೋಷ್ ಕುಮಾರ್**
> ಮಲೆ ಮಹದೇಶ್ವರ ಬೆಟ್ಟ ಕಾವೇರಿ ವನ್ಯಧಾಮದ ಡಿಸಿಎಫ್

> **ಬಿಳಿಗಿರಿರಂಗನ ಬೆಟ್ಟದ ಕೆ.ಗುಡಿ ಅರಣ್ಯ ವ್ಯಾಪ್ತಿಯಲ್ಲಿ ಲಂಟಾನಾ ತೆರವಿಗೆ ಸ್ಥಳೀಯ ಬುಡಕಟ್ಟು ಸಮುದಾಯದವರನ್ನು ಬಳಸಿಕೊಳ್ಳಲಾಗಿದೆ**
> **ಶ್ರೀಪತಿ,** ಬಿಳಿಗಿರಿ ರಂಗನಬೆಟ್ಟ ವನ್ಯಜೀವಿ ಉಪ ವಿಭಾಗದ ಎಸಿಎಫ್

'ಜಂಗಲ್‌ಸ್ಕೇಪ್ಸ್' ತಾಂತ್ರಿಕ ನೆರವು

'ಸ್ಥಳೀಯ ಸಸ್ಯ ಹಾಗೂ ಹುಲ್ಲಿನ ಪ್ರಬೇಧಗಳ ಗುರುತಿಸುವಿಕೆ ಹಾಗೂ ಕಳೆಗಿಡಗಳ ತೆರವಿಗೆ ಜಂಗಲ್‌ಸ್ಕೇಪ್ಸ್ ಸಂಸ್ಥೆಯು ತಾಂತ್ರಿಕ ನೆರವು ನೀಡುತ್ತಿದೆ' ಎಂದು ವಿವೇಕಾನಂದ ಸೇವಾಟ್ರಸ್ಟ್‌ನ ಅಧ್ಯಕ್ಷ ಮಲ್ಲೇಶ್ ತಿಳಿಸಿದರು.

'ಅರಣ್ಯ ಮತ್ತು ಜೀವವೈವಿಧ್ಯದ ಉಳಿವಿಗಾಗಿ ಕೆಲಸ ಮಾಡುತ್ತಿರುವ ಸಂಸ್ಥೆಯ ನೆರವಿನಿಂದ ಲಂಟಾನಾ ಕಳೆ ತೆರವು ಕಾರ್ಯವು ಚುರುಕು ಪಡೆದಿದೆ' ಎಂದರು.



ಮಲ್ಲೇಶ್

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಕ್ರಾಂತಿ ಶುಭಾಶಯಗಳು
ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಸಂಕ್ರಾಂತಿಯ ಶುಭಾಶಯಗಳು


ಚಿತ್ರ: ರಂಜು ಪಿ.

ಆಳ-ಅಗಲ
ಕೊಕ್ಕೊ: ದೇಸಿ ಆಟಕ್ಕೆ ವಿಶ್ವಕಿರೀಟದ ಮೆರುಗು


ಲಡಾಖ್‌ಗೆ ಸರ್ವ ಋತುವಿನಲ್ಲೂ ಸಂಪರ್ಕ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,330	23,085	₹82,500 (ಬೆಂಗಳೂರು)	₹95,900 (ಬೆಂಗಳೂರು)	86.70

ಹಸುಗಳ ಕೆಚ್ಚಲು ಕೊಯ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ವಿನಾಯಕ ನಗರದ ಓಲ್ಡ್ ಪೆನ್ಷನ್ ಮೊಹಲ್ಲಾದ ರಸ್ತೆ ಬದಿಯ ಶೆಡ್‌ನಲ್ಲಿ ಕಟ್ಟಿದ್ದ ಮೂರು ಹಸುಗಳ ಕೆಚ್ಚಲು ಕೊಯ್ದಿದ್ದ ಆರೋಪಿ, ಬಿಹಾರದ ಚಂಪಾರಣ್ ಜಿಲ್ಲೆಯ ಶೇಖ್ ನಸ್ರುನನ್ನು (30) ಕಾಟನ್‌ಪೇಟೆ ಠಾಣೆ ಪೊಲೀಸರು ಭಾನುವಾರ ತಡರಾತ್ರಿ ಬಂಧಿಸಿದ್ದಾರೆ.


ಶೇಖ್ ನಸ್ರು

ಶನಿವಾರ ತಡರಾತ್ರಿ ಆರೋಪಿಯು ಹಸುಗಳ ಕೆಚ್ಚಲು ಕೊಯ್ದು, ಕಾಲಿಗೆ ಮಚ್ಚಿನಿಂದ ಹೊಡೆದು ಪರಾರಿ ಆಗಿದ್ದ.

ಹಸುಗಳ ಮಾಲೀಕ ಕರ್ಣ ಅವರು ನೀಡಿದ ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 325 (ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ಹರಿತವಾದ ಆಯುಧವನ್ನೂ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

5ನೇ ಪುಟ ನೋಡಿ

ಜಗಳ: ಕಾಂಗ್ರೆಸ್ ತಳಮಳ

ಶಿಸ್ತಿನ ಎಚ್ಚರಿಕೆ ಕೊಟ್ಟ ಸುರ್ಜೇವಾಲಾ ● ಕೆಪಿಸಿಸಿ ಸಭೆಗೆ ಪರಮೇಶ್ವರ, ರಾಜಣ್ಣ ಗೈರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಸ್ಥಾನದ ಗುದ್ದಾಟ, ಔತಣಕೂಟದ ರಾಜಕೀಯದ ವಿದ್ಯಮಾನಗಳು ಸೃಷ್ಟಿಸಿರುವ ಗೊಂದಲಗಳ ನಡುವೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನೇತೃತ್ವದಲ್ಲಿ ಸೋಮವಾರ ನಡೆದ ಕೆಪಿಸಿಸಿ ಸರ್ವ ಸದಸ್ಯರ ಸಭೆಗೆ ಗೃಹ ಸಚಿವ ಜಿ. ಪರಮೇಶ್ವರ ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಗೈರಾದರು. ಆ ಮೂಲಕ, ಪಕ್ಷದೊಳಗೆ ಎಲ್ಲವೂ ಸರಿ ಇಲ್ಲ ಎನ್ನುವುದು ಮತ್ತೊಮ್ಮೆ ಬಹಿರಂಗವಾಗಿದೆ.

'ಗಾಂಧಿ ಭಾರತ' ಕಾರ್ಯಕ್ರಮದ ಅಂಗವಾಗಿ ಬೆಳಗಾವಿಯಲ್ಲಿ ಇದೇ 21ರಂದು ಎಐಸಿಸಿ ವತಿಯಿಂದ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಸಮಾವೇಶದ ಪೂರ್ವಭಾವಿ ಸಭೆಯ ನೆಪದಲ್ಲಿ ಕೆಪಿಸಿಸಿಯ 'ಭಾರತ್ ಜೋಡೊ' ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಂಪುಟ ಸಹೋದ್ಯೋಗಿಗಳ 20 ತಿಂಗಳ ಕಾರ್ಯವೈಖರಿ ವರದಿಯನ್ನು ಸುರ್ಜೇವಾಲಾಗೆ ಸಲ್ಲಿಸಿದರು.

10ನೇ ಪುಟ ನೋಡಿ

ಸಿದ್ದರಾಮಯ್ಯ 'ತ್ಯಾಗ'ದ ಮಾತು



ಸರ್ವಸದಸ್ಯರ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಕಾಂಗ್ರೆಸ್‌ನ ಹಲವು ನಾಯಕರು ತ್ಯಾಗ ಮಾಡಿದ್ದಾರೆ. ಸೋನಿಯಾ ಗಾಂಧಿಯವರು ಅಧಿಕಾರವನ್ನೇ ತ್ಯಾಗ ಮಾಡಿದ್ದಾರೆ. ರಾಹುಲ್ ಗಾಂಧಿ ಅವರು ಪಕ್ಷಕ್ಕಾಗಿ ತ್ಯಾಗ ಮಾಡಿದ್ದಾರೆ. ನಾವು ಕೂಡ ಕೆಲವೊಮ್ಮೆ ತ್ಯಾಗ ಮಾಡ ಬೇಕಾಗುತ್ತದೆ' ಎಂದಿದ್ದಾರೆ.

ಸತೀಶ– ಲಕ್ಷ್ಮೀ ಜಟಾಪಟಿ





ಸಚಿವರಾದ ಸತೀಶ ಜಾರಕಿಹೊಳಿ ಹಾಗೂ ಲಕ್ಷ್ಮೀ ಹೆಬ್ಬಾಳಕರ ಮಧ್ಯೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಜಟಾಪಟಿ ನಡೆದಿದೆ.

ಸಭೆಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಬೆಳಗಾವಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಚೇರಿಯನ್ನು ಲಕ್ಷ್ಮೀ ಹೆಬ್ಬಾಳಕರ ಕಟ್ಟಿದ್ದಾರೆ' ಎಂದು ಹೇಳಿದಾಗ ಸಿಟ್ಟಿಗೆದ್ದು ಮೈಕ್ ಹಿಡಿದುಕೊಂಡ ಸಚಿವ ಸತೀಶ ಜಾರಕಿಹೊಳಿ, 'ಪದೇ ಪದೇ ಲಕ್ಷ್ಮೀ ಹೆಬ್ಬಾಳಕರ ಕಟ್ಟಿದರು ಎಂದು ಹೇಳಿ ಇತರರನ್ನು ಅವಮಾನಿಸಬೇಡಿ. ಕಚೇರಿ ಕಟ್ಟಲು ನಾನೂ ₹3 ಕೋಟಿ ಕೊಟ್ಟಿದ್ದೇನೆ. ರಮೇಶ ಜಾರಕಿಹೊಳಿ ಜಾಗ ಕೊಟ್ಟಿದ್ದರು' ಎಂದು ತಿರುಗೇಟು ನೀಡಿದರು ಎಂದು ಮೂಲಗಳು ಹೇಳಿವೆ.

ಈ ವೇಳೆ ಮಧ್ಯಪ್ರವೇಶಿಸಿದ ಲಕ್ಷ್ಮೀ ಹೆಬ್ಬಾಳಕರ, 'ನಾನು ಅಧ್ಯಕ್ಷೆಯಾದ ನಂತರ 10 ವರ್ಷದಿಂದ ಬಾಕಿ ಇದ್ದ ವಿದ್ಯುತ್ ಬಿಲ್ ಪಾವತಿಸಿದ್ದೇನೆ' ಎಂದರು. ಮಾತಿನ ಜಟಾಪಟಿ ನಡೆಯುತ್ತಿದ್ದಂತೆಯೇ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಇಬ್ಬರನ್ನೂ ಸಮಾಧಾನಪಡಿಸಿದರು ಎಂದೂ ಮೂಲಗಳು ಹೇಳಿವೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ



1.5 ಕೋಟಿ ಮಂದಿ ಪವಿತ್ರ ಸ್ನಾನ

ಲಖನೌ: ದಟ್ಟವಾಗಿ ಆವರಿಸಿದ ಮಂಜು, ತೀವ್ರ ಚಳಿಯ ನಡುವೆಯೇ ಅಂದಾಜು 1.5 ಕೋಟಿ ಭಕ್ತರು ಸೋಮವಾರ ಪವಿತ್ರ ಸ್ನಾನ ಮಾಡುವುದರೊಂದಿಗೆ ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಉತ್ಸವ ಮಹಾಕುಂಭ ಮೇಳಕ್ಕೆ ವಿಧ್ಯುಕ್ತ ಚಾಲನೆ ಲಭಿಸಿತು.

ಸನಾತನ ಧರ್ಮದಲ್ಲಿ ನಂಬಿಕೆಯಿರಿಸಿದ 1.5 ಕೋಟಿ ಮಂದಿ 'ಪುಷ್ಯ ಪೂರ್ಣಿಮಾ' ದಿನದಂದು ಪ್ರಯಾಗ್‌ರಾಜ್‌ನ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದರು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

5ನೇ ಪುಟ ನೋಡಿ


ಮಹಾಕುಂಭ ಮೇಳದ ಮೊದಲ ದಿನ ಪವಿತ್ರ ಸ್ನಾನ ಮಾಡಲು ಸಂಗಮದಲ್ಲಿ ನೆರೆದ ಭಕ್ತರು –ಪಿಟಿಐ ಚಿತ್ರ

ಎಂಬೆಸಿ ಪಬ್ಲಿಕ್ ಶಾಲಾ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂಬೆಸಿ ಪಬ್ಲಿಕ್ ಶಾಲಾ ವಾರ್ಷಿಕೋತ್ಸವ ಶನಿವಾರ ನಡೆಯಿತು.

ಡೊಳ್ಳು ಕುಣಿತ ನೃತ್ಯದ ಮೂಲಕ ಗಣ್ಯರನ್ನು ಸ್ವಾಗತಿಸಲಾಯಿತು. ಪ್ರಾಂಶುಪಾಲೆ ಪುಷ್ಪಲತಾ ಅವರು ವಾರ್ಷಿಕ ವರದಿ ವಾಚಿಸಿದರು. ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿ ಕಾರ್ಯಕ್ರಮಗಳು ಗಮನ ಸೆಳೆಯಿತು.

ಮಕ್ಕಳ ಹೃದ್ರೋಗ ತಜ್ಞೆ ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಸವಿತಾ ವೆಂಕಟೇಶ್, ಉಪಾಧ್ಯಕ್ಷ ಅಭಿಷೇಕ್, ಸಲಹೆಗಾರ ವೆಂಕಟೇಶ್, ನಿರ್ದೇಶಕಿ ಜಯಶ್ರೀ, ಶಾಲೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

ವಿವಿಧ ವಿಷಯಗಳಲ್ಲಿ ಶೇಕಡ 100 ಅಂಕ ಗಳಿಸಿದ 2023-2024ರ ಸಾಲಿನ ಎಂಟು ವಿದ್ಯಾರ್ಥಿಗಳಿಗೆ 5 ಗ್ರಾಂ. ಚಿನ್ನವನ್ನು ನೀಡಲಾಯಿತು.

ಬಿಬಿಎಂಪಿ: ಎಲ್ಲ ಆಸ್ತಿಗಳಿಗೂ ಖಾತಾ ನೀಡಿ, ತೆರಿಗೆ ವ್ಯಾಪ್ತಿಗೆ ತರುವ ಉದ್ದೇಶ

ಆಸ್ತಿ ಖಾತಾ ಇಲ್ಲದವರಿಗೆ ವೆಬ್‌ಸೈಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ-ರುವ ಆಸ್ತಿಗಳಿಗೆ ಖಾತಾ ಹೊಂದಿರದ ಮಾಲೀಕರ ಅನುಕೂಲಕ್ಕಾಗಿ ಹೊಸ ವೆಬ್‌ಸೈಟ್ (https://BBMP.karnataka.gov.in/NewKhata) ಆರಂಭಿಸಲಾಗಿದೆ.

ನಗರದಲ್ಲಿ ಐದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿ ಮಾಲೀಕರು ಬಿಬಿಎಂಪಿಯಿಂದ ಖಾತಾ ಹೊಂದಿಲ್ಲ. ಕೈಬರಹದ ಖಾತಾವನ್ನೂ ಹೊಂದಿರುವುದಿಲ್ಲ. ಖಾತಾ ಇಲ್ಲದೆಯೇ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಈ ಸ್ವತ್ತುಗಳಿಗೆ ಸಂಬಂಧಿಸಿದ ವಹಿವಾಟು ನಡೆಸುತ್ತಿದ್ದು, ಆಸ್ತಿ ತೆರಿಗೆ ವ್ಯಾಪ್ತಿಯಿಂದಲೂ ಹೊರಗುಳಿದಿವೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

ಎಲ್ಲ ಆಸ್ತಿಗಳಿಗೂ ಖಾತಾ ನೀಡಬೇಕು. ಎಲ್ಲವನ್ನೂ ತೆರಿಗೆ ವ್ಯಾಪ್ತಿಗೆ ತರಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೂಚಿಸಿದ್ದಾರೆ. ಅದರಂತೆ ಬಿಬಿಎಂಪಿ ಕ್ರಮ ಕೈಗೊಳ್ಳುತ್ತಿದೆ ಎಂದು ಹೇಳಿದರು.

ಮಾಲೀಕರು ಹೊಸದಾಗಿ ಖಾತಾ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಆಧಾರ್ ಸಂಖ್ಯೆ, ಮಾರಾಟ/ನೋಂದಣಿ ಪತ್ರದ ಸಂಖ್ಯೆ, ಆಸ್ತಿ ಚಿತ್ರ, ಮಾರಾಟ/ನೋಂದಣಿ ಪತ್ರಕ್ಕೆ ಕನಿಷ್ಠ ಒಂದು ದಿನ ಮೊದಲಿನಿಂದ ಆಸ್ತಿಯ 2024ರ ಅಕ್ಟೋಬರ್ 31ರವರೆಗಿನ ಅವಧಿಯ ಋಣಭಾರ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಹೊಸದಾಗಿ ಖಾತಾವನ್ನು ಪಡೆಯುವ ಪ್ರಕ್ರಿಯೆ ಕುರಿತು ಬಿಬಿಎಂಪಿ ವಿಡಿಯೊ (https://youtu.be/FRLimLizeHM?si=BxG9mgRWBU7RkP3B) ಮೂಲಕ ವಿವರಣೆ ನೀಡಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮಾಹಿತಿ ನೀಡಿದರು.

ಬಿಬಿಎಂಪಿಯಿಂದ ಕೈಬರಹ ಅಥವಾ ಇ- ಖಾತಾ ಹೊಂದಿದ್ದರೆ ಮತ್ತೆ ಹೊಸ ಖಾತಾ ಪಡೆಯಲು ಪ್ರಯತ್ನಿಸಬಾರದು. ಇಂತಹ ಪ್ರಯತ್ನಕ್ಕೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಅನಧಿಕೃತ ಜಾಹೀರಾತು: ಎಫ್‌ಐಆರ್ ದಾಖಲಿಸಲು ಸೂಚನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಅಳವಡಿಸಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲಿಯೂ ಅನಧಿಕೃತ ಜಾಹೀರಾತು ಇರದಂತೆ ನೋಡಿಕೊಳ್ಳಬೇಕು. ವಲಯಗಳಲ್ಲಿ ಜಾಹೀರಾತುಗಳನ್ನು ತೆರವುಗೊಳಿಸಿ, ಅದನ್ನು ಅಳವಡಿಸಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಮತ್ತೆ ಯಾವುದೇ ರೀತಿಯ ಅನಧಿಕೃತ ಜಾಹೀರಾತುಗಳನ್ನು ಅಳವಡಿಸದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಸೋಮವಾರ ನಡೆದ ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಬ್ಯಾಂಕ್‌ಗಳಿಗಾಗಿ 'ಸರ್ಫೇಸಿ ಕಾಯ್ದೆ'

ಆಸ್ತಿ ವಹಿವಾಟುಗಳಿಗೆ ಇ-ಖಾತಾ ಕಡ್ಡಾಯಗೊಳಿಸಿರುವುದರಿಂದ, ಭದ್ರತೆ, ಪುನರ್‌ನಿರ್ಮಾಣ, ಭದ್ರತೆ ಬಡ್ಡಿ ಜಾರಿ ಕಾಯ್ದೆ 2002 (ಸರ್ಫೇಸಿ ಕಾಯ್ದೆ) ನಿಬಂಧನೆಗಳ ಅಡಿ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ಆಸ್ತಿಗಳ ಮಾರಾಟ ಪ್ರಮಾಣ ಪತ್ರ ನೋಂದಾಯಿಸಲು ಅನುವಾಗುವಂತೆ, ಬಿಬಿಎಂಪಿ ಇ-ಖಾತಾ ವಿಧಾನವನ್ನು ರಚಿಸಿದೆ.

ಒಂದು ಸ್ವತ್ತನ್ನು ಅಡಮಾನವಿಟ್ಟು ಪಡೆದ ಸಾಲವನ್ನು ಮರು ಪಾವತಿ ಮಾಡಲು ವಿಫಲವಾದಾಗ, ಬ್ಯಾಂಕ್‌ಗಳು ಮಾರಾಟ ಪ್ರಮಾಣದ ಮೂಲಕ ಮಾರಾಟವನ್ನು ಕಾರ್ಯಗತಗೊಳಿಸುತ್ತವೆ. ಎಲ್ಲ ನೋಂದಣಿಗೂ ಇ-ಖಾತಾ ಕಡ್ಡಾಯವಾಗಿರುವುದರಿಂದ ಕೆಲವು ಬಾರಿ ಖಾತಾದಾರ ಸಹಕರಿಸದಿರಬಹುದು. ಆದ್ದರಿಂದ ಹಣಕಾಸು ಸಂಸ್ಥೆಗಳಿಗೆ ಅನುಕೂಲವಾಗಲು ಇ-ಖಾತಾ ಪ್ರಕ್ರಿಯೆಯಲ್ಲಿ ಅವರಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಸಂಕ್ರಾಂತಿ ಸಂಭ್ರಮ



ಭೋಗಿ ಹಬ್ಬದ ಅಂಗವಾಗಿ ಹಲಸೂರಿನ ಸೋಮೇಶ್ವರ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದರು ಚಿತ್ರ: ಎಸ್‌.ಕೆ. ದಿನೇಶ್



ನಗರದ ಗಾಂಧಿ ಬಜಾರ್ ಮಳಿಗೆಯೊಂದರಲ್ಲಿ ಸೋಮವಾರ ಮಹಿಳೆಯರು ಎಳ್ಳು, ಬೆಲ್ಲ ಖರೀದಿಸಿದರು ಚಿತ್ರ: ರಂಜು ಪಿ

ಬಿಬಿಎಂಪಿ ಕಚೇರಿ: ಹಲವು ನ್ಯೂನತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಂಜಿನಿಯರ್‌ಗಳು ಮತ್ತು ಕಂದಾಯ ಅಧಿಕಾರಿಗಳ ಕಚೇರಿಗಳಲ್ಲಿ ಅಧಿಕಾರಿಗಳು, ಸಿಬ್ಬಂದಿಯ ಅನಧಿಕೃತ ಗೈರು, ಕಡತ ವಿಲೇವಾರಿಯಲ್ಲಿ ನಿಯಮಗಳ ಉಲ್ಲಂಘನೆ ಸೇರಿದಂತೆ ಹಲವು ನ್ಯೂನತೆಗಳು ಕಂಡು ಬಂದಿವೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಸಾರ್ವಜನಿಕರ ದೂರುಗಳ ಆಧಾರದ ಮೇಲೆ ಹಾಗೂ ಬಾತ್ಮೀದಾರರಿಂದ ಬಂದ ಮಾಹಿತಿಗಳ ಮೇರೆಗೆ ಕಾರ್ಯಪಾಲಕ ಎಂಜಿನಿಯರ್ ಕಚೇರಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿ, ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿ ಹಾಗೂ ಇತರೆ ಕಚೇರಿಗಳಿಗೆ ಲೋಕಾಯುಕ್ತದ ಪೊಲೀಸ್, ಕಾನೂನು ಮತ್ತು ಇತರ ವಿಭಾಗಗಳ ಅಧಿಕಾರಿಗಳನ್ನು ಒಳಗೊಂಡ ತಂಡಗಳು ಶುಕ್ರವಾರ ದಿಢೀರ್ ಭೇಟಿನೀಡಿ ಪರಿಶೀಲನೆ ನಡೆಸಿದ್ದವು.

ಈ ಕುರಿತು ಸೋಮವಾರ ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿರುವ ಲೋಕಾಯುಕ್ತ, 'ಅಧಿಕಾರಿಗಳು ನಿತ್ಯ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡದಿರುವುದು, ಸರ್ಕಾರಿ ಕೆಲಸದ ಮೇಲೆ ಬೇರೆ ಕಚೇರಿಗಳಿಗೆ ತೆರಳಿದ್ದಲ್ಲಿ ಮಾಹಿತಿಯ ವಿವರಗಳನ್ನು ಪುಸ್ತಕದಲ್ಲಿ ನಮೂದು ಮಾಡಿರುವುದಿಲ್ಲ. ಹೊರಗುತ್ತಿಗೆ ನೌಕರರ ಹಾಜರಿ ಪುಸ್ತಕ ಸಹ ನಿರ್ವಹಣೆ ಮಾಡಿಲ್ಲ' ಎಂದು ತಿಳಿಸಿದೆ.

ನೌಕರರು ಹಾಗೂ ಹೊರಗುತ್ತಿಗೆ ನೌಕರರು ಕರ್ತವ್ಯಕ್ಕೆ ಹಾಜರಾದ ವೇಳೆ ತಮ್ಮ ಬಳಿ ಇರುವ ನಗದು ಕುರಿತು ಪುಸ್ತಕದಲ್ಲಿ ನಮೂದು ಮಾಡಬೇಕು. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳನ್ನು ಸಕಾಲ ಯೋಜನೆಯಡಿ ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡಬೇಕು. ಆದರೆ, ಸಕಾಲದ ಅವಧಿ ಮುಗಿದರೂ ಅರ್ಜಿಗಳನ್ನು ವಿಲೇ ಮಾಡದಿರುವುದು ಕಂಡು ಬಂದಿದೆ ಎಂದು ಹೇಳಿದೆ.

ನಿಯಮಗಳನ್ನು ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳ ವಿರುದ್ಧ ಕ್ರಮ ಕೈಗೊಂಡು ನೆಲಸಮ ಮಾಡುವ ಬಗ್ಗೆ ಅಥವಾ ಸ್ಥಳ ಪರಿಶೀಲನೆ ಬಗ್ಗೆ ಕ್ರಮ ಕೈಗೊಂಡಿಲ್ಲ. ಸಾರ್ವಜನಿಕರಿಗೆ ಲಭ್ಯವಿರುವ ಸೇವೆಗಳ ಬಗ್ಗೆ ಕಚೇರಿ ಆವರಣದಲ್ಲಿ ಫಲಕಗಳನ್ನು ಅಳವಡಿಸಿಲ್ಲ. ಅಧಿಕಾರಿ ಮತ್ತು ಸಿಬ್ಬಂದಿ ಬಳಿ ನಗದು ಘೋಷಣಾ ಪುಸ್ತಕದಲ್ಲಿ ನಮೂದು ಮಾಡಿ-ರುವುದಕ್ಕಿಂತ ಹೆಚ್ಚುವರಿ ಹಣ ದೊರೆತಿರುವುದು ಕಂಡು ಬಂದಿದೆ ಎಂದು ವಿವರ ನೀಡಿದೆ.

ಖಾಸಗಿ ವ್ಯಕ್ತಿಗಳನ್ನು ಅನಧಿಕೃತವಾಗಿ ಕಚೇರಿ ಕರ್ತವ್ಯಕ್ಕೆ ನೇಮಿಸಿಕೊಂಡು, ಅಧಿಕಾರಿಗಳೇ ತಿಂಗಳ ಸಂಭಾವನೆ ನೀಡುತ್ತಿದ್ದಾರೆ. ಕೆಲ ಕಚೇರಿಗಳಲ್ಲಿ ಹೊರಗುತ್ತಿಗೆ ನೌಕರರನ್ನು ಹೊರತುಪಡಿಸಿ ಕಚೇರಿಯ ಕಾಯಂ ಸಿಬ್ಬಂದಿ ಗೈರಾಗಿದ್ದರು. ಸಂಬಂಧಪಟ್ಟವರಿಗೆ ಅಧಿಕಾರ ಹಂಚಿಕೆ ಮಾಡದಿರುವುದು ಭೇಟಿ ವೇಳೆ ಗೊತ್ತಾಯಿತು ಎಂದು ತಿಳಿಸಿದೆ.

'ಸ್ತ್ರೀಯರ ಮೇಲಿನ ದೌರ್ಜನ್ಯ ಶೇ 1,200ರಷ್ಟು ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚೆಗೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಪ್ರಮಾಣ ಶೇ 1,200ರಷ್ಟು ಹೆಚ್ಚಾಗಿದೆ' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಹೇಳಿದರು.

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಎಸ್‌ಇಸಿ) ಸೋಮವಾರ ಆಯೋಜಿಸಿದ್ದ ಭಾರತದಲ್ಲಿ ಕೌಟುಂಬಿಕ ಮತ್ತು ಲೈಂಗಿಕ ದೌರ್ಜನ್ಯಗಳ ನಿಯಂತ್ರಿಸಲು ಅಂಕಿ–ಅಂಶಗಳ ಆಧಾರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಹಿಳೆ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ಮಹಿಳಾ ಆಯೋಗವು ರಾಜ್ಯದಾದ್ಯಂತ ಪ್ರವಾಸ ಕೈಗೊಂಡು, ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ' ಎಂದು ತಿಳಿಸಿದರು.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ ಅಂಕಿ–ಅಂಶಗಳ ಪ್ರಕಾರ 2023ರ ಅವಧಿಯಲ್ಲಿ ದೇಶದಲ್ಲಿ 4.45 ಲಕ್ಷ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯ ನಡೆದಿರುವುದಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಇಂತಹ 17,813 ಪ್ರಕರಣ ನಡೆದಿವೆ. ಈ ದೌರ್ಜನ್ಯ ಪ್ರಕರಣಗಳನ್ನು ನಿಯಂತ್ರಿಸಲು ಇರುವ ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು ಎಂದರು.

ವಿಮೋಚನೆ ಸಂಸ್ಥೆಯ ಸಂಸ್ಥಾಪಕ ಕೊರಿನ್ ಕುಮಾರ್, ಪ್ರಮೋದ್ ಕುಮಾರ್ ಉಪಸ್ಥಿತರಿದ್ದರು.

ಪರೀಕ್ಷಾರ್ಥಿಗಳ ಪ್ರತಿಭಟನೆಗೆ ಆಪ್ ಬೆಂಬಲ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿನ ಲೋಪದೋಷಗಳನ್ನು ಖಂಡಿಸಿ ಪರೀಕ್ಷಾರ್ಥಿಗಳು ಹಮ್ಮಿಕೊಂಡಿರುವ ಹೋರಾಟಕ್ಕೆ ಆಮ್ ಆದ್ಮಿ ಪಕ್ಷ (ಆಪ್) ಬೆಂಬಲ ನೀಡಿದೆ.

ಜನವರಿ 15ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುವ ಪರೀಕ್ಷಾರ್ಥಿಗಳ ಪ್ರತಿಭಟನೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಸಹಿತ ಎಲ್ಲ ನಾಯಕರು, ಕಾರ್ಯಕರ್ತರು ಭಾಗವಹಿಸುವರು ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಮಾ ರ್‌ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿ ಭಾಷಾಂತರ ಸಮಸ್ಯೆ, ಮರು ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲೂ ಲೋಪದೋಷ, ಫಲಿತಾಂಶ ಬಂದರೂ ನೇಮಕಾತಿ ಪತ್ರ ನೀಡದೆ ಇರುವುದು, ಸದಸ್ಯರ ನಡುವೆ ಒಮ್ಮತದ ಕೊರತೆ, ಕಾಲಕಾಲಕ್ಕೆ ನೇಮಕಾತಿ ಪ್ರಕ್ರಿಯೆ ನಡೆಸದಿರುವುದು ಸೇರಿದಂತೆ ಅನೇಕ ಗೊಂದಲಗಳನ್ನು ಶೀಘ್ರವೇ ಸರ್ಕಾರವು ಬಗೆಹರಿಸಬೇಕು ಎಂದು ಒತ್ತಾಯಿಸಿದರು..

ರಥೋತ್ಸವ, ಕಡಲೆಕಾಯಿ ಪರಿಷೆ ಇಂದು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸೋಂಪುರ ಬಸವೇಶ್ವರಸ್ವಾಮಿ ದೇಗುಲದ ಆವರಣದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಜ.14ರಂದು ಬಸವೇಶ್ವರ ಸ್ವಾಮಿ ರಥೋತ್ಸವ ಹಾಗೂ ಕಡಲೆಕಾಯಿ ಪರಿಷೆ ನಡೆಯಲಿದೆ.

ಲಕ್ಷಾಂತರ ಜನ ಪಾಲ್ಗೊಳ್ಳುವ ಜಾತ್ರೆಯಲ್ಲಿ ಶ್ರೀಶೈಲ ಭ್ರಮರಾಂಭಿಕಾದೇವಿ ಮಲ್ಲಿಕಾರ್ಜುನ ಸ್ವಾಮಿ ಕಲ್ಯಾಣೋತ್ಸವ ಆಯೋಜಿಸಲಾಗಿದೆ. ಅನ್ನದಾಸೋಹ, ಕಡಲೆಕಾಯಿ, ಕಬ್ಬು ವಿತರಣೆ, ಮನರಂಜನಾ ಕಾರ್ಯಕ್ರಮ ನಡೆಯಲಿವೆ.

'ಬೆಳಿಗ್ಗೆ ಜಾತ್ರೆ ಆರಂಭವಾಗಲಿದೆ. ಮಧ್ಯಾಹ್ನ 12ಕ್ಕೆ ರಥೋತ್ಸವ ಜರುಗಲಿದೆ. 500ಕ್ಕೂ ಅಧಿಕ ಗರ್ಭಿಣಿಯರಿಗೆ ಸೀಮಂತ ಹಮ್ಮಿಕೊಳ್ಳಲಾಗಿದೆ. ಲಾಟರಿ ಮೂಲಕ ಆಯ್ಕೆಯಾಗುವ 5 ಮಂದಿ ಅದೃಷ್ಟಶಾಲಿ ಗರ್ಭಿಣಿಯರ ಸಂಪೂರ್ಣ ಪ್ರಸೂತಿ ವೆಚ್ಚವನ್ನು ಭರಿಸಲಾಗುವುದು' ಎಂದು ಬಸವಣ್ಣ ದೇವರ ಸೇವಾ ಸಮಿತಿ ಅಧ್ಯಕ್ಷ ಎಂ. ರುದ್ರೇಶ್ ತಿಳಿಸಿದ್ದಾರೆ.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಮ್ಮಡಿ ನಿರ್ವಾಣ ಸ್ವಾಮೀಜಿ, ಶ್ರೀರಂಗಪಟ್ಟಣದ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಮುಮ್ಮಡಿ ಶಿವರುದ್ರ ಸ್ವಾಮೀಜಿ, ಬಂಡೇ ಮಠದ ಸಚ್ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಂಸದರಾದ ಯದುವೀರ್ ಒಡೆಯರ್, ಡಾ.ಸಿ.ಎನ್. ಮಂಜುನಾಥ್, ಶೋಭಾ ಕರಂದ್ಲಾಜೆ, ಉದ್ಯಮಿ ಅಶೋಕ್ ಖೇಣಿ, ಶಾಸಕ ಎಸ್.ಟಿ. ಸೋಮಶೇಖರ್ ಭಾಗವಹಿಸಲಿದ್ದಾರೆ.

ಹುಸಿ ಬಾಂಬ್ ಕರೆ ಮಾಡಿ ಸಿಕ್ಕಿಬಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವ ವೇಳೆ ನಗರದ ವಿವಿಧೆಡೆ ಬಾಂಬ್ ಸ್ಫೋಟಿಸಲು ಸಂಚು ರೂಪಿಸಲಾಗಿದೆ ಎಂದು ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ಆರೋಪಿ ಮನ್ಸೂರ್ ಎಂಬುವವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಮನ್ಸೂರ್

ಪೊಲೀಸ್ ನಿಯಂತ್ರಣ ಕೊಠಡಿಯ ಪಿಎಸ್ಐ ನೀಡಿದ ದೂರಿನ ಮೇರೆಗೆ ವಿಧಾನಸೌಧ ಠಾಣೆ ಪೊಲೀಸರು ಎಫ್ಐಆರ್ ದಾಖಲಿಸಿಕೊಂಡು ತನಿಖೆ ನಡೆಸಿ, ಆರೋಪಿ ಮನ್ಸೂರ್‌ನನ್ನು ಬಂಧಿಸಿದ್ದಾರೆ.

'ಜನವರಿ 9ರಂದು ಸಂಜೆ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ಮನ್ಸೂರ್, ರಿಯಾಜ್ ಎಂಬ ಹೆಸರಿನಲ್ಲಿ ಪರಿಚಯಿಸಿಕೊಂಡು, 'ರಾಮೇಶ್ವರಂ ಕೆಫೆಯಲ್ಲಿ ಸ್ಫೋಟಿಸಿದಂತೆ ನಗರದ ವಿವಿಧೆಡೆ ಗಣರಾಜ್ಯೋತ್ಸವ ದಿನ ಸ್ಫೋಟ ನಡೆಸಲು ಮೂವರು ಸಂಚು ರೂಪಿಸಿದ್ದಾರೆ ಎಂದು ಆರು ಜನರ ಹೆಸರು ಮತ್ತು ವಿಳಾಸ ತಿಳಿಸಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ. ಪರಿಶೀಲಿಸಿದಾಗ ಅದು ಹುಸಿ ಕರೆ ಎಂದು ಗೊತ್ತಾಯಿತು. ಬಳಿಕ ಕರೆ ಮಾಡಿದ್ದ ವ್ಯಕ್ತಿಯ ಮೊಬೈಲ್ ಲೋಕೇಷನ್ ಆಧರಿಸಿ ಸ್ಥಳಕ್ಕೆ ತೆರಳಿ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಸುಳ್ಳು ಮಾಹಿತಿ ನೀಡಿರುವುದು ಗೊತ್ತಾಯಿತು ಎಂದು ಹೇಳಿದ್ದಾರೆ.

'ಕೆ.ಆರ್.ಮಾರ್ಕೆಟ್ ಬಳಿ ಆರೋಪಿ ಮನ್ಸೂರ್ ನಡೆಸುತ್ತಿದ್ದ ದಿನಸಿ ಅಂಗಡಿಯಲ್ಲಿ ನಷ್ಟವುಂಟಾಗಿ, ಅದನ್ನು ಮುಚ್ಚಲಾಗಿತ್ತು. ಬಳಿಕ ಮನ್ಸೂರ್ ಹೊಸದಾಗಿ ಆರಂಭಿಸಿದ್ದ ಗುಜರಿ ವ್ಯಾಪಾರ ಸಹ ಕೈಹಿಡಿದಿರಲಿಲ್ಲ. ಇದರಿಂದ ಸಿಟ್ಟಿಗೆದ್ದ ಆರೋಪಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಬಾಂಬ್ ಸ್ಫೋಟದ ಕಥೆ ಹೇಳಿದ್ದ. ತನ್ನ ವ್ಯಾಪಾರಕ್ಕೆ ಪ್ರತಿಸ್ಪರ್ಧಿಗಳಾಗಿದ್ದವರ ಹೆಸರು ಹಾಗೂ ವಿಳಾಸಗಳನ್ನು ನೀಡಿ, ಇವರೇ ಸ್ಫೋಟಿಸಲು ಸಂಚು ರೂಪಿಸಿರುವ ಆರೋಪಿಗಳು ಎಂದು ಹೇಳಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಜಾತಿವಾರು ಜನಗಣತಿ ವರದಿ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2015 (ಜಾತಿವಾರು ಜನಗಣತಿ) ವರದಿ ಬಿಡುಗಡೆ ಮಾಡಬೇಕು ಎಂದು ಅಹಿಂದ ಚಳವಳಿ ಸರ್ಕಾರವನ್ನು ಆಗ್ರಹಿಸಿದೆ.

ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಿದಂತೆ, ಜನಸಂಖ್ಯೆಗೆ ಅನುಗುಣವಾಗಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಜಾತಿಗಳ ಮೀಸಲಾತಿ ಪ್ರಮಾಣವನ್ನು ಶೇಕಡ 32 ರಿಂದ 55ಕ್ಕೆ ಹೆಚ್ಚಳ ಮಾಡಬೇಕು ಎಂದು ಅಹಿಂದ ಚಳವಳಿಯ ಮುಖ್ಯ ಸಂಚಾಲಕ ಎಸ್. ಮೂರ್ತಿ ಒತ್ತಾಯಿಸಿದ್ದಾರೆ.

ಈ ವರದಿಯಲ್ಲಿ ಹಿಂದುಳಿದ ವರ್ಗಗಳ ಜನಸಂಖ್ಯೆಯ ವಿವರ ಲಭ್ಯವಿಲ್ಲ. ಹಿಂದುಳಿದ ವರ್ಗಗಳಿಗೆ (ಅಲ್ಪಸಂಖ್ಯಾತರನ್ನು ಒಳಗೊಂಡು) ಸರ್ಕಾರ ಒದಗಿಸಿರುವ ಮೀಸಲಾತಿ ಶೇಕಡ 32ರಷ್ಟಿದೆ. ಈ ಸಮುದಾಯಗಳಿಗೆ ಜನಸಂಖ್ಯೆ ಆಧಾರದ ಮೇಲೆ ನೀಡಬೇಕಾಗಿರುವ ಪ್ರಮಾಣದಲ್ಲಿ ಮೀಸಲಾತಿ ನೀಡಿಲ್ಲ. ಅನ್ಯಾಯಕ್ಕೆ ಒಳಗಾಗಿರುವ ಸಮುದಾಯಗಳಿಗೆ ನ್ಯಾಯ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಸಾರಿಗೆ ನೌಕರರ ಸಭೆ ಕರೆಯಲು ಆಗ್ರಹ

ಬೆಂಗಳೂರು: ಸಾರಿಗೆ ನಿಗಮದ ನೌಕರರ ವೇತನ ಹೆಚ್ಚಳ ಮತ್ತು ಇತರ ಬೇಡಿಕೆಯ ಬಗ್ಗೆ ಚರ್ಚಿಸಲು ದಿನ ನಿಗದಿ ಮಾಡುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ.

ನಿಗಮಗಳ ನೌಕರರ ಬೇಡಿಕೆ ಈಡೇರಿಸಲು ಡಿ.31ರಂದು ಮುಷ್ಕರ ನಡೆಸಲು ನಿರ್ಧರಿಸಲಾಗಿತ್ತು. ಸಂಕ್ರಾಂತಿ ಬಳಿಕ ಸಭೆ ಕರೆದು ಚರ್ಚೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದರಿಂದ ಮುಷ್ಕರ ಹಿಂತೆಗೆದುಕೊಳ್ಳಲಾಗಿತ್ತು.



ಮಂಗಳೂರು: ಒಂದೇ ದಿನ 7,710 ಜನರ ಪ್ರಯಾಣ

ಮಂಗಳೂರು: ಬಜಪೆಯ ಮಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣವನ್ನು ಭಾನುವಾರ (ಜ.12) ಒಟ್ಟು 7,710 ಪ್ರಯಾಣಿಕರು ಬಳಸಿದ್ದು, ಇದು ಹೊಸ ದಾಖಲೆಯಾಗಿದೆ. ಈ ವಿಮಾನ ನಿಲ್ದಾಣವು ವಾಣಿಜ್ಯ ಕಾರ್ಯಾಚರಣೆ ಆರಂಭಿಸಿದ ಬಳಿಕ ಒಂದೇ ದಿನದಲ್ಲಿ ನಿರ್ವಹಿಸಿದ ಪ್ರಯಾಣಿಕರ ಗರಿಷ್ಠ ಸಂಖ್ಯೆ ಇದಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಾನುವಾರ 24 ವಿಮಾನಗಳು ಇಲ್ಲಿ ಇಳಿದಿದ್ದು, 25 ವಿಮಾನಗಳು ಇಲ್ಲಿಂದ ಪ್ರಯಾಣ ಬೆಳೆಸಿವೆ. ಅವುಗಳಲ್ಲಿ 7,613 ವಯಸ್ಕರು, 97 ಮಕ್ಕಳು ಪ್ರಯಾಣಿಸಿದ್ದಾರೆ. ವಿಮಾನನಿಲ್ದಾಣದಲ್ಲಿ ಶನಿವಾರವೂ ಪ್ರಯಾಣಿಕರ ದಟ್ಟಣೆ ಹೆಚ್ಚಿತ್ತು. ಅಂದು 48 ವಿಮಾನಗಳು ಹಾರಾಟ ನಡೆಸಿದ್ದು, 7,538 ಪ್ರಯಾಣಿಕರು ಪ್ರಯಾಣಿಸಿದ್ದರು.









ಕೆಇಎ ಹೆಚ್ಚುವರಿ ಕಟ್ಟಡ ನಿರ್ಮಾಣ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಸಚಿವ ಡಾ. ಎಂ.ಸಿ. ಸುಧಾಕರ್

ಒಮ್ಮೆ ಸಲ್ಲಿಸುವ ದಾಖಲೆ ಎಲ್ಲ ಪರೀಕ್ಷೆಗೆ ಅನ್ವಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ದಾಖಲೆ ನೀಡುವ ಬದಲು ಒಮ್ಮೆ ನೀಡಿದರೆ ಎಲ್ಲ ಪರೀಕ್ಷೆಗಳಿಗೆ ಅದೇ ದಾಖಲೆಗಳು ಬಳಕೆಯಾಗುವಂತೆ ತಂತ್ರಾಂಶ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಸೋಮವಾರ ನಡೆದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಹೆಚ್ಚುವರಿ ಕಟ್ಟಡ ನಿರ್ಮಾಣದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆ-ಸೆಟ್ ಪರೀಕ್ಷೆ ಅಥವಾ ಯಾವುದೇ ನೇಮಕಾತಿ ಪರೀಕ್ಷೆಗಳಿಗೆ ಒಮ್ಮೆ ದಾಖಲೆಗಳನ್ನು ಸಲ್ಲಿಸಿದವರು ಮುಂದೆ ಇನ್ನೊಂದು ಪರೀಕ್ಷೆ ಬರೆಯಲು ದಾಖಲೆಗಳನ್ನು ಸಲ್ಲಿಸಬೇಕಿಲ್ಲ. ಅರ್ಜಿ ಸಲ್ಲಿಸಿದರೆ ಸಾಕು. ಅಂಥ ತಂತ್ರಜ್ಞಾನವನ್ನು ಕೆಇಎ ಅಳವಡಿಸಿಕೊಳ್ಳುತ್ತಿದೆ ಎಂದು ಮಾಹಿತಿ ನೀಡಿದರು.

ಡಿಜಿಟಲ್ ತಂತ್ರಜ್ಞಾನದ ಸದ್ಬಳಕೆ ಮತ್ತು ದುರ್ಬಳಕೆ ಎರಡೂ ಇವೆ. ಕಳೆದ ವರ್ಷ ನೀಟ್ ಪರೀಕ್ಷೆಯಲ್ಲಿ ಉಂಟಾದ ಗೊಂದಲವು ಪರೀಕ್ಷಾ ವ್ಯವಸ್ಥೆಗೆ ಸವಾಲಾಗಿತ್ತು. ಕೆಇಎ ವೆಬ್‌ಕಾಸ್ಟಿಂಗ್ ಕಣ್ಗಾವಲಿನಲ್ಲಿ ನೇಮಕಾತಿ ಪರೀಕ್ಷೆ ನಡೆಸುವ ಮೂಲಕ ತಂತ್ರಜ್ಞಾನದ ದುರ್ಬಳಕೆಯನ್ನು ತಡೆಯಲಾಗಿದೆ ಎಂದು ಹೇಳಿದರು.

ಕಳೆದ ವರ್ಷ ಸುಮಾರು 18 ಇಲಾಖೆಗಳ 6 ಸಾವಿರಕ್ಕೂ ಅಧಿಕ ಹುದ್ದೆಗಳಿಗೆ ಯಾವುದೇ ಗೊಂದಲ ಇಲ್ಲದಂತೆ ನೇಮಕಾತಿ ಪರೀಕ್ಷೆ ನಡೆಸಲಾಗಿದೆ. ಸಹಾಯಕ ಪ್ರಾಧ್ಯಾಪಕ ಹುದ್ದೆ, ತಾಂತ್ರಿಕ ಶಿಕ್ಷಕ ಇಲಾಖೆಯ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಸಹಾಯವಾಣಿ ಜಾಮ್ ಆಗುವುದು, ಸರ್ವರ್ ಸಮಸ್ಯೆಯಿಂದ ಫಲಿತಾಂಶ ಘೋಷಣೆ ತಡವಾಗುವುದು ಮುಂತಾದ ಸಮಸ್ಯೆ ಸರಿಪಡಿಸಲು ಪ್ರತ್ಯೇಕ ಸರ್ವರ್ ಅಳವಡಿಸಿಕೊಳ್ಳುವ ಚಿಂತನೆ ಇದೆ ಎಂದರು.

ಸಮಾಜದಲ್ಲಿ ದಾರಿ ತಪ್ಪಿಸುವವರ ಸಂಖ್ಯೆ ದೊಡ್ಡದಿದೆ. ಅಧಿಕಾರಿಗಳು, ಸಿಬ್ಬಂದಿ ಯಾವುದೇ ಆಮಿಷಕ್ಕೆ ಒಳಗಾಗದೇ ಪರೀಕ್ಷೆ ನಡೆಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಶುಲ್ಕ ನಿಯಂತ್ರಣ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಬಿ. ಶ್ರೀನಿವಾಸಗೌಡ, ವಿಶ್ರಾಂತ ಕುಲಪತಿ ತಿಮ್ಮೇಗೌಡ, ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸನ್ನ ಎಚ್, ಆಡಳಿತಾಧಿಕಾರಿ ಇಸ್ಲಾವುದ್ದಿನ್ ಜೆ. ಗದ್ಯಾಳ ಭಾಗವಹಿಸಿದ್ದರು.



ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಹೆಚ್ಚುವರಿ ಕಟ್ಟಡಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಲಾನ್ಯಾಸ ನೇರವೇರಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ, ಗೃಹಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಕೇಂದ್ರದಿಂದ ಮತ್ತೆ ಅನ್ಯಾಯ’

ಬೆಂಗಳೂರು: ಕೇಂದ್ರ ಸರ್ಕಾರ ಇತ್ತೀಚೆಗೆ ರಾಜ್ಯಗಳಿಗೆ ತೆರಿಗೆ ಮತ್ತು ಸುಂಕದ ಪಾಲಿನ ರೂಪದಲ್ಲಿ ₹1,73,030 ಕೋಟಿ ಬಿಡುಗಡೆ ಮಾಡಿದ್ದು, ಕರ್ನಾಟಕಕ್ಕೆ ಕೇವಲ ₹6,310 ಕೋಟಿ ಬಿಡುಗಡೆ ಮಾಡುವ ಮೂಲಕ ಅನ್ಯಾಯ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದ್ದಾರೆ.

ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 5 ರಷ್ಟು ಕನ್ನಡಿಗರಿದ್ದರೂ ದೇಶದ ಜಿಡಿಪಿಯಲ್ಲಿ ಕನ್ನಡಿಗರ ಪಾಲಿನ ಪ್ರಮಾಣ ಶೇ 8.4 ಆಗಿದೆ. ಅತಿ ಹೆಚ್ಚು ಜಿಎಸ್‌ಟಿ ಪಾವತಿಸುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹ ಶೇ 17 ರಷ್ಟು ಹೆಚ್ಚಾಗುತ್ತಿದೆ. ಹೀಗಿದ್ದರೂ ತೆರಿಗೆ ಹಂಚಿಕೆಯಲ್ಲಿ ರಾಜ್ಯದ ಪಾಲು ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡುತ್ತಾ ಬರಲಾಗುತ್ತಿದೆ. ಈ ಅನ್ಯಾಯ ಏಕೆ ಎಂದು ಪ್ರಶ್ನಿಸಿದ್ದಾರೆ.

2018–19 ರಲ್ಲಿ ₹24.42 ಲಕ್ಷ ಕೋಟಿಗಳಷ್ಟಿದ್ದ ಕೇಂದ್ರದ ಬಜೆಟ್ ಗಾತ್ರ, 2024–25 ರಲ್ಲಿ ₹46.28 ಲಕ್ಷ ಕೋಟಿಯಷ್ಟಾಗಿದೆ. 2018–19 ರಲ್ಲಿ ಕರ್ನಾಟಕಕ್ಕೆ ನೀಡಿರುವ ತೆರಿಗೆ ಪಾಲು ₹46,288 ಕೋಟಿಗಳಾಗಿದ್ದರೆ, 2024–25 ರಲ್ಲಿ ಇದು ₹44,485 ಕೋಟಿ ಮಾತ್ರ. ಈ ತೆರಿಗೆ ಪಾಲು ಕನಿಷ್ಠ ₹1 ಲಕ್ಷ ಕೋಟಿ ಆಗಬೇಕಿತ್ತು ಎಂದು ಹೇಳಿದ್ದಾರೆ.

ಬಿಜೆಪಿಯವರು ಬಾಯಿ ಬಿಟ್ಟರೆ ದೇಶ ಪ್ರೇಮದ ಬಗ್ಗೆ ಮಾತನಾಡುತ್ತಾರೆ. ರಾಜ್ಯವನ್ನೇ ಪ್ರೀತಿಸದವರು ದೇಶವನ್ನು ಹೇಗೆ ಪ್ರೀತಿಸಲು ಸಾಧ್ಯ? ಕೇಂದ್ರ ಸರ್ಕಾರ ಸೇಡು ತೀರಿಸಿಕೊಳ್ಳುವವರಂತೆ ಕರ್ನಾಟಕಕ್ಕೆ ನಿರಂತರವಾಗಿ ಮಾಡುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಬೇಕಿದ್ದ ಬಿಜೆಪಿ ನಾಯಕರು ಮತ್ತು ಸಂಸದರು ಅನ್ಯಾಯಕೋರ ಕೇಂದ್ರ ಸರ್ಕಾರವನ್ನು ಸಮರ್ಥಿಸುತ್ತಿರುವುದು ಕನ್ನಡಿಗರಿಗೆ ಮಾಡುತ್ತಿರುವ ಅನ್ಯಾಯ ಎಂದು ಟೀಕಿಸಿದ್ದಾರೆ.



ಅಪಘಾತ: ಪರಿಹಾರ ಇಳಿಕೆಗೆ ಆದೇಶ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಮೋಟಾರು ವಾಹನ ಅಪಘಾತ ಪ್ರಕರಣಗಳಲ್ಲಿ ನೀಡುವ ಒಟ್ಟಾರೆ ಪರಿಹಾರದಲ್ಲಿ ವೈದ್ಯಕೀಯ ಪರಿಹಾರದ ಅಡಿಯಲ್ಲಿ ಪಾವತಿಸಿರುವ ಮೊತ್ತವನ್ನು ಕಡಿತಗೊಳಿಸಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಪ್ರಕರಣವೊಂದರಲ್ಲಿ ಮಾರತ್‌ಹಳ್ಳಿ ಚಾಮುಂಡೇಶ್ವರಿ ಲೇ ಔಟ್‌ನ ಹನುಮಂತಪ್ಪ ಪರ, ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿ (ಎಂಎಸಿಟಿ) ನೀಡಿದ್ದ ಆದೇಶ ಪ್ರಶ್ನಿಸಿ, ‘ದಿ ಓರಿಯಂಟಲ್ ವಿಮಾ ಕಂಪನಿ’ ಸಲ್ಲಿಸಿದ್ದ ಎಂಎಫ್‌ಎ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಈ ಪ್ರಕರಣದಲ್ಲಿ ಪರಿಹಾರವನ್ನು ನಿಗದಿಪಡಿಸುವಾಗ ಈಗಾಗಲೇ ವೈದ್ಯಕೀಯ ಪರಿಹಾರ ವಿಮಾ ನೀತಿಯಡಿ ಪಡೆಯಲಾಗಿರುವ ವೈದ್ಯಕೀಯ ವೆಚ್ಚವನ್ನು ಕಡಿತಗೊಳಿಸಬೇಕಾಗುತ್ತದೆ. ಹಾಗಾಗಿ, ಉಳಿದ ಪರಿಹಾರ ಮೊತ್ತವನ್ನು ವಿಮಾ ಕಂಪನಿ ಪಾವತಿಸಬೇಕು’ ಎಂದು ನ್ಯಾಯಪೀಠ ಹೇಳಿದೆ.

‘ಅರ್ಜಿದಾರರ ಕುಟುಂಬಕ್ಕೆ ಮೆಡಿಕ್ಲೇಮ್ ಪಾಲಿಸಿ ಅಡಿ ನೀಡಿರುವ ₹1.8 ಲಕ್ಷ ಮೊತ್ತವನ್ನು ಕಡಿತಗೊಳಿಸಿ ಉಳಿದ ಪರಿಹಾರಕ್ಕೆ ವಾರ್ಷಿಕ ಶೇ 6ರಷ್ಟು ಬಡ್ಡಿ ಸೇರಿಸಿ ₹4,93,839 ಪರಿಹಾರ ಪಾವತಿಸಬೇಕು’ ಎಂದು ವಿಮಾ ಕಂಪನಿಗೆ ಆದೇಶಿಸಿದೆ.

ಪ್ರಕರಣವೇನು?: ಹನುಮಂತಪ್ಪ 2008ರ ಡಿಸೆಂಬರ್ 10ರಂದು ಲೇಪಾಕ್ಷಿಯಿಂದ ಸೇವಾಮಂದಿರ ಗ್ರಾಮಕ್ಕೆ ತಮ್ಮ ಮೋಟಾರ್ ಸೈಕಲ್‌ನಲ್ಲಿ ತೆರಳುವಾಗ ಆಟೊ ರಿಕ್ಷಾಕ್ಕೆ ಡಿಕ್ಕಿ ಹೊಡೆದಿದ್ದರು. ಆಗ ಅವರು ಮತ್ತು ಅವರ ಪತ್ನಿ ಗಂಭೀರವಾಗಿ ಗಾಯಗೊಂಡಿದ್ದರು. ಈ ಕುರಿತಂತೆ ಹಿಂದೂಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಹನುಮಂತಪ್ಪ ಬೆಂಗಳೂರಿನ ಎಂಎಸಿಟಿಯಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದರು. ನ್ಯಾಯಮಂಡಳಿ ವೈದ್ಯಕೀಯ ವೆಚ್ಚ ಸೇರಿದಂತೆ ಒಟ್ಟು ₹6,73,839 ಪರಿಹಾರ ನೀಡುವಂತೆ 2013ರ ಮಾರ್ಚ್ 22ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ವಿಮಾ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು.

‘ಕೆಎಎಸ್ ಪೂರ್ವಭಾವಿ ಪರೀಕ್ಷೆ ಫಲಿತಾಂಶ ರದ್ದುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಅಧಿಕಾರಿಗಳ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಇತ್ತೀಚೆಗೆ ನಡೆಸಿದ ಪೂರ್ವಭಾವಿ ಪರೀಕ್ಷೆಯ ಫಲಿತಾಂಶವನ್ನು ರದ್ದುಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಲೋಕೇಶ್ ವಿ., ‘ಈ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆ 1ರ 32 ಪ್ರಶ್ನೆಗಳು ಹಾಗೂ ಪ್ರಶ್ನೆಪತ್ರಿಕೆ–02ರ 27 ಪ್ರಶ್ನೆಗಳು ಸೇರಿ ಒಟ್ಟು 59 ಪ್ರಶ್ನೆಗಳಲ್ಲಿ ಭಾಷಾಂತರ ದೋಷ ಹಾಗೂ ತಪ್ಪುಗಳಿವೆ. ಇಂಗ್ಲಿಷ್‌ನಲ್ಲಿದ್ದ ಪ್ರಶ್ನೆಗಳ ಮೂಲ ಅರ್ಥಕ್ಕೂ ಕನ್ನಡ ಅನುವಾದಗೊಂಡ ಪ್ರಶ್ನೆಗಳ ಅರ್ಥಕ್ಕೂ ವ್ಯತ್ಯಾಸಗಳು ಕಂಡು ಬಂದಿವೆ’ ಎಂದು ಆರೋಪಿಸಿದರು.



‘ಪ್ರಶ್ನೆಗಳ ವಾಕ್ಯ ರಚನೆಯಲ್ಲಿ ಹಲವು ದೋಷಗಳು ಉಳಿದುಕೊಂಡಿದ್ದವು. ಕನ್ನಡ ಮಾಧ್ಯಮದ ಅಭ್ಯರ್ಥಿಗಳು ಈ ಪ್ರಶ್ನೆಗಳನ್ನು ಸುಲಭವಾಗಿ ಗ್ರಹಿಸಿ ಅರ್ಥಮಾಡಿಕೊಳ್ಳಲು ಆಗಿರಲಿಲ್ಲ. ಕೆಪಿಎಸ್‌ಸಿಯಲ್ಲಿ ಭಾಷಾಂತರ ವಿಭಾಗವಿಲ್ಲ. ಕನ್ನಡದಲ್ಲಿ ಮೊದಲು ಪ್ರಶ್ನೆಪತ್ರಿಕೆ ತಯಾರಿಸಿ, ನಂತರ ಇಂಗ್ಲಿಷ್‌ಗೆ ಭಾಷಾಂತರ ಮಾಡದಿರುವುದು ಈ ಅನಾಹುತಕ್ಕೆ ಕಾರಣವಾಗಿದೆ. ಇದರಿಂದ ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ’ ಎಂದು ದೂರಿದರು.

‘ಕೋಲಾರ, ವಿಜಯಪುರ, ರಾಮನಗರ ಜಿಲ್ಲೆಗಳ ಪರೀಕ್ಷಾ ಕೇಂದ್ರಗಳಲ್ಲಿ ಸಾವಿರಾರು ಅಭ್ಯರ್ಥಿಗಳಿಗೆ ಒಎಂಆರ್ ಶೀಟ್‌ಗಳನ್ನು ಬದಲಾಯಿಸಿ ನೀಡಲಾಗಿದೆ. ಇದರಲ್ಲಿ ಅವ್ಯವಹಾರ ನಡೆಯುವ ಸಾಧ್ಯತೆ ಇದೆ. ಈ ಎಲ್ಲ ಲೋಪದೋಷಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು’ ಎಂದು ಆಗ್ರಹಿಸಿದರು.

‘ಭೂಸೇನಾ ನೇಮಕಾತಿಯಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ರಕ್ಷಣಾ ಇಲಾಖೆಯ ಬೆಂಗಳೂರಿನ ಭೂಸೇನಾ ನಿಗಮಕ್ಕೆ ಸಂಬಂಧಿಸಿದಂತೆ ‘ಸಿ’ ಮತ್ತು ‘ಡಿ’ ದರ್ಜೆ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಕನ್ನಡಿಗರಿಗೆ ಆದ್ಯತೆಯನ್ನು ನೀಡಬೇಕು ಎಂದು ಒತ್ತಾಯಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ರಕ್ಷಣಾ ಸಚಿವ ರಾಜನಾಥ್ ಸಿಂಗ್‌ಗೆ ಪತ್ರ ಬರೆದಿದ್ದಾರೆ.



ಪುರುಷೋತ್ತಮ ಬಿಳಿಮಲೆ

ಕೇಂದ್ರೋದ್ಯಮಗಳು ಸ್ಥಳೀಯರಿಗೆ ಉದ್ಯೋಗವನ್ನು ಕಲ್ಪಿಸುವುದು ಒಕ್ಕೂಟ ವ್ಯವಸ್ಥೆಯ ಕರ್ತವ್ಯವಾಗಬೇಕಿದ್ದು, ಪದೇ ಪದೇ ಈ ಸಾಂವಿಧಾನಿಕ ಆಶಯವನ್ನು ಉಲ್ಲಂಘಿಸಲಾಗುತ್ತಿದೆ. ರಕ್ಷಣಾ ಇಲಾಖೆ ನೇಮಕಾತಿ ಅಧಿಸೂಚನೆಗಳನ್ನು ಸ್ಥಳೀಯ ಮಾಧ್ಯಮಗಳಲ್ಲಿ ಪ್ರಕಟಿಸಬೇಕು. ಕನ್ನಡದಲ್ಲಿಯೇ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು. ಸಮಸ್ಯೆಗೆ ಪರಿಹಾರ ದೊರಕುವವರೆಗೆ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಪ್ರಕಾಶಕರ ಸಂಕಷ್ಟ ನಿವಾರಿಸಿ: ಅಂಚೆ ಇಲಾಖೆಯು ರಿಜಿಸ್ಟರ್ ಪಾರ್ಸೆಲ್ ವ್ಯವಸ್ಥೆಯನ್ನು ಸ್ಥಗಿತಗೊಳಿಸಿರುವುದು ಕನ್ನಡ ಪುಸ್ತಕ ಪ್ರಕಾಶನ ಸಂಸ್ಥೆಗಳಿಗೆ ಮಾರಣಾಂತಿಕವಾಗಿ ಪರಿಣಮಿಸಿದೆ. ಕೂಡಲೇ ಪುನರಾರಂಭಿಸಬೇಕು ಎಂದು ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಕೇಂದ್ರ ಸಂವಹನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂಧ್ಯ ಅವರಿಗೆ ಈ ಬಗ್ಗೆ ಪತ್ರ ಬರೆದಿದ್ದಾರೆ. ಕನಿಷ್ಠ ದರದ ಅವಕಾಶವನ್ನು ಬಳಸಿಕೊಂಡು ಕನ್ನಡದ ಬಹುಪಾಲು ಪ್ರಕಾಶಕರು ಪುಸ್ತಕಗಳನ್ನು ಓದುಗರಿಗೆ ರಿಜಿಸ್ಟರ್ ಪಾರ್ಸೆಲ್ ಮೂಲಕ ತಲುಪಿಸುತ್ತಿದ್ದರು. ರಿಜಿಸ್ಟರ್ ಪಾರ್ಸೆಲ್ ಸ್ಥಗಿತಗೊಳಿಸಿದ್ದರಿಂದ ಮೊದಲೇ ಸಂಕಷ್ಟದಲ್ಲಿರುವ ಕನ್ನಡ ಪುಸ್ತಕೋದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಚಿತ್ರಾವಳಿ



ವಿದ್ವಾಂಸ ಎಸ್‌.ಪಿ. ಪದ್ಮಪ್ರಸಾದ್ ಸಂಪಾದಿಸಿರುವ ‘ಕನ್ನಡ ಜೈನ ಸಾಹಿತ್ಯ ಚರಿತ್ರೆ’ಯ ಆರು ಸಂಪುಟಗಳನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಶೇಷಾದ್ರಿಪುರಂ ಶಿಕ್ಷಣ ದತ್ತಿ ಆಯೋಜಿಸಿದ್ದ ಸಮಾರಂಭದಲ್ಲಿ ಸಾಹಿತಿ ಹಂ.ಪ. ನಾಗರಾಜಯ್ಯ ಬಿಡುಗಡೆ ಮಾಡಿದರು. ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಪ್ರಾಧ್ಯಾಪಕಿ ಎಂ.ಎಸ್‌. ಆಶಾದೇವಿ, ಕವಿ ಎಸ್‌. ರಾಮಲಿಂಗೇಶ್ವರ ಪಾಲ್ಗೊಂಡಿದ್ದರು



ನೆಲಮಂಗಲ ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ಹಮ್ಮಿಕೊಂಡಿದ್ದ ಸುಗ್ಗಿ ಸಂಕ್ರಾಂತಿ ಕಾರ್ಯಕ್ರಮದಲ್ಲಿ ರೈತರಾದ ಕೆಂಪೇಗೌಡ, ಮಲ್ಲಿಕಾರ್ಜುನಸ್ವಾಮಿ, ಚನ್ನಬಸಪ್ಪ, ಬಿ.ಕೆ.ಗಂಗಯ್ಯ, ಗಂಗರಾಜು ಅವರನ್ನು ಪುರಸ್ಕರಿಸಲಾಯಿತು. ಮಹಾಸಭಾ ತಾಲ್ಲೂಕು ಅಧ್ಯಕ್ಷ ಎನ್‌. ರಾಜಶೇಖರ್, ಜಿಲ್ಲಾಧ್ಯಕ್ಷ ರೇವಣಸಿದ್ದಯ್ಯ, ಮಹಿಳಾ ಘಟಕ ವೇದಾವತಿ, ರಾಜಮ್ಮ ನಗರಸಭೆ ಅಧ್ಯಕ್ಷೆ ಪೂರ್ಣಿಮಾ ಸುಗ್ಗರಾಜು ಭಾಗವಹಿಸಿದ್ದರು



ಬೆಂಗಳೂರಿನ ಕಾಡುಮಲ್ಲೇಶ್ವರ ಗೆಳೆಯರ ಬಳಗ ಆಯೋಜಿಸಿದ್ದ ಹುಣ್ಣಿಮೆ ಹಾಡು ‘ತಬಲಾ ತರಂಗ್’ ಉಸ್ತಾದ್ ಜಾಕಿರ್ ಹುಸೇನ್ ಅವರಿಗೆ ಸಂಗೀತ ಸಲಾಂ ಕಾರ್ಯಕ್ರಮದಲ್ಲಿ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ, ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ವೇಮಗಲ್ ನಾರಾಯಣಸ್ವಾಮಿ, ಪತ್ರಕರ್ತೆ ಚಿತ್ರಾ ಸಂತೋಷ್, ಲೀಲಾ ಸಂಪಿಗೆ ಮತ್ತು ಧಾರವಾಡದ ಪಂಡಿತ್ ರಘುನಾಥ ನಾಕೋಡ ಅವರು ಜಾಕಿರ್ ಹುಸೇನ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

‘ಭೀಮ ಸಂಗಮ’ ಕಾರ್ಯಕ್ರಮದಲ್ಲಿ ಪಿ. ರಾಜೀವ್ ಟೀಕೆ

ಪರಿಶಿಷ್ಟರನ್ನು ಬಡವರನ್ನಾಗಿಸುವುದು ‘ಕೈ’ ಕುತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಸದಾ ತಮ್ಮ ಮತ ಬ್ಯಾಂಕ್ ಆಗಿರಬೇಕು. ಅದಕ್ಕಾಗಿ ಈ ಸಮುದಾಯಗಳು ಬಡತನದಲ್ಲೇ ಇರಬೇಕು ಎಂಬುದು ಕಾಂಗ್ರೆಸ್ ಪಕ್ಷದ ರಹಸ್ಯ ಕಾರ್ಯಸೂಚಿ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಟೀಕಿಸಿದರು.

ಬಿಜೆಪಿ ಆರಂಭಿಸಿರುವ ‘ಭೀಮ ಸಂಗಮ’ ಅಭಿಯಾನದ ಅಂಗವಾಗಿ ಶಾಸಕ ಬೈರತಿ ಬಸವರಾಜ್ ಅವರ ಮನೆಯಲ್ಲಿ ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿಗಳ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯಲ್ಲಿ ಈ ಸಮುದಾಯಗಳಿಗೆ ಮೀಸಲಿಟ್ಟ ಹಣದಲ್ಲಿ ಕಳೆದ ಸಾಲಿನಲ್ಲಿ ₹11 ಸಾವಿರ ಕೋಟಿ ಮತ್ತು ಈ ಸಾಲಿನಲ್ಲಿ ₹14 ಸಾವಿರ ಕೋಟಿ ಸೇರಿ ಒಟ್ಟು ₹25 ಸಾವಿರ ಕೋಟಿಯನ್ನು ಕಾಂಗ್ರೆಸ್‌ನವರು ದುರ್ಬಳಕೆ ಮಾಡಿಕೊಂಡಿದ್ದಾರೆ. ₹25 ಸಾವಿರ ಕೋಟಿಯನ್ನು ಈ ವರ್ಗಗಳ ಕೈಗಾರಿಕಾ ಅಭಿವೃದ್ಧಿಗೆ ಕೊಟ್ಟಿದ್ದರೆ ಸಾವಿರಾರು ದಲಿತ ಕುಟುಂಬದವರು ಉದ್ಯಮಿಗಳು ಆಗುತ್ತಿದ್ದರು. ದಲಿತ ಯುವಕರಿಗೆ ಕೆಲಸ ಸಿಗುತ್ತಿತ್ತು ಎಂದರು.

ಶಾಸಕ ಬೈರತಿ ಬಸವರಾಜ್ ಮಾತನಾಡಿ, ‘ಸಂವಿಧಾನ ಬದಲಿಸುತ್ತಾರೆ ಮತ್ತು ಸಂವಿಧಾನ ರದ್ದು ಮಾಡಲಾಗುತ್ತದೆ ಎಂದು ಕಾಂಗ್ರೆಸ್ ಮುಖಂಡರು ಹಾಗೂ ಅವರ ಬೆಂಬಲಿಗರು ನಿರಂತರ ಅಪಪ್ರಚಾರ ಮಾಡುತ್ತಿದ್ದಾರೆ. ಯಾವತ್ತೂ, ಯಾರೂ ಕೂಡ ಸಂವಿಧಾನವನ್ನು ರದ್ದು ಮಾಡಲು ಸಾಧ್ಯವಿಲ್ಲ’ ಎಂದು ತಿಳಿಸಿದರು.

‘ಬಿಜೆಪಿ ದಲಿತ ವಿರೋಧಿ ಎಂಬ ಹಣೆಪಟ್ಟಿ ಕಟ್ಟಲು ಕಾಂಗ್ರೆಸ್ ಪಕ್ಷ ಪಿತೂರಿ ಮಾಡಿದೆ. ನಿಜವಾದ ವಿಚಾರಗಳನ್ನು ನಾವು ಮನವರಿಕೆ ಮಾಡಿಕೊಡಬೇಕಿದೆ’ ಎಂದು ಹೇಳಿದರು.

‘ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಸೂಚನೆಯಂತೆ ರಾಜ್ಯದಲ್ಲಿ ಸಂವಿಧಾನದ ಅರಿವು, ಜಾಗೃತಿ ಅಭಿಯಾನ ನಡೆಯಲಿದೆ. ಅದರ ಮೊದಲ ಕಾರ್ಯಕ್ರಮ ನಮ್ಮ ಮನೆಯಲ್ಲಿ ನಡೆದಿದೆ’ ಎಂದರು.

ಬಿಜೆಪಿ ನಗರ ಘಟಕದ ಜಿಲ್ಲಾಧ್ಯಕ್ಷ ಎಸ್.ಹರೀಶ್, ಕಾರ್ಯಕ್ರಮದ ಸಂಚಾಲಕ ಮುನಿಕೃಷ್ಣ, ರಾಜ್ಯ ಮಹಿಳಾ ಮೋರ್ಚಾ ಮಾಜಿ ಅಧ್ಯಕ್ಷೆ ಗೀತಾ ವಿವೇಕಾನಂದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ, ಸದಾಶಿವ, ಚಿದಾನಂದ, ಮುನಿರಾಜು, ಸಂಪತ್, ಮಂಜುಳಾ ಶ್ರೀನಿವಾಸ್, ರಮೇಶ್, ಮಂಡಲದ ಪದಾಧಿಕಾರಿಗಳು ಮತ್ತಿತರ ಮುಖಂಡರು ಭಾಗವಹಿಸಿದ್ದರು.



ಕೆ.ಆರ್‌.ಪುರ ಶಾಸಕ ಬೈರತಿ ಬಸವರಾಜ್ ಅವರ ಮನೆಯಲ್ಲಿ ಸೋಮವಾರ ಭೀಮ ಸಂಗಮ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರು ಉದ್ಘಾಟಿಸಿದರು. ಎಸ್‌.ಹರೀಶ್, ಮುನಿಕೃಷ್ಣ, ಗೀತಾ ವಿವೇಕಾನಂದ ಇದ್ದರು

ಬಿಡಿಎಯಿಂದ ಹೊಸ ಬಡಾವಣೆಗಳ ರಚನೆಗೆ ಸ್ಥಳ ಗುರುತು • ಪ್ರಾಥಮಿಕ ಅಧಿಸೂಚನೆಗೆ ಸಿದ್ಧತೆ

6 ಬಡಾವಣೆಗೆ 5 ಸಾವಿರ ಎಕರೆ

• ಆರ್. ಮಂಜುನಾಥ್

6 ಬಿಡಿಎ ಉದ್ದೇಶಿಸಿರುವ ಹೊಸ ಬಡಾವಣೆಗಳು

10 ಹಳ್ಳಿಗಳು ಉದ್ದೇಶಿತ ಬಡಾವಣೆಯ ವ್ಯಾಪ್ತಿ

4,959 ಎಕರೆ **11** ಗುಂಟೆ ಒಟ್ಟು ಆರು ಬಡಾವಣೆಗೆ ಗುರುತಿಸಲಾಗಿರುವ ಜಮೀನು



ಯಾವ ಗ್ರಾಮದಲ್ಲಿ ಎಷ್ಟು ಎಕರೆ?

ಗ್ರಾಮ	ಜಮೀನು
ಕಗ್ಗಲಿಪುರ	759 ಎಕರೆ, 33 ಗುಂಟೆ
ಅಗರ	625 ಎಕರೆ, 6 ಗುಂಟೆ
ಬಿ.ಎಂ. ಕಾವಲ್	546 ಎಕರೆ, 10 ಗುಂಟೆ
ದೇವಗೆರೆ	416 ಎಕರೆ, 18 ಗುಂಟೆ
ಒ.ಬಿ. ಚೂಡಹಳ್ಳಿ	257 ಎಕರೆ, 10 ಗುಂಟೆ
ಗುಳಕಮಲೆ	242 ಎಕರೆ, 10 ಗುಂಟೆ
ಗುಡಿಮಾವು	185 ಎಕರೆ, 32 ಗುಂಟೆ
ಉತ್ತರಿ	166 ಎಕರೆ, 30 ಗುಂಟೆ
ಗಂಗಸಂದ್ರ	150 ಎಕರೆ, 3 ಗುಂಟೆ
ಕಂಬೀಪುರ	109 ಎಕರೆ, 3 ಗುಂಟೆ

58 ಹಳ್ಳಿಗಳು ಪೆರಿಫೆರಲ್ ವರ್ತುಲ ರಸ್ತೆ–2ರ ವ್ಯಾಪ್ತಿ

854 ಎಕರೆ ಒಟ್ಟು ಭೂಸ್ವಾಧೀನ

30 ಕಿ.ಮೀ ಪಿಆರ್‌ಆರ್–2 ಕಾರಿಡಾರ್ ಉದ್ದ

₹1,569 ಕೋಟಿ ಯೋಜನೆಯ ಅಂದಾಜು ವೆಚ್ಚ

ಯಾವ ಬಡಾವಣೆಗೆ ಎಲ್ಲಿ, ಎಷ್ಟು ಜಮೀನು?

ಬಡಾವಣೆ–1	ಮಾರಗೊಂಡನಹಳ್ಳಿ	136 ಎಕರೆ, 10 ಗುಂಟೆ
ಬಡಾವಣೆ–2	ಹುಲ್ಲಹಳ್ಳಿ, ಬಿಂಗೀಪುರ, ಹುಲಿಮಂಗಲ, ಬೆಟ್ಟದಾಸನಪುರ	561 ಎಕರೆ, 28 ಗುಂಟೆ
ಬಡಾವಣೆ–3	ಹುಲ್ಲಹಳ್ಳಿ, ಬಿಂಗೀಪುರ, ಹುಲ್ಲಹಳ್ಳಿ	281 ಎಕರೆ, 21 ಗುಂಟೆ
ಬಡಾವಣೆ–4	ಎಲೇನಹಳ್ಳಿ, ಮೈಸಲಂದ್ರ, ಕಮ್ಮನಹಳ್ಳಿ, ಹೊಮ್ಮದೇವನಹಳ್ಳಿ, ಹುಲ್ಲಹಳ್ಳಿ, ಬೇಗೂರು	518 ಎಕರೆ, 29 ಗುಂಟೆ
ಬಡಾವಣೆ–5	ಗುಲಕಮಲೆ, ಕಗ್ಗಲಿಪುರ, ಒ.ಬಿ. ಚೂಡಹಳ್ಳಿ, ಬಿ.ಎಂ. ಕಾವಲ್, ಅಗರ, ಉತ್ತರಿ	2,391 ಎಕರೆ, 14 ಗುಂಟೆ
ಬಡಾವಣೆ–6	ಕಂಬೀಪುರ, ಗುಡಿಮಾವು, ಬಿ.ಎಂ. ಕಾವಲ್, ದೇವಗೆರೆ, ಗಂಗಸಂದ್ರ	1,069 ಎಕರೆ, 27 ಗುಂಟೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹೊಸದಾಗಿ ಆರು ಬಡಾವಣೆಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ–2ರ ಸುತ್ತಮುತ್ತ ಸುಮಾರು ಐದು ಸಾವಿರ ಎಕರೆ ಜಮೀನನ್ನು ಗುರುತಿಸಿದೆ.

ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ ಮೂಲಕ ಮೈಸೂರು ರಸ್ತೆವರೆಗೆ ಪೆರಿಫೆರಲ್ ವರ್ತುಲ ರಸ್ತೆ–2 (ಪಿಆರ್‌ಆರ್–2) ನಿರ್ಮಿಸಲು ಬಿಡಿಎ ಈಗಾಗಲೇ ನಿರ್ಧರಿಸಿದೆ. ಈ ರಸ್ತೆಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜಮೀನುಗಳನ್ನು ಗುರುತಿಸಲಾಗಿದೆ. ಕೆಲವು ರೈತರಿಗೆ ಆರಂಭದ ನೋಟಿಸ್‌ಗಳನ್ನೂ ಜಾರಿ ಮಾಡಲಾಗುತ್ತಿದ್ದು, ಭೂದಾಖಲೆಗಳನ್ನು ಒದಗಿಸಲು ಸೂಚಿಸಲಾಗುತ್ತಿದೆ.

ಮೈಸೂರು ರಸ್ತೆಯಿಂದ ಮಾಗಡಿ ರಸ್ತೆವರೆಗೆ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಆಗಿದ್ದು, ಮೈಸೂರು ರಸ್ತೆಯಿಂದ ಹೊಸೂರು ರಸ್ತೆವರೆಗಿನ ಗ್ರಾಮಗಳಲ್ಲಿ ಹೊಸ ಬಡಾವಣೆಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

ಕನಕಪುರ ರಸ್ತೆ ಹಾಗೂ ಬನ್ನೇರುಘಟ್ಟ ರಸ್ತೆಗಳ ಅಕ್ಕಪಕ್ಕದ ಗ್ರಾಮಗಳಿಗೆ ಸಂಪರ್ಕ ರಸ್ತೆಗಳು ಉತ್ತಮವಾಗಿರುವುದರಿಂದ, ಅತಿಹೆಚ್ಚು ಜಮೀನುಗಳನ್ನು ಅಲ್ಲಿನ ಹಳ್ಳಿಗಳಲ್ಲೇ ಗುರುತಿಸಲಾಗಿದೆ. ಪಿಆರ್‌ಆರ್–2ಕ್ಕೆ ಹೊಂದಿಕೊಂಡ ಗ್ರಾಮಗಳಿಗೇ ಆದ್ಯತೆ ನೀಡಿರುವುದರಿಂದ, ಸಂಪರ್ಕ ರಸ್ತೆಗಳು ಹಾಗೂ ವಾಣಿಜ್ಯ ಚಟುವಟಿಕೆಗಳಿಗೂ ಹೆಚ್ಚು ಪ್ರಾಮುಖ್ಯ ಸಿಗಲಿದೆ ಎನ್ನಲಾಗುತ್ತಿದೆ.

ಕನಕಪುರ ರಸ್ತೆ, ಬನ್ನೇರುಘಟ್ಟ ರಸ್ತೆ, ಹೊಸೂರು ರಸ್ತೆಗಳ ಸುತ್ತಮುತ್ತಲಿನ ಗ್ರಾಮಗಳಲ್ಲೂ ಹೆಚ್ಚಿನ ಅಭಿವೃದ್ಧಿ ಚಟುವಟಿಕೆಗಳು ನಡೆದಿವೆ. ಅವುಗಳನ್ನು ಹೊರತುಪಡಿಸಿ, ಸುಮಾರು ಐದು ಸಾವಿರ ಎಕರೆ ಜಮೀನುಗಳನ್ನು ಬಿಡಿಎ ಗುರುತಿಸಿದೆ.

ಆರು ಹೊಸ ಬಡಾವಣೆಗಳಿಗೆ 10 ಗ್ರಾಮಗಳ ಸರ್ವೆ ನಂಬರ್‌ಗಳನ್ನೂ ಗುರುತಿಸಲಾಗಿದ್ದು, ಅದಲ್ಲದೆ ಸರ್ಕಾರಿ ಜಾಗ ಹಾಗೂ ನಾಲಾ, ಕೆರೆಗಳೂ ಬಡಾವಣೆಗಳ ನಿರ್ಮಾಣಕ್ಕೆ ಗುರುತಿಸಿರುವ ಪ್ರದೇಶಗಳಲ್ಲಿ ಸೇರಿವೆ. 50 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿಕೆ ಮಾಡಬಹುದು ಎಂದು ಅಂದಾಜಿಸಲಾಗಿದೆ. ಉದ್ದೇಶಿತ ಪಿಆರ್‌ಆರ್–2 ರಸ್ತೆಗಾಗಿ 854 ಎಕರೆ ಜಮೀನು ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಅಂತಿಮ ಅಧಿಸೂಚನೆ ಶೀಘ್ರ ಹೊರಬೀಳಲಿದೆ. 100 ಮೀ. ಅಗಲ ಪಿಆರ್‌ಆರ್–2 ಅನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಅದನ್ನು ಕಡಿಮೆ ಮಾಡಿ ಬಡಾವಣೆಗಳಿಗೆ ಅಥವಾ ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಯೋಜಿಸಲಾಗುತ್ತಿದೆ ಎನ್ನಲಾಗಿದೆ.

‘ಆರು ಬಡಾವಣೆಗಳ ನಿರ್ಮಾಣ ಯೋಜನೆಗಾಗಿ ಜಮೀನುಗಳನ್ನು ಗುರುತಿಸಲಾಗಿದೆ. ಪ್ರಕ್ರಿಯೆ ಇನ್ನೂ ಪ್ರಾರಂಭದ ಹಂತದಲ್ಲಿದ್ದು, ಪ್ರಾಥಮಿಕ ಅಧಿಸೂಚನೆಗೆ ಬೇಕಾದ ಸಿದ್ಧತೆಗಳನ್ನು ನಡೆಸಲಾಗುತ್ತಿದೆ. ಭೂಸ್ವಾಧೀನಕ್ಕೆ ಪರಿಹಾರ ಯಾವ ರೀತಿ ನೀಡಬೇಕು ಎಂಬ ಬಗ್ಗೆ ಇನ್ನೂ ಯಾವುದೇ ನಿರ್ಧಾರವಾಗಿಲ್ಲ. ಶಿವರಾಮ ಕಾರಂತ ಬಡಾವಣೆಯಲ್ಲಿ ಅಳವಡಿಸಿಕೊಂಡಿರುವ ಶೇಕಡ 60:40ರ ಅನುಪಾತವನ್ನು ಅನುಸರಿಸುವ ಸಾಧ್ಯತೆ ಇದೆ’ ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದರು.

ಮಹಿಳಾ ಅಧಿಕಾರಿಗಳಿಗೆ ಸೀರೆ ಉಡುಗೊರೆ

ಪ್ರಜಾವಾಣಿ ವಾರ್ತೆ

ತುಮಕೂರು: ಪತ್ನಿಗೆ ಸೀರೆ ಖರೀದಿಸಲು ಮಳಿಗೆಗೆ ತೆರಳಿದ್ದ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಅವರು ಜೊತೆಯಲ್ಲಿದ್ದ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಮತ್ತು ಮಹಾನಗರ ಪಾಲಿಕೆ ಆಯುಕ್ತೆ ಬಿ.ವಿ.ಅಶ್ವಿಜ ಅವರಿಗೂ ಇಳಕಲ್ ಸೀರೆ ಖರೀದಿಸಿ, ಉಡುಗೊರೆಯಾಗಿ ನೀಡಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಸೋಮವಾರ ಸಿರಿಧಾನ್ಯ ಮೇಳದ ಅಂಗವಾಗಿ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ ಹಮ್ಮಿಕೊಳ್ಳಲಾಗಿತ್ತು. ವೇದಿಕೆ ಕಾರ್ಯಕ್ರಮದ ಉದ್ಘಾಟನೆನಂತರ ಅಧಿಕಾರಿಗಳೊಂದಿಗೆ ವಸ್ತು ಪ್ರದರ್ಶನ ಮಳಿಗೆ ವೀಕ್ಷಣೆಗೆ ತೆರಳಿದ್ದ ಸಚಿವರು ಇಳಕಲ್ ಸೀರೆ ಮಾರಾಟ ಮಳಿಗೆಗೂ ಭೇಟಿ ನೀಡಿದ್ದರು.

ಇಳಕಲ್ ಕೈಮಗ್ಗ ಸೀರೆಗಳ ವೈವಿಧ್ಯತೆ ಗಮನಿಸಿ ತಮ್ಮ ಪತ್ನಿಗೆ ಸೀರೆ ಖರೀದಿಸಿದರು. ಆಗ ಪಕ್ಕದಲ್ಲಿದ್ದ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಹಾಗೂ ಪಾಲಿಕೆ ಆಯುಕ್ತೆ ಬಿ.ವಿ.ಅಶ್ವಿಜ ಅವರಿಗೂ ತಲಾ ಒಂದು ಸೀರೆ ಖರೀದಿಸಿ ಕೊಟ್ಟರು. ಸೀರೆ ಬೆಲೆ ಕೇಳಿ ನಸು ನಗುತ್ತಲೇ ‘ಚೌಕಾಸಿ’ ಆರಂಭಿಸಿದರು. ಒಂದು ಸೀರೆಗೆ ₹300 ಕಡಿಮೆ ಮಾಡಿಕೊಳ್ಳುವಂತೆ ಮಳಿಗೆಯವರನ್ನು ಕೇಳಿದರು. ಕೊನೆಗೆ ಬೆಲೆ ಕಡಿಮೆ ಮಾಡುವುದು ಬೇಡ ಎಂದು ಹೇಳಿ, ಮಳಿಗೆಯವರು ಹೇಳಿದಷ್ಟು ಹಣ ನೀಡಿ (ಪ್ರತಿ ಸೀರೆಗೆ ₹1,500ರಂತೆ) ಮೂರು ಸೀರೆ(ಒಟ್ಟು ₹4,500) ಖರೀದಿಸಿದರು.

ನೈರುತ್ಯ ಜಪಾನ್‌ನಲ್ಲಿ ಪ್ರಬಲ ಭೂಕಂಪ

ಟೋಕಿಯೊ (ಎಪಿ): ನೈರುತ್ಯ ಜಪಾನ್‌ನಲ್ಲಿ ಪ್ರಬಲ ಭೂಕಂಪ ಸಂಭವಿಸಿದೆ ಎಂದು ದೇಶದ ಹವಾಮಾನ ಸಂಸ್ಥೆ ತಿಳಿಸಿದೆ. ಇಲ್ಲಿನ ಕ್ಯುಶು ದ್ವೀಪ ಮತ್ತು ಸಮೀಪದ ಕೊಚಿ ಪ್ರದೇಶದಲ್ಲಿ ಸ್ಥಳೀಯ ಕಾಲಮಾನ 9.19ಕ್ಕೆ ಭೂಕಂಪನ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ ತೀವ್ರತೆ 6.9ರಷ್ಟು ದಾಖಲಾಗಿದೆ ಎಂದು ಅದು ತಿಳಿಸಿದೆ.

ಅಖಿಲ ಭಾರತ ರಸಪ್ರಶ್ನೆ ಸ್ಪರ್ಧೆ ಜೈಪುರ ಚಾಂಪಿಯನ್



ಅಖಿಲಭಾರತ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಜೈಪುರದ ಕೇಂಬ್ರಿಡ್ಜ್ ಕೋರ್ಟ್ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಧಾರಿಯಾ ಮತ್ತು ವೈಭವ್ ರೈ ಅವರಿಗೆ ₹1.50 ಲಕ್ಷ ಮೊತ್ತದ ಚೆಕ್ ಮತ್ತು ಪ್ರಶಸ್ತಿಪತ್ರ ವಿತರಿಸಲಾಯಿತು

ಪ್ರಜಾವಾಣಿ ವಾರ್ತೆ

ಯಲಹಂಕ: ಮಣಿಪಾಲ್ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಅಖಿಲಭಾರತ ರಸಪ್ರಶ್ನೆ ಸ್ಪರ್ಧೆಯಲ್ಲಿ (ಎರಡನೇ ಆವೃತ್ತಿ) ಜೈಪುರದ ಕೇಂಬ್ರಿಡ್ಜ್ ಕೋರ್ಟ್ ಪ್ರೌಢಶಾಲೆ ಚಾಂಪಿಯನ್ ಆಗಿದೆ.

ಅಲ್ಲಿನ ವಿದ್ಯಾರ್ಥಿಗಳಾದ ಧಾರಿಯಾ ಮತ್ತು ವೈಭವ್ ರೈ ₹1.50 ಲಕ್ಷ ಮೊತ್ತದ ಚೆಕ್ ಮತ್ತು ಪ್ರಶಸ್ತಿಪತ್ರ ಪಡೆದರು. ಎರಡನೇ ಸ್ಥಾನ ಪಡೆದ ಕೊಚ್ಚಿಯ ಅಸ್ಸಿಸಿ ವಿದ್ಯಾನಿಕೇತನ್ ಪಬ್ಲಿಕ್ ಶಾಲೆಯ ಜಿಯಾನ್ ಜೊಮಿ ಮತ್ತು ಅಖಿಲ್ ಕೃಷ್ಣನ್ ಯು.ಆರ್. ₹1 ಲಕ್ಷ, ಮೂರನೇ ಸ್ಥಾನ ಪಡೆದ ಡೆಲ್ಲಿ ಪಬ್ಲಿಕ್ ಸ್ಕೂಲ್‌ನ ಪರ್ವ ಜೈನ್ ಮತ್ತು ಅರ್ಫ ಜೈನ್ ₹50 ಸಾವಿರ ಬಹುಮಾನ ಪಡೆದರು.

ಮಣಿಪಾಲ್ ಉನ್ನತಶಿಕ್ಷಣ ಸಂಸ್ಥೆಯ ಕುಲಪತಿ ಮಧು ವೀರರಾಘವನ್ ಮಾತನಾಡಿ, ‘ಇಂತಹ ಸ್ಪರ್ಧೆಗಳು ಜ್ಞಾನವನ್ನು ಪರೀಕ್ಷಿಸುವುದಲ್ಲದೆ ಸಹನಶೀಲ, ಸಮಸ್ಯೆ ಪರಿಹಾರ ಮತ್ತು ಸ್ನೇಹ ಮನೋಭಾವಯನ್ನು ಉತ್ತೇಜಿಸುತ್ತದೆ’ ಎಂದು ತಿಳಿಸಿದರು.

ಸಂಸ್ಥೆಯ ಉಪ ಕುಲಸಚಿವರಾದ ರಾಘವೇಂದ್ರ ಪ್ರಭು, ಸ್ವೀಕೃತಿ ಮತ್ತು ಮಾರುಕಟ್ಟೆ ವಿಭಾಗದ ಮುಖ್ಯ ಅಧಿಕಾರಿ ಆದಿತ್ಯ ಮೋಹನ್ ಜಾಧವ್ ಉಪಸ್ಥಿತರಿದ್ದರು.

ಅಗ್ನಿಪುತ್ರಕ್ಕೆ ಮಣಿದ ಚಿಕ್ಕಮಗಳೂರು



ರೆಬೆಲ್ಸ್ ಎಫ್‌ಸಿ ತಂಡದ ಅಕ್ಷತ್ ಮತ್ತು ಎಫ್‌ಸಿ ರಿಯಲ್ ಬೆಂಗಳೂರು ತಂಡದ ಸೋಮ್ಯಾ ತಮ್ತಾ ಅವರು ಚೆಂಡಿಗಾಗಿ ಸೆಣಸಾಟ ನಡೆಸಿದರು

ಚಿತ್ರ: ಎಸ್‌.ಕೆ. ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯ ಯು.ಕೆ. ಅವರ ಅಮೋಘ ಆಟದ ನೆರವಿನಿಂದ ಎಫ್‌ಸಿ ಅಗ್ನಿಪುತ್ರ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 5–1 ಗೋಲುಗಳಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಅಗ್ನಿಪುತ್ರ ಪರ ಸೂರ್ಯ (23ನೇ ಮತ್ತು 88ನೇ ನಿಮಿಷ), ಅಜ್ಫರ್ ನೂರಾನಿ (14ನೇ ನಿ), ರಾಹುಲ್ ಕೆ.ಪಿ. (43ನೇ ನಿ) ಮತ್ತು ಅಹಮದ್ ಫೈಜ್ ಖಾನ್ (45ನೇ ನಿ) ಗೋಲು ಗಳಿಸಿದರು. ಚಿಕ್ಕಮಗಳೂರು ಪರ ಸುಧಾಂಶು ಕುಮಾರ್ (35ನೇ ನಿ) ಚೆಂಡನ್ನು ಗುರಿ ಸೇರಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ರಿಯಲ್ ಬೆಂಗಳೂರು ತಂಡವು 3–0ಯಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿತು. ವೈಶಾಕ್ ಎ. (2ನೇ ನಿ), ಸಾಹಿಲ್ ಸುರೇಶ್ ಲಮಾಣಿ (19ನೇ ನಿ) ಮತ್ತು ಸೈಯದ್ ಅಹಮದ್ -(45 + 2ನೇ ನಿ) ಬೆಂಗಳೂರು ತಂಡದ ಪರ ಗೋಲು ಹೊಡೆದರು.

ಮಂಗಳವಾರದ ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವು ಕಿಕ್‌ಸ್ಟಾರ್ಟ್ ತಂಡವನ್ನು; ಬೆಂಗಳೂರು ಎಫ್‌ಸಿ ತಂಡವು ಸೌತ್ ಯುನೈಟೆಡ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ವ್ಯಾಪಾರದ ಭರಾಟೆ ಜೋರು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಮಕರ ಸಂಕ್ರಾಂತಿ ಹಬ್ಬದ ವಿಶೇಷವಾಗಿ ಇಲ್ಲಿನ ಸಂತೆ, ಬೀದಿ ಬದಿಯಲ್ಲಿ ವ್ಯಾಪಾರದ ಭರಾಟೆ ಜೋರಾಗಿತ್ತು.

ಅವರೆಕಾಯಿ, ಕಬ್ಬು, ಕಡಲೆಕಾಯಿ, ಗೆಣಸುಗಳ ರಾಶಿ ಕಂಡು ಬಂತು. ಜೊತೆಗೆ ಹೂ, ಹಣ್ಣು, ತರಕಾರಿ ವ್ಯಾಪಾರವು ಜೋರಾಗಿತ್ತು.

ಅವರೆಕಾಯಿ, ಕಡಲೆಕಾಯಿ ಕೆ.ಜಿ.ಗೆ ₹100ರಿಂದ ₹120ರ ವರೆಗೆ ಗೆಣಸು ಕೆ.ಜಿ.ಗೆ ₹50, ಕಬ್ಬು ಜೋಡಿಗೆ ₹100 ದರ ಇತ್ತು. ಎಳ್ಳು ಬೆಲ್ಲದ ಪ್ಯಾಕೆಟ್‌ಗಳ ಖರೀದಿಯೂ ನಡೆಯಿತು.

ಕ್ಷೇಮ–ಕುಶಲ ಓದಿರಿ

ಕಡಲೆಕಾಯಿ, ಅವರೆಕಾಯಿ, ಗೆಣಸು,ಕಬ್ಬು ವಿತರಣೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೊಟ್ಟಿಗೆ ಪಾಳ್ಯದ ಕಾಂಗ್ರೆಸ್ ಮುಖಂಡ ಎನ್. ಶೇಖರ್ ಅವರು ಹತ್ತು ಸಾವಿರ ಕುಟುಂಬಗಳಿಗೆ ನೀಡಿದ ಒಂದು ಕೆ.ಜಿ. ಕಡಲೆಕಾಯಿ, ಎರಡು ಕೆ.ಜಿ. ಗೆಣಸು, ಎರಡು ಕೆ.ಜಿ. ಅವರೆಕಾಯಿ, ಎಳ್ಳು ಬೆಲ್ಲ, ಎರಡು ಜೊಲ್ಲೆ ಕಬ್ಬುಗಳನ್ನು ವಿತರಿಸಲಾಯಿತು.

ಕೆಪಿಸಿಸಿ ವಕ್ತಾರೆ ಎಚ್. ಕುಸುಮಾ ರಾಗಿ, ಭತ್ತ, ದವಸ-ಧಾನ್ಯಗಳಿಗೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಮಾಜಿ ಸಂಸದ ಡಿ.ಕೆ. ಸುರೇಶ್, ಹಳ್ಳಿಕಾರ್ ತಳಿಯ ಎತ್ತು, ಹಸುಗಳಿಗೆ ಪೂಜೆ ಸಲ್ಲಿಸಿದರು. ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತ ರಾಯಪ್ಪ, ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರಾಂಪುರ ನಾಗೇಶ್, ಎಚ್. ತುಕಾರಾಂ, ಪಾಲಿಕೆ ಮಾಜಿ ಸದಸ್ಯ ವೇಲು ನಾಯಕರ್. ಜಿ. ಮೋಹನ್ ಕುಮಾರ್, ಕಿಲಾರ ಮಂಜುನಾಥ್, ವಾರ್ಡ್ ಕಾಂಗ್ರೆಸ್ ಅಧ್ಯಕ್ಷರಾದ ನವೀನ್, ಚೇತನ್ ಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷ ಎಲ್.ಪ್ರವೀಣ್, ಮುರಳಿ ಪ್ರೇಮ್, ಕಾಂಗ್ರೆಸ್ ನಾಯಕರಾದ ಲಗ್ಗೆರೆ ನಾರಾಯಣ ಸ್ವಾಮಿ, ರಮೇಶ್ ಗೌಡ, ಪಾರ್ಥಗೌಡ, ಕೆಪಿಸಿಸಿ ಸದಸ್ಯ ಬೆಟ್ಟಸ್ವಾಮಿ ಗೌಡ, ರಘುಗೌಡ ಉಪಸ್ಥಿತರಿದ್ದರು.

ಕೆಚ್ಚಲು ಕೊಯ್ದ ಪ್ರಕರಣ: ಕೃತ್ಯದ ಹಿಂದಿರುವ ವ್ಯಕ್ತಿಯನ್ನೂ ಬಂಧಿಸಿ – ಹಸುಗಳ ಮಾಲೀಕ ಆಗ್ರಹ

‘ಮಾನಸಿಕ ಅಸ್ವಸ್ಥ ಕೃತ್ಯ ಎಸಗಲು ಸಾಧ್ಯವೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಸುಗಳ ಕೆಚ್ಚಲು ಕೊಯ್ದ ಪ್ರಕರಣದ ಬಂಧಿತ ಆರೋಪಿ ಮಾನಸಿಕ ಅಸ್ವಸ್ಥನೆಂದು ಹೇಳುತ್ತಿದ್ದಾರೆ. ಮಾನಸಿಕ ಅಸ್ವಸ್ಥ ಈ ರೀತಿ ಕೃತ್ಯ ಎಸಗಲು ಸಾಧ್ಯವೇ’ ಎಂದು ಹಸುಗಳ ಮಾಲೀಕ, ದೂರುದಾರ ಜಿ.ಕರ್ಣ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಬ್ಯಾಗ್ ಅಂಗಡಿ ಮಾಲೀಕರಿಗೆ ಹಸುಗಳಿಂದ ತೊಂದರೆ ಆಗುತ್ತಿತ್ತೇ? ಆರೋಪಿ ಎಷ್ಟು ವರ್ಷದಿಂದ ಬ್ಯಾಗ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂಬುದನ್ನು ಮಾಲೀಕರೇ ಬಹಿರಂಗ ಪಡಿಸಬೇಕು. ಆರೋಪಿಯ ಹಿಂದಿರುವ ವ್ಯಕ್ತಿಯನ್ನೂ ಬಂಧಿಸಬೇಕು’ ಎಂದು ಆಗ್ರಹಿಸಿದರು.

‘ಶನಿವಾರ ಮುಂಜಾನೆ ಘಟನೆ ಆಗಿದ್ದು ಮದ್ಯದ ನಶೆಯಲ್ಲಿ ಆರೋಪಿ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಆ ವೇಳೆಯಲ್ಲಿ ಮದ್ಯದಂಗಡಿ ತೆರೆದಿರುತ್ತದೆಯೇ? ಆರೋಪಿಯನ್ನು ತರಾತುರಿಯಲ್ಲಿ ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಇದರ ಹಿಂದೆ ಯಾರ ಕೈವಾಡವಿದೆ ಎಂಬುದೂ ಬಯಲಾಗಬೇಕು’ ಎಂದು ಒತ್ತಾಯಿಸಿದರು.

‘ಚಾಮರಾಜಪೇಟೆಯ ಪಶು ಆಸ್ಪತ್ರೆಯನ್ನು ಬಂದ್ ಮಾಡಿಸಲು ಕೆಲವರು ಪ್ರಯತ್ನಿಸಿದ್ದರು. ಆ ಸಂದರ್ಭದಲ್ಲಿ ನಾನು, ಸುತ್ತಮುತ್ತಲಿನ ಹಸುಗಳ ಮಾಲೀಕರು ಹಸುಗಳೊಂದಿಗೆ ತೆರಳಿ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದ್ದೆವು. ಆ ಸೇಡಿಗಾಗಿ ಕೃತ್ಯ ಎಸಗಲಾಗಿದೆ’ ಎಂದೂ ಕರ್ಣ ಆರೋಪಿಸಿದರು.

ಮಾಹಿತಿ ನೀಡಿದ್ದ ಪಕ್ಕದ ಮನೆ ವ್ಯಕ್ತಿ: ‘ಜೀವನ ನಿರ್ವಹಣೆಗಾಗಿ ಎಂಟು ಹಸುಗಳನ್ನು ಸಾಕಿದ್ದೇನೆ. ಹಾಲು ವ್ಯಾಪಾರ ಮಾಡುತ್ತೇನೆ. ನಾಲ್ಕು ಹಸುಗಳನ್ನು ಮನೆಯ ಪಕ್ಕದಲ್ಲೇ ಕಟ್ಟಿಕೊಳ್ಳುತ್ತೇನೆ. ಜಾಗವಿಲ್ಲದ ಕಾರಣಕ್ಕೆ ಉಳಿದ ನಾಲ್ಕು ಹಸುಗಳನ್ನು ದಂಡುಮಾರಿಯಮ್ಮ ದೇವಸ್ಥಾನದ ಹಿಂಭಾಗದಲ್ಲಿ ಕಟ್ಟುತ್ತೇನೆ. ಶನಿವಾರ ರಾತ್ರಿ ಹಸುಗಳಿಗೆ ಮೇವು ನೀಡಿ, ಮನೆಗೆ ಬಂದಿದ್ದೆ. ಭಾನುವಾರ ಮುಂಜಾನೆ 4.30ರ ಸುಮಾರಿಗೆ ಪಕ್ಕದ ಮನೆಯ ಸುಧಾಕರ ಅವರು ಹಸುಗಳ ಕೆಚ್ಚಲಿನ ತೊಟ್ಟುಗಳನ್ನು ಯಾರೋ ಕಿಡಿಗೇಡಿಗಳು ಕತ್ತರಿಸಿದ್ದಾರೆ ಎಂದು ತಿಳಿಸಿದ್ದರು. ಸ್ಥಳಕ್ಕೆ ತೆರಳಿ ನೋಡಿದಾಗ ಮೂರು ಹಸುಗಳ ಕೆಚ್ಚಲು ಕೊಯ್ದು ಪರಾರಿ ಆಗಿರುವುದು ಗೊತ್ತಾಗಿತ್ತು’ ಎಂದು ಕರ್ಣ ದೂರು ನೀಡಿದ್ದಾರೆ. ಆ ದೂರು ಆಧರಿಸಿ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚಿಕ್ಕಪೇಟೆ ಉಪ ವಿಭಾಗದ ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.

‘ವಾರಕ್ಕೊಮ್ಮೆ ಸ್ನಾನ, ನೀಲಿ ಚಿತ್ರ ವೀಕ್ಷಣೆ’

ಹಸುಗಳ ಕೆಚ್ಚಲು ಕೊಯ್ದ ಪ್ರಕರಣದ ಆರೋಪಿ ಶೇಖ್ ನಸ್ರುನನ್ನು ಬಂಧಿಸಿ ವಿಚಾರಣೆ ಒಳಪಡಿಸಿದಾಗ ಹಲವು ವಿಚಾರಗಳು ಬಯಲಾಗಿವೆ.

‘ವಿಚಾರಣೆ ವೇಳೆ ಆರೋಪಿ ವಿಚಿತ್ರವಾಗಿ ವರ್ತಿಸುತ್ತಿದ್ದ. ವಾರಕ್ಕೊಮ್ಮೆ ಸ್ನಾನ ಮಾಡುವುದಾಗಿ ಹೇಳಿಕೊಂಡಿದ್ದ. ಅಲ್ಲದೇ ಹಿಂದಿ ಭಾಷೆ ಬರುವುದಿಲ್ಲ ಎಂದು ತಿಳಿಸಿದ್ದ. ಯಾವ ಸ್ಥಳದಲ್ಲಿ ಇದ್ದೇನೆ ಎಂಬುದೂ ಅರಿವಿಲ್ಲ ಎಂದು ಹೇಳಿಕೆ ನೀಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

‘ಕೇವಲ ಲುಂಗಿ ಉಟ್ಟುಕೊಳ್ಳುತ್ತೇನೆಂದು ಹೇಳಿಕೆ ನೀಡಿದ್ದಾನೆ. ತನ್ನ ಕೂದಲನ್ನು ತಾನೇ ತೆಗೆದುಕೊಳ್ಳುವುದಾಗಿಯೂ ಹೇಳಿಕೆ ನೀಡಿದ್ದಾನೆ. ಅಲ್ಲದೇ ಹೆಚ್ಚು ನೀಲಿ ಚಿತ್ರ ವೀಕ್ಷಣೆ ಮಾಡುವುದಾಗಿಯೂ ಹೇಳಿಕೊಂಡಿದ್ದಾನೆ’ ಎಂದು ಮೂಲಗಳು ಹೇಳಿವೆ.

‘ವರ್ಷದ ಹಿಂದೆಯೂ ಆರೋಪಿ ಹಸುಗಳ ಜತೆಗೆ ವಿಚಿತ್ರವಾಗಿ ನಡೆದುಕೊಂಡಿದ್ದ’ ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

‘ಭಯ ಹುಟ್ಟಿಸಲು ಜಮೀರ್ ಯತ್ನ’



ಹಸುಗಳ ಕೆಚ್ಚಲು ಕೊಯ್ದ ಘಟನೆಯಿಂದ ಹಿಂದೂಗಳಿಗೆ ಆಘಾತವಾಗಿದೆ. ಸರ್ಕಾರದ ಅದೃಷ್ಟ ನೆಟ್ಟಗಿದ್ದ ಕಾರಣ, ಕೋಮುಗಲಭೆ ಆಗಲಿಲ್ಲ ಎಂದು ಬಿಜೆಪಿ ಮುಖಂಡ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾನಿಗಳಾದ ಸಜ್ಜನ್‌ರಾವ್ ಅವರು 100 ವರ್ಷಗಳ ಹಿಂದೆ ಪಶು ಆಸ್ಪತ್ರೆ ಕಟ್ಟಿ ಕೊಟ್ಟಿದ್ದರು. 2,227 ಪಶುಗಳಿವೆ. ಅಲ್ಲಿ ಯಾರ ಜೊತೆಗೂ ಚರ್ಚಿಸದೇ ಆಸ್ಪತ್ರೆಯನ್ನು ಕೆಡವಿ ಅಲ್ಪಸಂಖ್ಯಾತರ ಶಾಲೆ ನಿರ್ಮಿಸಲು ಹೊರಟಿದ್ದರು. ಅದನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಗಿತ್ತು. ಈ ಪ್ರತಿಭಟನೆಯಲ್ಲಿ ಹಸುಗಳ ಮಾಲೀಕರು ಮುಂಚೂಣಿಯಲ್ಲಿದ್ದರು. ಸ್ಥಳೀಯ ಶಾಸಕರೂ ಆಗಿರುವ ಜಮೀರ್ ಅಹ್ಮದ್ ಖಾನ್ ಅವರು ಹಿಂದೂಗಳಲ್ಲಿ ಭಯ ಹುಟ್ಟಿಸಿ, ಅವರು ತಮ್ಮ ಆಸ್ತಿ ಬಿಟ್ಟು ಹೋಗುವಂತೆ ಮಾಡಲು ಯತ್ನಿಸುತ್ತಿದ್ದಾರೆ ಎಂದೂ ದೂರಿದರು.

‘ನೈಜ ಆರೋಪಿಗಳ ಪತ್ತೆ ಹಚ್ಚಿ’



‘ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕೊಯ್ದ ಘಟನೆಯ ಹಿಂದೆ ಇರುವವರನ್ನು ರಾಜ್ಯ ಸರ್ಕಾರ ಪತ್ತೆ ಮಾಡಬೇಕೇ ಹೊರತು, ಯಾರೋ ಒಬ್ಬರನ್ನು ಕಾಟಾಚಾರಕ್ಕೆ ಬಂಧಿಸುವುದಲ್ಲ. ಪೊಲೀಸರು ಇದರ ಹಿಂದಿರುವ ನೈಜ ಆರೋಪಿಗಳನ್ನು ಪತ್ತೆ ಮಾಡಲಿ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈಗ ಬಂಧಿತನಾದವನು ಬಿಹಾರದ ವ್ಯಕ್ತಿ ಎನ್ನಲಾಗಿದೆ. ಆತ 10 ವರ್ಷಗಳಿಂದ ಇಲ್ಲೇ ನೆಲೆಸಿದ್ದು, ಆತನ ಅಣ್ಣನಿಗೆ ಫ್ಯಾಕ್ಟರಿ ಇದೆ. ಪೊಲೀಸರು ಈತನನ್ನು ವಿಚಾರಣೆ ಮಾಡಿ, ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಮಾಡಬೇಕಿತ್ತು’ ಎಂದರು.

‘ಇಲ್ಲಿ ಪಶು ಆಸ್ಪತ್ರೆಯ ಜಾಗವಿದ್ದು, ಅದನ್ನು ವಕ್ಫ್‌ಗೆ ನೀಡಲು ಪ್ರಯತ್ನ ನಡೆದಿತ್ತು. ಸುಮಾರು ₹500 ಕೋಟಿ ಬೆಲೆ ಬಾಳುವ ಆಸ್ತಿ ಲೂಟಿ ಮಾಡಲು ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಲಾಗಿತ್ತು. ಅದರ ವಿರುದ್ಧ ಹೋರಾಟ ಮಾಡಿದ ಕರ್ಣ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಹೀಗೆ ಮಾಡಿದ್ದಾರೆ. ಸಚಿವ ಜಮೀರ್ ಅಹಮದ್ ಹಸು ನೀಡುವುದರಿಂದ ಪರಿಹಾರ ಸಿಗಲ್ಲ. ಇದಕ್ಕೆ ನ್ಯಾಯ ಸಿಗಬೇಕಾಗಿದೆ’ ಎಂದು ಒತ್ತಾಯಿಸಿದರು.

100 ಹಸು ಕೊಟ್ಟರೂ ಪಾಪ ಹೋಗಲ್ಲ: ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ‘ಈ ದುಷ್ಕೃತ್ಯಕ್ಕೆ ಪ್ರೇರಣೆ ಯಾರು? ಯಾರ ಓಲೈಕೆ ರಾಜಕಾರಣದಿಂದ ಈ ರೀತಿ ಆಗುತ್ತಿದೆ ಎಂಬುದನ್ನು ನಾವು ಗಮನಿಸಬೇಕು. ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಕೆಟ್ಟು ಹೋಗಿದೆ. ಅಧಿಕಾರದ ಕಾದಾಟದಲ್ಲಿ ಈ ಸರ್ಕಾರ ರಾಜ್ಯವನ್ನೇ ಮರೆತಿದೆ’ ಎಂದು ಟೀಕಿಸಿದರು.

ಹಸು, ಕರು ಕೊಡಿಸಿದ ಸಂಸದ ಪಿ.ಸಿ.ಮೋಹನ್



ಕರ್ಣ ಅವರ ಮನೆಗೆ ಸಂಸದ ಪಿ.ಸಿ.ಮೋಹನ್ ಅವರು ಭೇಟಿ ನೀಡಿ ಘಟನೆ ಕುರಿತು ಮಾಹಿತಿ ಪಡೆದುಕೊಂಡರು. ಇದೇ ವೇಳೆ ಕರ್ಣ ಅವರಿಗೆ ಎರಡು ಹಸು ಹಾಗೂ ಒಂದು ಕರುವನ್ನು ಸಂಸದರು ನೀಡಿದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ನೇತೃತ್ವದಲ್ಲಿ ಕರ್ಣ ಅವರ ಮನೆಯಲ್ಲಿ ಮಂಗಳವಾರ ಸಂಕ್ರಾಂತಿ ಆಚರಿಸಿ ಗೋಪೂಜೆ ನೆರವೇರಿಸಲಿದ್ದೇವೆ’ ಎಂದು ಪಿ.ಸಿ.ಮೋಹನ್ ತಿಳಿಸಿದರು.

ಸುದ್ದಿ 2 ನಿಮಿಷ

ಇಬ್ಬರು ಡ್ರಗ್ಸ್ ಪೆಡ್ಲರ್‌ಗಳ ಸೆರೆ ₹3 ಲಕ್ಷ ಮೌಲ್ಯದ ವಸ್ತು ಜಪ್ತಿ

ಬೆಂಗಳೂರು: ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಮತ್ತು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಹೊರ ರಾಜ್ಯದ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ, ₹3 ಲಕ್ಷ ಮೌಲ್ಯದ ಮಾದಕವಸ್ತು ಜಪ್ತಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ಜಾನಿ ಖಾನ್ ಮತ್ತು ರಿಡಾಯ್ ಶೇಕ್ ಅವರನ್ನು ಬಂಧಿಸಿ, 35 ಗ್ರಾಂ. ತೂಕದ ಯಾಬಾ ಟ್ಯಾಬ್ಲೆಟ್, 1.ಕೆ.ಜಿ 747 ಗ್ರಾಂ. ಗಾಂಜಾ, ಎರಡು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.



ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತದ ಅಪಾರ್ಟ್‌ಮೆಂಟ್ ವೊಂದರ ಫ್ಲಾಟ್‌ನಲ್ಲಿ ನೆಲಸಿರುವ ಆರೋಪಿಗಳು, ಮಾದಕವಸ್ತುಗಳನ್ನು ಪರಿಚಿತರಿಗೆ ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಮಾಲು ಸಹಿತ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲವು ವರ್ಷಗಳಿಂದ ನಗರದಲ್ಲಿ ನೆಲಸಿರುವ ಆರೋಪಿಗಳು, ಸುಲಭವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಪಶ್ಚಿಮ ಬಂಗಾಳ ಮತ್ತು ಆಂಧ್ರ ಪ್ರದೇಶದಿಂದ ಪರಿಚಿತ ಡ್ರಗ್ ಪೆಡ್ಲರ್‌ಗಳಿಂದ ಮಾದಕವಸ್ತುಗಳನ್ನು ಕಡಿಮೆ ಬೆಲೆಗೆ ತರಿಸಿಕೊಂಡು ಮಾರಾಟ ಮಾಡುತ್ತಿದ್ದರು ಎಂದು ಹೇಳಿದರು.

ಕೆಲಸಕ್ಕಿದ್ದ ಹೋಟೆಲ್‌ನಲ್ಲಿ ತಾಮ್ರ, ಹಿತ್ತಾಳೆ ವಸ್ತುಗಳ ಕಳ್ಳತನ

ಬೆಂಗಳೂರು: ಕೆಲಸಕ್ಕಿದ್ದ ಹೋಟೆಲ್‌ನಲ್ಲಿ ತಾಮ್ರ ಹಾಗೂ ಹಿತ್ತಾಳೆಯ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಮಡಿವಾಳ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಸಫ್ವಾನ್ ಬಂಧಿತ ಹೋಟೆಲ್ ವ್ಯವಸ್ಥಾಪಕ.

ಕದ್ದ ವಸ್ತುಗಳನ್ನು ಆರೋಪಿ ಗುಜರಿಗೆ ಮಾರಾಟ ಮಾಡುತ್ತಿದ್ದ. ಕಾಟನ್‌ಪೇಟೆಯ ಗುಜರಿ ಅಂಗಡಿಯಿಂದ ಎರಡು ಹಿತ್ತಾಳೆಯ ದೀಪ, ಹಿತ್ತಾಳೆಯ ಒಂದು ಟೇಬಲ್, ತಾಮ್ರದ 10 ಜಗ್ಗು ಹಾಗೂ 85 ಲೋಟಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ತಾಮ್ರದ 19 ಬಟ್ಟಲು ಹಾಗೂ ಕೃಷ್ಣ, ಹಸು ಇರುವ ಹಿತ್ತಾಳೆ ವಿಗ್ರಹವನ್ನು ಆರೋಪಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ವಾಸವಿರುವ ಸಂಬಂಧಿಯ ಮನೆಯಲ್ಲಿ ಬಚ್ಚಿಟ್ಟಿದ್ದ. ಆ ವಸ್ತಗಳೂ ಸೇರಿದಂತೆ ಆರೋಪಿಯಿಂದ ₹4.50 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ಬಿಟಿಎಂ 1ನೇ ಹಂತದ ಭುವನಪ್ಪ ಲೇಔಟ್‌ನಲ್ಲಿ ದೂರುದಾರರು ಹೋಟೆಲ್ ನಡೆಸುತ್ತಿದ್ದರು. ಅದೇ ಹೋಟೆಲ್‌ನಲ್ಲಿ ಮೊಹಮ್ಮದ್ ಸಫ್ವಾನ್ ಕೆಲಸಕ್ಕಿದ್ದ. ಹೋಟೆಲ್ ಜವಾಬ್ದಾರಿಯನ್ನು ಮಾಲೀಕರು ವ್ಯವಸ್ಥಾಪಕನಿಗೆ ನೀಡಿದ್ದರು. ಆರೋಪಿ ತಾಮ್ರ ಹಾಗೂ ಹಿತ್ತಾಳೆಯ ವಸ್ತುಗಳನ್ನು ಕಳ್ಳತನ ಮಾಡಿ ಪರಾರಿ ಆಗಿದ್ದ. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದರು.

ಸಿಲಿಂಡರ್ ಸ್ಫೋಟ: ಐವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚೊಕ್ಕಸಂದ್ರದ ಮನೆಯೊಂದರಲ್ಲಿ ಎಲ್‌ಪಿಜಿ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸಂಭವಿಸಿದ ಸ್ಫೋಟದಿಂದ ಅಸ್ಸಾಂ ಮೂಲದ ದಂಪತಿ ಸೇರಿ ಐವರು ಗಾಯಗೊಂಡಿದ್ದಾರೆ. ಇಬ್ಬರ ಸ್ಥಿತಿ ಗಂಭೀರವಾಗಿದೆ.



ಸ್ಫೋಟದ ತೀವ್ರತೆಗೆ ಅಕ್ಕಪಕ್ಕದ ಮನೆಗಳ ಕಿಟಕಿ, ಬಾಗಿಲುಗಳಿಗೆ ಹಾನಿಯಾಗಿದೆ. ಕಿಟಕಿಗಳಿಗೆ ಅಳವಡಿಸಿದ್ದ ಬಟ್ಟೆಯ ಪರದೆಗಳು ಸುಟ್ಟು ಹೋಗಿವೆ.

ಅಸ್ಸಾಂ ಮೂಲದ ಬಿಜುದಾಸ್(34) ಹಾಗೂ ಅಂಜಲಿ ದಾಸ್(27) ದಂಪತಿ, ಅವರ ಮೂರು ವರ್ಷದ ಹೆಣ್ಣು ಮಗು ಮನುಶ್ರೀ, ಎದುರು ಮನೆಯಲ್ಲಿ ವಾಸವಿದ್ದ ಮಂಜುನಾಥ್(25), ತಿಪ್ಪೇರುದ್ರಸ್ವಾಮಿ(50), ಪಕ್ಕದ ಮನೆಯ ನಿವಾಸಿ ಶೋಭಾ(60) ಅವರು ಗಾಯಗೊಂಡಿದ್ದಾರೆ. ಎಲ್ಲರೂ ಬಾಡಿಗೆ ಮನೆಗಳಲ್ಲಿ ವಾಸವಿದ್ದರು.

ಗಾಯಾಳುಗಳಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ಬಿಜುದಾಸ್ ಹಾಗೂ ಅಂಜಲಿದಾಸ್ ದಂಪತಿಗೆ ಹೆಚ್ಚಿನ ಪ್ರಮಾಣದಲ್ಲಿ ಸುಟ್ಟ ಗಾಯಗಳಾಗಿವೆ ಎಂದು ಮೂಲಗಳು ತಿಳಿಸಿವೆ.

ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರು ಅಂತಸ್ತಿನ ಕಟ್ಟಡದ ನೆಲಮಹಡಿಯ ಬಾಡಿಗೆ ಮನೆಯಲ್ಲಿ ಬಿಜುದಾಸ್ ದಂಪತಿ ವಾಸವಿದ್ದರು. ರಾತ್ರಿ ದಂಪತಿ ಹಾಗೂ ಮಗು ಊಟ ಮಾಡಿ ನಿದ್ರೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಅನಿಲ ಸೋರಿಕೆ ಆಗಿರುವುದು ದಂಪತಿಯ ಗಮನಕ್ಕೆ ಬಂದಿಲ್ಲ.

ಬೆಳಿಗ್ಗೆ ಅಂಜಲಿದಾಸ್ ಹಾಲು ಕಾಯಿಸಲು ಅಡುಗೆ ಮನೆಗೆ ಹೋಗಿ ವಿದ್ಯುತ್ ದೀಪ ಬೆಳಗಿಸುತ್ತಿದ್ದಂತೆ ಏಕಾಏಕಿ ಬೆಂಕಿ ಹೊತ್ತಿಕೊಂಡು ಸ್ಫೋಟಗೊಂಡಿದೆ. ಆಗ ದಂಪತಿ ಮತ್ತು ಮೂರು ವರ್ಷದ ಮಗಳು ಮನುಶ್ರೀಗೂ ಗಾಯಗಳಾಗಿವೆ. ಪಕ್ಕದ ಮನೆಯ ಶೋಭಾ ಎಂಬವರು ರಂಗೋಲಿ ಹಾಕುತ್ತಿದ್ದರು. ಅವರಿಗೂ ಸುಟ್ಟ ಗಾಯಗಳಾಗಿವೆ. ಸ್ಫೋಟದ ತೀವ್ರತೆಗೆ ಎದುರಿನ ಮನೆಯಲ್ಲಿ ಕೂತಿದ್ದ ಮಂಜುನಾಥ್ ಗಾಯಗಳಾವೆ. ಅದೇ ಮನೆಯಲ್ಲಿದ್ದ ಅಜ್ಜಿಗೂ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದರು.

ಬಚಾವಾದ ಸಿಬ್ಬಂದಿ: ಸ್ಫೋಟಕ್ಕೂ ಸ್ವಲ್ಪ ಹೊತ್ತಿನ ಮೊದಲು ಮನೆಯ ಮುಂದೆಯೇ ಬಿಬಿಎಂಪಿ ಕಸ ಸಂಗ್ರಹಿಸಲು ನಿಯೋಜಿಸುವ ಸಿಬ್ಬಂದಿ ತೆರಳಿದ್ದರು. ಅಪಾಯದಿಂದ ಅವರು ಪಾರಾಗಿದ್ದಾರೆ.

ಶಾರ್ಟ್ ಸರ್ಕಿಟ್‌ನಿಂದ ಅವಘಡ, ಅಪಾರ ನಷ್ಟ

ಬೆಂಕಿ ಅವಘಡ: ಹೊತ್ತಿ ಉರಿದ ಗಾರ್ಮೆಂಟ್ಸ್

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯ ರುಕ್ಮಿಣಿ ನಗರದ ಸಿದ್ಧ ಉಡುಪು ಕಾರ್ಖಾನೆಯಲ್ಲಿ ಸೋಮವಾರ ಬೆಳಿಗ್ಗೆ ಬೆಂಕಿ ಅವಘಡ ಸಂಭವಿಸಿದ್ದು, ಹೊಲಿಗೆ ಯಂತ್ರ, ಕಚ್ಚಾ ಸಾಮಗ್ರಿ ಹಾಗೂ ಮಾರಾಟಕ್ಕೆ ಸಿದ್ಧಗೊಂಡ ಬಟ್ಟೆಗಳು ಭಸ್ಮವಾಗಿವೆ.

ಆರ್.ಎ.ಫ್ಯಾಷನ್ ಬಟ್ಟೆ ಗಾರ್ಮೆಂಟ್ಸ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಅನಾಹುತ ಸಂಭವಿಸಿದೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

‘ಬೆಂಕಿ ಅವಘಡದಿಂದ ಅಪಾರ ನಷ್ಟವಾಗಿದೆ’ ಎಂದು ಮಾಲೀಕ ಅರುಣ್ ತಿಳಿಸಿದ್ದಾರೆ. ಬೆಂಕಿ ಅವಘಡದಿಂದ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

‘ಕೋವಿಡ್ ನಂತರದ ದಿನಗಳಲ್ಲಿ ಗಾರ್ಮೆಂಟ್ಸ್ ಆರಂಭಿಸಲಾಗಿತ್ತು. ಚೆನ್ನಾಗಿ ನಡೆಯುತ್ತಿತ್ತು. 100ಕ್ಕೂ ಹೆಚ್ಚು ನೌಕರರು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಬ್ರ್ಯಾಂಡೆಡ್ ಬಟ್ಟೆಗಳನ್ನು ತಯಾರಿಸಿ, ನಗರದ ಬೇರೆ ಬೇರೆ ಭಾಗಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು’ ಎಂದು ಮಾಲೀಕರು ತಿಳಿಸಿದ್ದಾರೆ.



ಬೆಂಕಿ ಅವಘಡದಿಂದ ಸುಟ್ಟು ಕರಕಲಾದ ಹೊಲಿಗೆ ಯಂತ್ರಗಳು

8 ಸಾವಿರಕ್ಕೂ ಹೆಚ್ಚು ಬ್ರ್ಯಾಂಡೆಡ್ ಜೀನ್ಸ್ ಪ್ಯಾಂಟ್‌ಗಳು, 150ಕ್ಕೂ ಹೆಚ್ಚು ಹೊಲಿಗೆ ಯಂತ್ರಗಳು, ಕಿಟಕಿಗಳು, ಫ್ಯಾನ್ ಹಾಗೂ ದಾಖಲೆಗಳು ಸುಟ್ಟು ಹೋಗಿವೆ ಎಂದು ಹೇಳಿದ್ದಾರೆ.

ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿ ಶಾಮಕದಳ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಲು ಯಶಸ್ವಿಯಾದರು. ಘಟನೆಯಿಂದ ಗಾರ್ಮೆಂಟ್ಸ್ ಕಟ್ಟಡ ಹಾಗೂ ಪಕ್ಕದ ಕಟ್ಟಡಕ್ಕೂ ಹಾನಿಯಾಗಿದೆ. ಸ್ಥಳಕ್ಕೆ ಭೇಟಿ ನೀಡಿದ ಪೀಣ್ಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಕಾರ್ಮಿಕ ಇಲಾಖೆಯವರು ಸ್ಥಳ ಪರಿಶೀಲನೆ ನಡೆಸಿದರು.

‘ಸೋಮವಾರ ಬೆಳಿಗ್ಗೆ 6ರ ಸುಮಾರಿಗೆ ಸ್ಥಳಕ್ಕೆ ಬಂದಿದ್ದೆ. ಪಕ್ಕದ ಗಾರ್ಮೆಂಟ್ಸ್ ಹೊತ್ತಿ ಉರಿಯುತ್ತಿತ್ತು. ಮಾಲೀಕರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬರುವಷ್ಟರಲ್ಲಿ ಬಹುತೇಕ ಗಾರ್ಮೆಂಟ್ಸ್ ಬೆಂಕಿಗೆ ಆಹುತಿ ಆಗಿತ್ತು. ಅಗ್ನಿ ಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೇರೆ ಬೇರೆ ಗಾರ್ಮೆಂಟ್ಸ್‌ಗಳಿಗೆ ಬೆಂಕಿ ವ್ಯಾಪಿಸುವುದನ್ನು ತಪ್ಪಿಸಿದರು’ ಎಂದು ಪಕ್ಕದ ಗಾರ್ಮೆಂಟ್ಸ್ ಮಾಲೀಕ ಹಾಗೂ ಪ್ರತ್ಯಕ್ಷದರ್ಶಿ ದಾನೇಂದ್ರ ಹೇಳಿದರು.

250 ಅಡಿಕೆ ಗಿಡ ಕತ್ತರಿಸಿದ ದುಷ್ಕರ್ಮಿಗಳು

ಪ್ರಜಾವಾಣಿ ವಾರ್ತೆ

ಚಳ್ಳಕೆರೆ (ಚಿತ್ರದುರ್ಗ): ತಾಲ್ಲೂಕಿನ ಪರಶುರಾಂಪುರ ಹೋಬಳಿ ವ್ಯಾಪ್ತಿಯ ಚನ್ನಮ್ಮನಾಗತಿಹಳ್ಳಿ ಗ್ರಾಮದ ರೈತರಾದ ಶಿವಣ್ಣ ಮತ್ತು ಬಡ್ಡಿ ಮುದ್ದಣ್ಣ ಅವರು ಬೆಳೆಸಿದ್ದ 250 ಅಡಿಕೆ ಗಿಡಗಳನ್ನು ಕಿಡಿಗೇಡಿಗಳು ಭಾನುವಾರ ರಾತ್ರಿ ಕತ್ತರಿಸಿ ಹಾಕಿದ್ದಾರೆ.

ಅದೇ ದಿನ ಅಡಿಕೆ ತೋಟದ ಸುತ್ತಮುತ್ತ ಜಮೀನು ಹೊಂದಿರುವ ಚನ್ನರಾಯಪ್ಪ, ಚೌಳೂರು ನಾಗಣ್ಣ, ಶಿವಣ್ಣ, ಬಸವರಾಜ, ದಿನೇಶ್, ಚಿತ್ತಪ್ಪ, ಜಯಣ್ಣ, ಕಿರಣಶಂಕರ್, ಚನ್ನಪ್ಪ, ರಾಜ ಅವರಿಗೆ ಸೇರಿದ 20ಕ್ಕೂ ಹೆಚ್ಚು ಕೊಳವೆ ಬಾವಿಗಳಿಗೆ ಅಳವಡಿಸಿದ್ದ ಮೋಟರ್ ಸ್ಟಾರ್ಟರ್, ಕೇಬಲ್ ವೈರ್‌ಗಳನ್ನೂ ಕದ್ದೊಯ್ಯಲಾಗಿದೆ. ಘಟನೆಯಿಂದ ಸುತ್ತಮುತ್ತಲ ಜಮೀನುಗಳ ರೈತರು ತೀವ್ರ ಆತಂಕಕ್ಕೀಡಾಗಿದ್ದಾರೆ.

ಘಟನೆ ಕುರಿತು ರೈತರು ಪರಶುರಾಂಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಪೊಲೀಸ್ ಸಿಬ್ಬಂದಿ ತೋಟಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ಅಡಿಕೆ ಗಿಡಗಳನ್ನು ನಾಶಪಡಿಸುವ ಜೊತೆಗೆ ಕಳ್ಳತನವನ್ನೂ ಮಾಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಲಾಭಾಂಶದ ಆಸೆ ತೋರಿಸಿ ₹2 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೇಷ್ಯಾದ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಲಾಭಾಂಶ ನೀಡುವುದಾಗಿ ಹೇಳಿ ₹2 ಕೋಟಿ ರೂಪಾಯಿ ಪಡೆದು ವಂಚಿಸಿದ್ದ ಏಳು ಆರೋಪಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಶ್ಯಾಮ್ ಥಾಮಸ್, ಜೋಸ್ ಕುರುವಿಲ್ಲಾ, ಜೆ.ಪಿ.ನಗರದ ಜೀನ್ ಕಮಲ್, ಮುಂಬೈನ ವಿಜಯ್ ವಾಮನ್ ಚಿಪ್ಲೂಂಕರ್, ಹೆಣ್ಣೂರಿನ ಊರ್ವಶಿ ಗೋಸ್ವಾಮಿ, ಕೋರಮಂಗಲದ ಜಾಫರ್ ಸಾದಿಕ್, ವಿದ್ಯಾರಣ್ಯಪುರದ ಅಮಿತ್ ಮಹೇಶ್ ಅವರನ್ನು ಬಂಧಿಸಲಾಗಿದೆ.

ಆರೋಪಿಗಳಿಂದ ₹ 44 ಲಕ್ಷ ನಗದು, ನೋಟು ಎಣಿಕೆ ಮಾಡುವ ಯಂತ್ರ, ಐದು ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತರ ಪೈಕಿ ಇಬ್ಬರು ಬಿ.ಇ. ಪದವೀಧರರು, ಇಬ್ಬರು ಗುತ್ತಿಗೆದಾರರು ಇದ್ದಾರೆ.

ತಲೆಮರೆಸಿಕೊಂಡಿರುವ ದೆಹಲಿಯ ಕಲ್ಯಾಣ ಮುರುಗನ್, ವಿಕಿ, ಅಹಮದಾಬಾದ್‌ನ ಅಲ್ಪೇಶ್ ಪಟೇಲ್, ಚಂದ್ರೇಶ್ ಪಟೇಲ್ ಮತ್ತು ಮಧ್ಯಪ್ರದೇಶದ ಪಂಜು ಅವರ ಪತ್ತೆಗೆ ಶೋಧಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



‘ಮಲೇಷ್ಯಾದ ‘ಎಂಐಬಿಡಿ ಕ್ಯಾಪಿಟಲ್ ಬೆರ್ಹಾಡ್’ ಎಂಬ ಹೆಸರಿನ ನಕಲಿ ಕಂಪನಿ ಆರಂಭಿಸಿದ್ದ ಆರೋಪಿಗಳು, ಶ್ರೀಮಂತರನ್ನು ಗುರಿಯಾಗಿಸಿಕೊಂಡು ಸಂಪರ್ಕಿಸುತ್ತಿದ್ದರು. ತಮ್ಮ ಕಂಪನಿಯಲ್ಲಿ ಹಣ ಹೂಡಿದರೆ ಒಂದೇ ದಿನದಲ್ಲಿ ಅಧಿಕ ಲಾಭ ನೀಡುವುದಾಗಿ ನಂಬಿಸುತ್ತಿದ್ದರು. ಇದೇ ರೀತಿ ಶ್ರೀನಿವಾಸ ನಗರದ ಜೆ. ನವೀನ್ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ತಮ್ಮ ಕಂಪನಿಯಲ್ಲಿ ₹2 ಕೋಟಿ ಹೂಡಿಕೆ ಮಾಡಿದರೆ ಒಂದೇ ದಿನದಲ್ಲಿ ₹ 3.50 ಕೋಟಿ ಹಣವನ್ನು ಆರ್‌ಟಿಜಿಎಸ್ ಅಥವಾ ಎನ್‌ಇಎಫ್‌ಟಿ ಮೂಲಕ ವರ್ಗಾಯಿಸುವುದಾಗಿ ನಂಬಿಸಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಆರೋಪಿಗಳ ಮಾತು ನಂಬಿದ್ದ ನವೀನ್, ಕಬ್ಬನ್‌ಪೇಟೆಯಲ್ಲಿ ತೆರೆದಿದ್ದ ಕಚೇರಿಗೆ ತೆರಳಿ ₹2 ಕೋಟಿ ನೀಡಿದ್ದರು. ಆರಂಭದಲ್ಲಿ ಲಾಭಾಂಶವೆಂದು ₹9,870 ಹಣವನ್ನು ಅವರ ಖಾತೆಗೆ ವರ್ಗಾಯಿಸಿದ್ದರು. ಉಳಿದ ಹಣ ಆದಷ್ಟು ಬೇಗ ಖಾತೆಗೆ ಜಮೆಯಾಗುತ್ತದೆ ಎಂದಿದ್ದರು. ಬಳಿಕ ಆರೋಪಿಗಳು ಸಂಪರ್ಕಕ್ಕೆ ಸಿಕ್ಕಿರಲಿಲ್ಲ’ ಎಂದು ತಿಳಿಸಿದ್ದಾರೆ.

ಪ್ರಕರಣದ ತನಿಖೆ ಕೈಗೊಂಡ ಪೊಲೀಸರು, ಮೂವರನ್ನು ಮೆಜೆಸ್ಟಿಕ್ ಬಸ್ ನಿಲ್ದಾಣದ ಬಳಿ ವಶಕ್ಕೆ ಪಡೆದಿದ್ದರು. ಅವರು ನೀಡಿದ ಮಾಹಿತಿ ಆಧರಿಸಿ ಇನ್ನೂ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದ ಸೂತ್ರಧಾರಿ ಮಲೇಷ್ಯಾದಲ್ಲಿ ಕುಳಿತು ವಂಚನೆಯ ಜಾಲ ನಡೆಸುತ್ತಿದ್ದ ಎಂಬುದು ತನಿಖೆ ವೇಳೆ ಗೊತ್ತಾಗಿದೆ ಎಂದು ಹೇಳಿದ್ದಾರೆ.

ಬಂಧಿತ ಆರೋಪಿಗಳು ಹವಾಲ ದಂಧೆಯಲ್ಲಿ ತೊಡಗಿರುವುದು ತನಿಖೆ ವೇಳೆ ಗೊತ್ತಾಗಿದೆ. ಆರೋಪಿಗಳಿಂದ ಹವಾಲ ದಂಧೆಗೆ ಬಳಸಿದ್ದ ₹ 10 ಮುಖ ಬೆಲೆಯ ಎರಡು ನೋಟುಗಳು ಹಾಗೂ ಒಂದು ಡೈರಿ ಜಪ್ತಿ ಮಾಡಲಾಗಿದೆ.

ಲಕ್ಷ್ಮಣ ತೀರ್ಥ ಹಿನ್ನೀರಿನಲ್ಲಿ ಶವ ಪತ್ತೆ: ಕೃತ್ಯದಲ್ಲಿ ಹಲವರು ಭಾಗಿಯಾಗಿರುವ ಶಂಕೆ

ಹಣದಾಸೆಗೆ ವೈದ್ಯನ ಕೊಲೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮಾರಾಟದಿಂದ ಬಂದ ಹಣದ ಆಸೆಗಾಗಿ ವೈದ್ಯರೊಬ್ಬರನ್ನು ಕೊಲೆ ಮಾಡಿದ ಮೂವರು ಆರೋಪಿಗಳನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಏಳು ತಿಂಗಳ ಹಿಂದೆ ಆಯುರ್ವೇದ ವೈದ್ಯ ಆನಂದ್ ಅವರನ್ನು ಕೊಲೆ ಮಾಡಿ ಮೈಸೂರು ಜಿಲ್ಲೆಯ ಲಕ್ಷ್ಮಣ ತೀರ್ಥ ಹಿನ್ನೀರಿನಲ್ಲಿ ಎಸೆಯಲಾಗಿತ್ತು. ಆರೋಪಿಗಳಾದ ಮೊಹಮ್ಮದ್ ಗೌಸ್, ನದೀಂ ಪಾಷಾ, ಸೈಯ್ಯದ್ ನೂರ್ ಪಾಷಾ ಅವರನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಹಲವರು ಭಾಗಿಯಾಗಿರುವ ಸಾಧ್ಯತೆ ಇದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಯನಗರ ನಿವಾಸಿ ಆನಂದ್ ಅವರು ಮಧ್ಯವರ್ತಿಗಳಾದ ಮೊಹಮ್ಮದ್ ಗೌಸ್, ನದೀಂ ಪಾಷಾ ಹಾಗೂ ಸೈಯ್ಯದ್ ನೂರ್ ಪಾಷಾ ಅವರ ಮೂಲಕ ₹90 ಲಕ್ಷಕ್ಕೆ ತಮ್ಮ ಮನೆಯನ್ನು ಪ್ರಸಾದ್ ಎಂಬುವರಿಗೆ ಮಾರಾಟ ಮಾಡಿದ್ದರು. ಆನಂದ್ ಅವರಿಗೆ ಬಂದಿದ್ದ ₹45 ಲಕ್ಷ ಮುಂಗಡ ಹಣದಲ್ಲಿ ಮಧ್ಯವರ್ತಿಗಳು ₹33 ಲಕ್ಷ ಹಂಚಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.



‘ಮಾತುಕತೆಯಾಗಿದ್ದ ಹಣ ಆನಂದ್ ಕೈಸೇರುವ ಮುನ್ನವೇ ಅವರ ಮನೆಯ ಕೀಯನ್ನು ಖರೀದಿದಾರ ಪ್ರಸಾದ್ ಅವರಿಗೆ ಮೊಹಮ್ಮದ್ ಗೌಸ್ ಕೊಟ್ಟಿದ್ದ. ವ್ಯವಹಾರದಲ್ಲಿ ಗೊಂದಲ ಉಂಟಾದ ಕಾರಣ ಆನಂದ್ ಅವರು ಪ್ರಸಾದ್ ವಿರುದ್ಧ ಪ್ರಕರಣ ದಾಖಲಿಸಿದ್ದರು. ಹಾಗಾಗಿ ಉಳಿದ ₹45 ಲಕ್ಷವನ್ನು ಪ್ರಸಾದ್ ಇನ್ನೂ ನೀಡಿರಲಿಲ್ಲ’ ಎಂದು ಹೇಳಿದ್ದಾರೆ.

‘ವ್ಯವಹಾರದ ಮಾತುಕತೆಗಾಗಿ ಆನಂದ್ ಮೈಸೂರಿನ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದರು. ಅವರ ಸಹಿಯಿರುವ ಖಾಲಿ ಚೆಕ್‌ಗಳು ತಮ್ಮ ಬಳಿಯಿರುವುದರಿಂದ ಅವರನ್ನು ಸಾಯಿಸಿದರೆ ಹಣವನ್ನು ತಾವೇ ಹಂಚಿಕೊಳ್ಳಬಹುದು ಎಂದು ಆರೋಪಿಗಳು ಸಂಚು ರೂಪಿಸಿದ್ದರು. ಜುಲೈ 9ರಂದು ಆನಂದ್ ಜೊತೆ ಕಾರಿನಲ್ಲಿ ಬೆಂಗಳೂರಿನತ್ತ ಪ್ರಯಾಣಿಸಿದ್ದ ಆರೋಪಿಗಳು, ಮಾರ್ಗಮಧ್ಯೆ ಕಾರು ನಿಲ್ಲಿಸಿದ್ದರು. ನೈಲಾನ್ ಹಗ್ಗದಿಂದ ಅವರ ಕುತ್ತಿಗೆ ಬಿಗಿದು ಕೊಲೆ ಮಾಡಿ, ಮೃತದೇಹವನ್ನು ಲಕ್ಷ್ಮಣ ತೀರ್ಥದ ಹಿನ್ನೀರಿನಲ್ಲಿ ಎಸೆದು ಪರಾರಿಯಾಗಿದ್ದರು’ ಎಂದು ಮಾಹಿತಿ ನೀಡಿದರು.

ಆನಂದ್ ಸಂಪರ್ಕಕ್ಕೆ ಸಿಗದಿದ್ದಾಗ ಅವರ ಸಂಬಂಧಿ ರಘುಪತಿ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅವರನ್ನು ಪತ್ತೆ ಹಚ್ಚುವಂತೆ ಪೊಲೀಸರಿಗೆ ಸೂಚಿಸುವಂತೆ ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು.

ತನಿಖೆ ನಡೆಸಿದ ಪೊಲೀಸರಿಗೆ, ಆನಂದ್ ಬಳಸುತ್ತಿದ್ದ ಮೊಬೈಲ್ ಫೋನ್ ಛತ್ತೀಸ್ ಗಢದಲ್ಲಿ ಬಳಸುತ್ತಿರುವುದು ಪತ್ತೆಯಾಗಿತ್ತು. ಅಲ್ಲಿಗೆ ತೆರಳಿ ವಿಚಾರಿಸಿದಾಗ, ಆತ ಸೈಯ್ಯದ್ ನೂರ್ ಪಾಷಾನ ಬಗ್ಗೆ ಮಾಹಿತಿ ನೀಡಿದ್ದ. ಬಳಿಕ ಸೈಯ್ಯದ್ ನೂರ್ ಪಾಷಾನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಕೊಲೆ ವಿಚಾರ ಬಯಲಾಗಿದೆ.

ಎರಡು ಕಾರುಗಳಿಗೆ ಒಂದೇ ನಂಬರ್ ಪ್ಲೇಟ್!

ಅಪರಾಧ ಸುದ್ದಿ

ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡು ಅನುಮಾನಾಸ್ಪದವಾಗಿ ನಿರ್ಬಂಧಿತ ಸ್ಥಳದಲ್ಲಿ ಕಾರು ನಿಲುಗಡೆ ಮಾಡಿದ್ದ ಅಪರಿಚಿತ ವ್ಯಕ್ತಿಯ ವಿರುದ್ಧ ವಿವೇಕನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಶೋಕ ನಗರ ಸಂಚಾರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಶಿವರಾಜ್ ಅವರು ನೀಡಿದ ದೂರಿನ ಮೇರೆಗೆ ಅಪರಿಚಿತ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮಾರುತಿ ಇಕೋ ಕಾರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ವಾಹನ ನಿಲುಗಡೆ ನಿರ್ಬಂಧ ಜಾಗದಲ್ಲಿ ಕಾರೊಂದನ್ನು ನಿಲುಗಡೆ ಮಾಡಲಾಗಿತ್ತು. ಅಲ್ಲಿಂದ ಕಾರು ತೆರವು ಮಾಡುವಂತೆ, ದೂರು ಬಂದಿತ್ತು. ನಂಬರ್ ಪ್ಲೇಟ್‌ನಲ್ಲಿದ್ದ ನೋಂದಣಿ ಸಂಖ್ಯೆ ನಮೂದಿಸಿಕೊಂಡು, ಕಾರಿನ ಮಾಲೀಕ ಜಾನ್ ಮಾರ್ಟಿನ್ ಅವರ ಮೊಬೈಲ್ ನಂಬರ್‌ಗೆ ಕರೆ ಮಾಡಲಾಗಿತ್ತು. ಕಾರು ತೆರವು ಮಾಡಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ಸೂಚಿಸಲಾಗಿತ್ತು. ಆದರೆ, ತಮ್ಮ ಕಾರನ್ನು ವಿವೇಕನಗರದ ಎನ್‌ಜಿವಿ ಬಳಿ ನಿಲುಗಡೆ ಮಾಡಿರುವುದಾಗಿ ಜಾನ್ ಮಾರ್ಟಿನ್ ಹೇಳಿದ್ದರು. ಕಾರು ಕಳ್ಳತನ ಆಗಿರಬಹುದು ಎಂದು ಭಾವಿಸಿ ಸಂಚಾರ ವಿಭಾಗದ ಪೊಲೀಸರು ಹೇಳಿದ್ದ ಸ್ಥಳಕ್ಕೆ ಬಂದಿದ್ದರು. ಸ್ಥಳಕ್ಕೆ ಬಂದು ನೋಡಿದಾಗ ಕಾರು ತಮ್ಮದಲ್ಲ ಎಂಬುದು ಗೊತ್ತಾಗಿತ್ತು. ಜಾನ್ ಮಾರ್ಟಿನ್ ಅವರ ಕಾರಿನ ನಂಬರ್ ಅನ್ನೇ ಆ ಕಾರಿಗೂ ಹಾಕಿಕೊಂಡಿದ್ದು ಪತ್ತೆಯಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಜಾನ್ ಅವರ ದಾಖಲಾತಿ ಪರಿಶೀಲಿಸಿದಾಗ, ನಕಲಿ ನಂಬರ್ ಅನ್ನು ಬೇರೆ ವ್ಯಕ್ತಿ ಅಳವಡಿಸಿಕೊಂಡಿರುವುದು ಗೊತ್ತಾಗಿದೆ. ಜಾನ್ ಅವರ ಕಾರು ಬೂದು ಬಣ್ಣದ್ದಾಗಿದೆ. ಆದರೆ, ಅಪರಿಚಿತ ಕಾರು ಬಿಳಿ ಬಣ್ಣದಾಗಿತ್ತು. ಸದ್ಯ ನಿರ್ಬಂಧಿತ ಸ್ಥಳದಲ್ಲಿ ನಿಂತಿದ್ದ ಕಾರನ್ನು ಜಪ್ತಿ ಮಾಡಲಾಗಿದೆ. ಕಾರು ನಿಲುಗಡೆ ಮಾಡಿದ್ದ ಅಕ್ಕಪಕ್ಕದ ಸ್ಥಳದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ. ಆರೋಪಿ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ಅವೈಜ್ಞಾನಿಕ ಕಾಮಗಾರಿ: ಜಲಚರಗಳ ಜೀವಕ್ಕೆ ಕುತ್ತು

ಕೌದೇನಹಳ್ಳಿ ಕೆರೆಗೆ ಕಲುಷಿತ ನೀರು

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಅವೈಜ್ಞಾನಿಕ ಕಾಮಗಾರಿಯಿಂದಾಗಿ ರಾಜಕಾಲುವೆ ಮೂಲಕ ಕೊಳಚೆ ನೀರು ಕೆರೆ ಸೇರುತ್ತಿದೆ. ಕೆರೆಯ ನೀರು ಕಪ್ಪು ಬಣ್ಣಕ್ಕೆ ತಿರುಗಿದ್ದು, ದುರ್ವಾಸನೆ ಹೊರ ಹೊಮ್ಮುತ್ತಿದೆ. ಜಲಚರಗಳ ಸಾಯುತ್ತಿವೆ ..!

ಇದು ಕೆ.ಆರ್.ಪುರ ಕ್ಷೇತ್ರದ ರಾಮಮೂರ್ತಿ ನಗರ ವಾರ್ಡ್‌ನ ಜನರ ಜೀವನಾಡಿಯಾಗಿರುವ ಕೌದೇನಹಳ್ಳಿಯ ಕೆರೆಯ ದುಸ್ಥಿತಿ.

ಸುಮಾರು 25 ಎಕರೆ ವಿಸ್ತೀರ್ಣದಲ್ಲಿರುವ ಈ ಕೆರೆಯನ್ನು ಒಂದೂವರೆ ವರ್ಷದ ಹಿಂದೆ ₹1.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಜಲಮಂಡಳಿ ಮತ್ತು ಬಿಬಿಎಂಪಿ ಅಧಿಕಾರಿಗಳ ಸಮನ್ವಯದ ಕೊರತೆ ಹಾಗೂ ಜಲಮಂಡಳಿ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ, ರಾಜಕಾಲುವೆಯ ಮೂಲಕ ಕೊಳಚೆ ನೀರು ಕೆರೆಯನ್ನು ಸೇರುತ್ತಿದೆ.

‘ಹೊರಮಾವು, ಅಗರ, ವಿಜಿನಾಪುರ, ರಾಮಮೂರ್ತಿನಗರ ಮೂಲಕ ಹಾದುಹೋಗುವ ರಾಜಕಾಲುವೆಯನ್ನು ಕೆರೆಗೆ ನೇರವಾಗಿ ಸಂಪರ್ಕ ಕಲ್ಪಿಸಲಾಗಿದೆ. ರಾಮಮೂರ್ತಿನಗರದ ವಿವಿಧ ಬಡಾವಣೆಯ ಮನೆಗಳ ತ್ಯಾಜ್ಯ ನೀರು ರಾಜಕಾಲುವೆಯಲ್ಲಿ ಹರಿದು ಕೆರೆ ಸೇರುತ್ತಿದೆ. ಕೊಳಚೆ ನೀರಿನ ಜೊತೆಗೆ ಪ್ಲಾಸ್ಟಿಕ್ ತ್ಯಾಜ್ಯವೂ ಮಿಶ್ರವಾಗುತ್ತಿದೆ’ ಎಂದು ಸ್ಥಳೀಯ ನಿವಾಸಿ ವಿಶ್ವನಾಥ್ ಹೇಳಿದರು.



ರಾಜಕಾಲುವೆ ಮೂಲಕ ಕೌದೇನಹಳ್ಳಿ ಕೆರೆಗೆ ಸೇರುತ್ತಿರುವ ಕಲುಷಿತ ನೀರು

ಕೆರೆ ಅಭಿವೃದ್ಧಿ ಮಾಡುವಾಗ ರಾಜಕಾಲುವೆ ನೀರನ್ನು ಕೆರೆಗೆ ತಿರುಗಿಸದಂತೆ ತಿಳಿಸಲಾಗಿತ್ತು. ಆದರೂ, ಕೊಳಚೆ ನೀರು ಕೆರೆಗೆ ಹರಿಯುವಂತೆ ಮಾಡಿದ್ದಾರೆ. ಜಲಮಂಡಳಿ ಮತ್ತು ಬಿಬಿಎಂಪಿ ಅಧಿಕಾರಿಗಳು ತಕ್ಷಣ ಪರಿಶೀಲಿಸಿ, ಸಮಸ್ಯೆ ಪರಿಹರಿಸಬೇಕು’ ಎಂದು ಕೆ.ಆರ್.ಪುರ ಪರಿಸರ ಸಂರಕ್ಷಣಾ ಟ್ರಸ್ಟ್ ಅಧ್ಯಕ್ಷ ನಾರಾಯಣಪ್ಪ ಒತ್ತಾಯಿಸಿದರು.

‘ಕೆರೆ ಭರ್ತಿಯಾಗಿ ಕೋಡಿ ನೀರು ಹರಿಯುವ ಜಾಗದಲ್ಲಿ ಮಣ್ಣನ್ನು ಹಾಗೆಯೇ ಬಿಡಲಾಗಿದೆ. ಕೆರೆಯ ನಿರ್ವಹಣೆಯನ್ನೂ ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ’ ಎಂದು ಟ್ರಸ್ಟ್ ಉಪಾಧ್ಯಕ್ಷ ಶಿವಲಿಂಗೇಗೌಡ ದೂರಿದರು.

ಶುದ್ಧೀಕರಣ ಘಟಕ ಅಗತ್ಯ

ಕೌದೇನಹಳ್ಳಿ ಕೆರೆಯಲ್ಲಿ ಶುದ್ಧೀಕರಣ ಘಟಕವಿಲ್ಲ (ಎಸ್‌ಟಿಪಿ). ಕೆರೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ವೇಳೆ, ನಡಿಗೆದಾರರು ಶುದ್ಧೀಕರಣ ಘಟಕ ನಿರ್ಮಿಸುವಂತೆ ಮನವಿ ಮಾಡಿದ್ದರು. ಆದರೆ, ಬಿಬಿಎಂಪಿ ಮತ್ತು ಜಲಮಂಡಳಿಯವರು, ‘ಕೆರೆಗೆ ಅಷ್ಟು ಪ್ರಮಾಣ ಬರುವುದಿಲ್ಲ. ಕೆರೆಗೆ ನೀರಿನ ಕೊರತೆಯಿದೆ. ಶುದ್ಧೀಕರಣ ಘಟಕ ಅವಶ್ಯಕತೆ ಇಲ್ಲ’ ಎಂದು ಹೇಳಿದ್ದರು. ಆದರೆ, ಈ ಕೆರೆಗೆ ಎಸ್‌ಟಿಪಿ ಅಗತ್ಯವಿದೆ’ ಎಂದು ನಡಿಗೆದಾರ ಸಂದೀಪ್ ಪ್ರತಿಪಾದಿಸಿದರು.


ನಗರದಲ್ಲಿ ಇಂದು

ಸಂಕ್ರಾಂತಿ ಸಂಭ್ರಮ

ನಗೆಮನೆ ಮಕರ ಸಂಕ್ರಾಂತಿಯ ಸುಗ್ಗಿ ಸಂಭ್ರಮಾಚರಣೆ: ಬೆಳಿಗ್ಗೆ 10ರಿಂದ ಅವರೆ ಮೇಳ ಮತ್ತು ಶಾಪಿಂಗ್ ಫೆಸ್ಟಿವೆಲ್, ಸಂಜೆ 4ಕ್ಕೆ ಗೋಪೂಜೆ, ಸಂಜೆ 6ಕ್ಕೆ ಮುಂಭಾಗ ಹಸುಗಳನ್ನು ಕಿಚ್ಚು ಹಾಯಿಸುವುದು, ಸಂಜೆ 7.30ಕ್ಕೆ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ, ರಾತ್ರಿ 8ಕ್ಕೆ ‘ಸಬ್ ಕಾ ಮಾಲೀಕ್ ಏಕ್ ಹೈ’ ನೃತ್ಯರೂಪಕ ನಾಟಕ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಉಲ್ಲಾಳು ವಾರ್ಡ್ ನಾಗರಿಕರ ವೇದಿಕೆ, ರಾಷ್ಟ್ರಕವಿ ಕುವೆಂಪು ರಸ್ತೆ, ನಾಗದೇವನಹಳ್ಳಿ ಜ್ಞಾನಭಾರತಿ ಎರಡನೇ ಹಂತ

ಸುಗ್ಗಿ ಹುಗ್ಗಿ ಸಂಕ್ರಾಂತಿ ಹಬ್ಬದ ಸಂಭ್ರಮಾಚರಣೆ: ಪೊಂಗಲ್ ಅಡುಗೆ ಮಾಡುವುದು, ಪೌರಕಾರ್ಮಿಕರಿಗೆ ವಿಶೇಷ ಆಟಗಳ ಆಯೋಜನೆ, ಉಪಸ್ಥಿತಿ: ಸೌಮ್ಯಾ ರೆಡ್ಡಿ, ಆಯೋಜನೆ: ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ, ಸ್ಥಳ: ಕಿತ್ತೂರ ರಾಣಿ ಚೆನ್ನಮ್ಮ ಕ್ರೀಡಾಂಗಣ, ನಾಲ್ಕನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

29ನೇ ವಾರ್ಷಿಕ ಸಂಕ್ರಾಂತಿ ಸಂಗೀತೋತ್ಸವ: ಸಾನ್ನಿಧ್ಯ: ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ‘ಶ್ರೀ ಶಾರದಾ ಶಂಕರ ಪುರಸ್ಕಾರ, ಆರ್. ಕೆ. ಶ್ರೀಕಂಠನ್ ನ್ಯಾಷನಲ್ ಎಮಿನೆನ್ಸ್ ಅವಾರ್ಡ್’, ‘ಶ್ರೀಕಂಠ ಶಂಕರ’ ಬಿರುದು ಪುರಸ್ಕೃತರು: ಟಿ.ವಿ. ಗೋಪಾಲಕೃಷ್ಣನ್, ‘ಶಂಕರಾದ್ವೈತ ತತ್ವಜ್ಞಾನ’ ಬಿರುದು ಪುರಸ್ಕೃತರು: ಜಿ. ಶಿವರಾಮ ಅಗ್ನಿಹೋತ್ರಿ, ಅತಿಥಿ: ಡಾ.ಸಿ.ಎನ್. ಮಂಜುನಾಥ್, ಗಾಯನ: ರುದ್ರಪಟ್ಟಣಂ ಎಸ್. ರಮಾಕಾಂತ್, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ಟಿ.ವಿ. ಗೋಪಾಲಕೃಷ್ಣನ್, ಘಟ: ಗಿರಿಧರ್ ಉಡುಪ, ಮೋರ್ಸಿಂಗ್: ಬಿ. ರಾಜಶೇಖರ್, ಆಯೋಜನೆ: ವಿದ್ವಾನ ಆರ್.ಕೆ. ಶ್ರೀಕಂಠನ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.15ರಿಂದ





ಜೀವನಪ್ರೇಮದ ಸಂಕ್ರಾಂತಿ



• ನಚಿಕೇತ್ ಹೆಗಡೆ

ಮನುಷ್ಯನಿಗೆ ತನ್ನ ಸುತ್ತಲ ಪ್ರಪಂಚದ ಕುರಿತೊಂದು ಬೆರಗಿದೆ. ಆ ಬೆರಗು ಅವನ ನಂಬಿಕೆ ಮತ್ತು ಆಚರಣೆಗಳಲ್ಲಿ ಇಬ್ಬಗೆಯಾಗಿ ತೋರಿಕೊಳ್ಳುತ್ತದೆ. ಒಂದು ಭಯ; ಇನ್ನೊಂದು ಭಕ್ತಿ. ಭಯ ಆ ಭೀತಿಯ ವಿಷಯವಸ್ತುವಿನ ಕುರಿತಾದ ದ್ವೇಷದ ರೂಪವನ್ನು ತಳೆದರೆ, ಭಕ್ತಿ ಉತ್ಸವಶರೀರಿ. ದೇಶ, ಕಾಲ ಮತ್ತು ಕುಲಗಳಿಗೆ ಒಳಪಟ್ಟು ಅದು ಮೈದಳೆಯುವ ರೂಪುಗಳೇ ಒಂದಿಡೀ ಭಾರತೀಯ ಸನಾತನ ಸಂಸ್ಕೃತಿಯನ್ನು ಜೀವಂತವಾಗಿರಿಸಿವೆ. ಜನಜೀವನಕ್ಕೆ ಲವಲವಿಕೆಯನ್ನೂ ಭರವಸೆಯನ್ನೂ ತಂದಿವೆ. ಅವುಗಳಲ್ಲೊಂದು ಸಂಕ್ರಾಂತಿ.

ಶುಭಕಾರ್ಯಗಳಿಗೆ ಪ್ರಶಸ್ತವಲ್ಲದ ಧನುರ್ಮಾಸ ಮುಗಿದಂತೆಯೇ ಸೂರ್ಯನು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಕ್ರಮಿಸುತ್ತಾನೆ. ಅದರ ಸ್ಮಾರಕವೇ ಸಂಕ್ರಾಂತಿ. ಅದು ವರ್ಷಪರ್ಯಂತ ನಡೆಯಲಿಕ್ಕಿರುವ ಎಲ್ಲ ಹಬ್ಬ-ಹರಿದಿನಗಳಿಗೆ ದ್ವಾರವಿದ್ದಂತೆ. ಇಂಥ ದಿವ್ಯ ಕ್ಷಣದಲ್ಲಿ ತ್ರಿವೇಣೀಸಂಗಮದಲ್ಲೊಮ್ಮೆ ಮಿಂದರೆ ತಮ್ಮ ಜನ್ಮಾಂತರದ ಪಾಪಗಳೆಲ್ಲ ಕಳೆದುಹೋಗುತ್ತವೆನ್ನುವ ನಂಬಿಕೆಯಿದೆ. ಹಾಗೆಂದೇ ಪ್ರಯಾಗವು ಮಾಘಮೇಳವನ್ನು ಆಚರಿಸುತ್ತದೆ. ದೇಶದ ಮೂಲೆಮೂಲೆಗಳಿಂದ ಭಕ್ತಗಣ ಬಂದು ಕಿಕ್ಕಿರಿಯುತ್ತದೆ. ಅವರೆಲ್ಲರ ಭಕ್ತಿ-ಉತ್ಸಾಹಗಳೇ ಶಬ್ದದ ರೂಪ ತಾಳಿದಂತಿರುವ 'ಹರಹರ ಮಹಾದೇವ' ಎಂಬ ಉದ್ಗಾರ, ಹಾಡು-ಕುಣಿತ – ಇವೆಲ್ಲ ಒಂದಿಡೀ ವರ್ಷವನ್ನು ಹೊಸ ಹುರುಪು ಮತ್ತು ಭರವಸೆಗಳಿಂದ ಬದುಕಲು ಬೇಕಾದ ಸರಕನ್ನು ಒದಗಿಸುತ್ತವೆ. ಆ ಅರ್ಥದಲ್ಲಿ ಉತ್ತರಾಯಣ ಪುಣ್ಯಕಾಲವು ಸ್ವರ್ಗಕ್ಕೆ ದ್ವಾರವೇ ಸರಿ.

ಭಾರತವು ವೃತ್ತಿಯಲ್ಲಿ ಕೃಷಿಪ್ರಧಾನ; ಪ್ರವೃತ್ತಿಯಲ್ಲಿ ಭಕ್ತಿಪ್ರಧಾನ. ಅವೆರಡನ್ನೂ ಬೆಸೆಯುವ - ವೃತ್ತಿಯನ್ನು ಭಗವದರ್ಪಣ ಮನೋಭಾವದಿಂದ, ಕೃತಜ್ಞತಾಪೂರ್ವಕವಾಗಿ ಮಾಡುವ ಸಂಸ್ಕಾರವೇ ಹಬ್ಬ. ವರ್ಷಪೂರ್ತಿ ಕೃಷಿಗೆ ಅನುಕೂಲಕರನಾಗಿ ಸಮೃದ್ಧಿಯನ್ನು ನೀಡುವವನು ಸೂರ್ಯದೇವನಷ್ಟೇ? ಹಾಗೆಂದೇ ಆಗಷ್ಟೇ ಹೊಸದಾಗಿ ಕಟಾವು ಮಾಡಿದ ಪೈರನ್ನು ಸಂಸ್ಕರಿಸಿ ಸಂಪಾದಿಸಿದ ಅಕ್ಕಿಯಿಂದ ತಯಾರಿಸಿದ ಪೊಂಗಲ್ ಅನ್ನು ಅವನಿಗೆ ಸಮರ್ಪಿಸಲಾಗುತ್ತದೆ. ವಿಶಾಲವಾದ ಅಂಗಣಗಳೇ ಭಾರತೀಯ ಮನೆಗಳ ಆಕರ್ಷಣೆಯ ಕೇಂದ್ರ. ಅಲ್ಲಿ ಕಿರಣಗಳು ಸೊಂಪಾಗಿ ಬೀಳುವ ಪ್ರದೇಶದಲ್ಲಿ ಸೂರ್ಯನನ್ನು ಆತನ ಇಬ್ಬರು ಪತ್ನಿಯರಾದ ಸಂಜ್ಞಾ ಮತ್ತು ಛಾಯಾರ ಸಂಗಡ ಅಕ್ಕಿತರಿಯಿಂದ ಚಿತ್ರಿಸಿ ಅರ್ಚಿಸಲಾಗುತ್ತದೆ. ಮೋಡಗಳನ್ನು ಹೊತ್ತು ತಂದು ಮಳೆ ಮತ್ತು ಬೆಳೆಗೆ ಕಾರಣನಾಗುವ ವಾಯುವೂ, ಮಳೆಗೆ ಅಧಿಪತಿಯಾದ ಇಂದ್ರನೂ, ಗೃಹದೇವತೆಗಳೂ ಮತ್ತು ವಾಸ್ತುದೇವತೆಯೂ ಪೂಜೆಗೊಳಪಡುತ್ತಾರೆ.

ಭಾರತದಲ್ಲಿ ದೇಶಾಚಾರ ಮತ್ತು ಕಾಲಾಚಾರ ಎನ್ನುವುದಾಗಿ ಸಂಪ್ರದಾಯಗಳ ವಿಂಗಡಣೆ ಇದೆಯಷ್ಟೆ. ಅದು ಮನುಷ್ಯನಲ್ಲಿ ಅನುಗಾಲವೂ ತಿಳಿದೋ ತಿಳಿಯದೆಯೋ ಪುಟಿದೇಳುವ 'ಪ್ರತ್ಯೇಕತೆಯ ತುಡಿತ'ಕ್ಕೆ ಒಂದು ಸಾಂಸ್ಕೃತಿಕ ಚೌಕಟ್ಟಿನ ಒಳಗೆಯೇ ಅವಕಾಶಗಳನ್ನು ನೀಡುವ ತಂತ್ರ. ಆ ಮೂಲಕ ಆ ವೈವಿಧ್ಯಗಳನ್ನೆಲ್ಲ ಪೋಣಿಸಿ ಮಾಲೆಗಟ್ಟುವ ಕಲೆ. ಅದಕ್ಕೆ ಸಂಕ್ರಾಂತಿಯೂ ಹೊರತಾಗಿಲ್ಲ. ಭಾರತದ ಬೇರೆಬೇರೆ ರಾಜ್ಯಗಳಲ್ಲಿ ಸುಗ್ಗಿ, ಕಿಚಡಿ, ಪೊಂಗಲ್ ಇತ್ಯಾದಿ ರೂಪಗಳನ್ನು ತಳೆಯುವ ಸಂಕ್ರಾತಿಯು ವಿದೇಶಗಳಲ್ಲಿ ಸೊಂಗ್ಕ್ರಾನ್, ಮೋಹನ-ಸೊಂಗ್ಕ್ರಾನ್, ಶಕ್ರೈನ್, ಮಾಘೆ ಸಂಕ್ರಾಂತಿಯಾಗಿಯೂ ಅಲ್ಲಿನ ಶ್ರದ್ಧಾಪರಂಪರೆಯನ್ನು ಸಾತತ್ಯಕ್ಕೆ ಮಾಧ್ಯಮವಾಗಿ ಕೆಲಸ ಮಾಡುತ್ತಿದೆ. ವಿಶೇಷವೆಂದರೆ ಶೌರ್ಯ-ಬಲಿದಾನಗಳಿಗೆ ಹೆಸರಾದ ಪಂಜಾಬೀ ಸಿಖ್ಖರಲ್ಲಿ ಸಂಕ್ರಾಂತಿಯ ದಿನ ಮಾಘಿಮೇಳವಾಗಿ 'ಮುಕ್ತಸರ- ಕದನ'ದಲ್ಲಿ ಹುತಾತ್ಮರಾದ ನಲವತ್ತು ಮಂದಿ ಯೋಧರನ್ನು ನೆನೆಯುವ ದಿನವಾಗಿ ಮಾರ್ಪಟ್ಟಿದೆ!

ಯಾವುದೇ ಜೀವಂತ ನಾಗರಿಕತೆಯ ಜೀವಸೆಲೆ ಅದರ ಪದ್ಧತಿಗಳಲ್ಲಿನ ಜೀವಪ್ರೇಮ ಮತ್ತು ಜೀವನಪ್ರೇಮ. ಅಷ್ಟಿದ್ದರೆ ಅದು ನಿರುಪದ್ರವಿ ಆದ ನಲಿವಿನ ಆಚಾರವಾಗಿ ಹೊಮ್ಮಿಕೊಳ್ಳುತ್ತದೆ. ಇಂತಿರುವಾಗ ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ, ಕುಳಿತು ಪಾಡಲು ನಿಲುವ, ನಿಂತರೆ ನಲಿವ ದೇವನನ್ನು ಆರಾಧಿಸುವ ಭಾರತೀಯನಿಗೆ ಅದನ್ನು ನೆನಪಿಸುವ ಸಂಕ್ರಾಂತಿಯು ಸಂ'ಕ್ರಾಂತಿ'ಯೇ ಸರಿ. ಅಂಥ ದೇವನೂ ಇಂಥ ಹಬ್ಬವೂ ಇರದಿದ್ದರೆ ನಮ್ಮ ಜನಜೀವನವು ನೀರಸವಾಗಿಬಿಡುತ್ತಿತ್ತು.

ಎಳ್ಳು-ಬೆಲ್ಲ ತಿಂದು ಒಳ್ಳೊಳ್ಳೆ ಮಾತನಾಡೋಣ ❖



ಒಂದೇ ಹುದ್ದೆಗೆ ಇಬ್ಬರು ಅಧಿಕಾರಿಗಳ ಮಧ್ಯೆ ಕಿತ್ತಾಟ

'ಅಪೆಕ್ಸ್' ಸಿಇಒ ಕಚೇರಿಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಹುದ್ದೆಗೆ ಇಬ್ಬರು ಅಧಿಕಾರಿಗಳ ಮಧ್ಯೆ ಕಿತ್ತಾಟ ಆರಂಭವಾಗಿದೆ. ಕೆಎಎಸ್ ಅಧಿಕಾರಿ ಎಂ.ಕೆ. ಜಗದೀಶ್ ಅವರನ್ನು ನೇಮಿಸಿದ ಬೆನ್ನಲ್ಲೇ ಈ ಹುದ್ದೆಯಲ್ಲಿದ್ದ ಸಿ.ಎನ್. ದೇವರಾಜು ಕಚೇರಿ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿದ್ದಾರೆ.

ಸಹಕಾರ ಇಲಾಖೆಗಳ ಅಧಿಕಾರಿ ಆಗಿದ್ದ ದೇವರಾಜು ಅವರು, ಈಗಿನ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಲ್ಲಿನ ಸಿಇಒ ಆಗಿದ್ದರು. ಕೆಲಸದಿಂದ ವಯೋನಿವೃತ್ತಿ ಹೊಂದಿದ್ದ ಅವರನ್ನು 2023ರ ಮೇ ತಿಂಗಳಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಸಿಇಒ ಹುದ್ದೆಗೆ ಪುನಃ ನೇಮಿಸಲಾಗಿತ್ತು.

ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯಿಂದ ವರ್ಗಾವಣೆಯಾದ ಬಳಿಕ ಸ್ಥಳ ನಿರೀಕ್ಷಣೆಯಲ್ಲಿದ್ದ 'ಸೂಪರ್ ಟೈಂ' ವೇತನ ಶ್ರೇಣಿಯ ಕೆಎಎಸ್ ಅಧಿಕಾರಿ ಎಂ.ಕೆ. ಜಗದೀಶ್ ಅವರನ್ನು ಅಪೆಕ್ಸ್ ಬ್ಯಾಂಕ್ ಸಿಇಒ ಹುದ್ದೆಗೆ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಮಧ್ಯಾಹ್ನ ಆದೇಶ ಹೊರಡಿಸಿದೆ.

ವರ್ಗಾವಣೆ ಆದೇಶದಂತೆ ಅಧಿಕಾರ ವಹಿಸಿಕೊಳ್ಳಲು ಜಗದೀಶ್ ಅವರು ಅಪೆಕ್ಸ್ ಬ್ಯಾಂಕ್ ಸಿಇಒ ಕಚೇರಿಗೆ ಸೋಮವಾರ ಮಧ್ಯಾಹ್ನ 3 ಗಂಟೆಗೆ ಹೋದರು. ಅಷ್ಟರಲ್ಲಿ ದೇವರಾಜು ಅವರು ಕಚೇರಿಯ ಬಾಗಿಲಿಗೆ ಬೀಗ ಹಾಕಿಕೊಂಡು ತೆರಳಿದ್ದರು. ಅವರನ್ನು ಸಂಪರ್ಕಿಸಿ, ಕಚೇರಿ ಬಾಗಿಲಿನ ಬೀಗ ತೆಗೆಯುವಂತೆ ಮನವಿ ಮಾಡುವ ಪ್ರಯತ್ನವೂ ಫಲಿಸಲಿಲ್ಲ.

ಸ್ವಯಂ ಅಧಿಕಾರ ಸ್ವೀಕಾರ: ಗಂಟೆಗಳ ಕಾಲ ಕಾದರೂ ದೇವರಾಜು ಮರಳಿ ಕಚೇರಿಯತ್ತ ಬರಲಿಲ್ಲ. ನಂತರ ಜಗದೀಶ್ ಅವರು ಬೇರೊಂದು ಕೊಠಡಿಯಲ್ಲಿ ಕುಳಿತು ಅಪೆಕ್ಸ್ ಬ್ಯಾಂಕ್ ಸಿಇಒ ಹುದ್ದೆಯ ಅಧಿಕಾರವನ್ನು ತಾವೇ ವಹಿಸಿಕೊಂಡು, ಸಹಕಾರ ಇಲಾಖೆಯ ಕೇಂದ್ರ ಕಚೇರಿಗೆ ವರದಿ ಸಲ್ಲಿಸಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಗದೀಶ್, 'ರಾಜ್ಯ ಸರ್ಕಾರದ ಆದೇಶದಂತೆ ನಾನು ಅಪೆಕ್ಸ್ ಬ್ಯಾಂಕ್ ಸಿಇಒ ಹುದ್ದೆಯ ಅಧಿಕಾರ ವಹಿಸಿಕೊಳ್ಳಲು ಬಂದಿದ್ದೆ. ಹಾಲಿ ಸಿಇಒ ಅವರು ಕಚೇರಿ ಬಾಗಿಲಿಗೆ ಬೀಗ ಹಾಕಿ ಹೋಗಿದ್ದರು. ಅನಿವಾರ್ಯವಾಗಿ ನಾನು ಸ್ವಯಂಪ್ರೇರಿತವಾಗಿ ಅಧಿಕಾರ ವಹಿಸಿಕೊಂಡಿದ್ದೇನೆ' ಎಂದರು.

ಸಚಿವರ ಸೂಚನೆಯಂತೆ ಅಧಿಕಾರ ಹಸ್ತಾಂತರಿಸಿಲ್ಲ: ದೇವರಾಜು

'ಅಧಿಕಾರ ಹಸ್ತಾಂತರಿಸುವುದು ಬೇಡ ಎಂದು ಸಹಕಾರ ಸಚಿವರು ಸೂಚಿಸಿದ್ದರು. ಸಚಿವರ ಸೂಚನೆಯನ್ನು ನಾನು ಪಾಲಿಸಿದ್ದೇನೆ' ಎಂದು ಅಪೆಕ್ಸ್ ಬ್ಯಾಂಕ್ ಸಿಇಒ ಹುದ್ದೆಯಲ್ಲಿದ್ದ ಸಿ.ಎನ್. ದೇವರಾಜು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಅಪೆಕ್ಸ್ ಬ್ಯಾಂಕ್ ಸಿಇಒ ಹುದ್ದೆಗೆ ಕೆಎಎಸ್ ಅಧಿಕಾರಿಯನ್ನು ನೇಮಿಸಲು ಅವಕಾಶವಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್‌ನ ಅನುಮತಿ ಪಡೆದೇ ಅಪೆಕ್ಸ್ ಬ್ಯಾಂಕ್ ಸಿಇಒ ನೇಮಿಸಬೇಕಾಗುತ್ತದೆ. ನನ್ನನ್ನು ನೇಮಿಸುವಾಗ ಪೂರ್ವಾನುಮತಿ ಪಡೆಯಲಾಗಿತ್ತು. ಜಗದೀಶ್ ನೇಮಕದಲ್ಲಿ ಅಂತಹ ಕ್ರಮ ಅನುಸರಿಸಿಲ್ಲ' ಎಂದು ದೂರಿದರು.

ಹಸುಗಳ ಕೆಚ್ಚಲು ಕೊಯ್ದ ಆರೋಪಿ ಸೆರೆ

ಒಂದನೇ ಪುಟದಿಂದ...

ಭಾನುವಾರ ರಾತ್ರಿಯೇ ಆರೋಪಿಯನ್ನು ನ್ಯಾಯಾಧೀಶರ ಎದುರು ಹಾಜರು ಪಡಿಸಲಾಗಿದೆ. ಜನವರಿ 24ರ ವರೆಗೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಮೀಪದಲ್ಲೇ ಕೆಲಸ: 'ಕೃತ್ಯ ಎಸಗಿದ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿರುವ ಪ್ಲಾಸ್ಟಿಕ್ ಹಾಗೂ ಬ್ಯಾಗ್ ಹೊಲಿಗೆ ಅಂಗಡಿಯಲ್ಲಿ ಸಹಾಯಕನಾಗಿ ಆರೋಪಿ ಕೆಲಸ ಮಾಡುತ್ತಿದ್ದ. ಮದ್ಯದ ನಶೆಯಲ್ಲಿ ಹಸುಗಳ ಕೆಚ್ಚಲು ಕೊಯ್ದಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

> **ಆರೋಪಿ ಒಬ್ಬನೇ ಕೃತ್ಯ ಎಸಗಿದ್ದಾನೆ ಎಂಬುದು ಸದ್ಯದ ತನಿಖೆಯಿಂದ ಗೊತ್ತಾಗಿದೆ. ತನಿಖೆ ಮುಂದುವರೆದಿದೆ**
>
> **ಗಿರೀಶ್,** ಡಿಸಿಪಿ, ಪಶ್ಚಿಮ ವಿಭಾಗ

ಆರೋಪಿ ಕೃತ್ಯ ಎಸಗಿರುವುದು ಭಾನುವಾರ ಬೆಳಿಗ್ಗೆ ಗೊತ್ತಾಗಿದೆ. ಕೃತ್ಯ ಎಸಗಿದ ಕಿಡಿಗೇಡಿಯನ್ನು ಬಂಧಿಸಬೇಕು ಎಂದು ಆಗ್ರಹಿಸಿ, ಸ್ಥಳೀಯರು ಹಾಗೂ ಬಿಜೆಪಿ ಮುಖಂಡರು ಸ್ಥಳದಲ್ಲಿ ಪ್ರತಿಭಟನೆ ನಡೆಸಿದ್ದರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣ ಆಗಿತ್ತು. ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

ದೃಶ್ಯಾವಳಿ ಆಧರಿಸಿ ಆರೋಪಿ ಸೆರೆ?: 'ಕೆಲವು ವರ್ಷಗಳ ಹಿಂದೆ ಆರೋಪಿ ಶೇಖ್ ನಸ್ರು ನಗರಕ್ಕೆ ಬಂದಿದ್ದ. ಕೆಲವು ತಿಂಗಳ ಹಿಂದಷ್ಟೇ ಪ್ಲಾಸ್ಟಿಕ್ ಹಾಗೂ ಬ್ಯಾಗ್ ಹೊಲಿಗೆ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಅದೇ ಮಾರ್ಗದಲ್ಲಿ ಪ್ರತಿನಿತ್ಯ ಅಂಗಡಿಗೆ ತೆರಳುತ್ತಿದ್ದ. ಶೆಡ್‌ನಲ್ಲಿ ಹಸುಗಳು ಇರುವುದನ್ನು ಗಮನಿಸಿದ್ದ. ಹೀಗಾಗಿ ಹಸುಗಳ ಮೇಲೆ ಕ್ರೌರ್ಯ ಎಸಗಿದ್ದಾನೆ. ಆರೋಪಿ ನಡೆದು ತೆರಳುತ್ತಿದ್ದ ಮಾರ್ಗದಲ್ಲಿ ಕೆಲವು ಸಿ.ಸಿ.ಟಿ.ವಿ. ಕ್ಯಾಮೆರಾಗಳಿದ್ದು, ಅದರಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಗಿದೆ. ಕೃತ್ಯ ಎಸಗಿದ ಮೇಲೆ ಆರೋಪಿ ಸಮೀಪದಲ್ಲೇ ಇದ್ದ. ಅಲ್ಲಿ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಯಿತು' ಎಂದು ಮೂಲಗಳು ತಿಳಿಸಿವೆ.

ಹಸುಗಳಿಗೆ ಚಿಕಿತ್ಸೆ: ಹರಿತವಾದ ಆಯುಧದಿಂದ ಕೆಚ್ಚಲಿಗೆ ಹೊಡೆದಿರುವ ಪರಿಣಾಮ, ಕೆಚ್ಚಲಿನಲ್ಲಿ ರಕ್ತ ತೀವ್ರವಾಗಿ ಸೋರುತ್ತಿತ್ತು. ಪಶು ಆಸ್ಪತ್ರೆಯಲ್ಲಿ ಹಸುಗಳಿಗೆ ಚಿಕಿತ್ಸೆ ಕೊಡಿಸಲಾಗಿದೆ. ಸದ್ಯ ಮೂರು ಹಸುಗಳೂ ಅಪಾಯದಿಂದ ಪಾರಾಗಿವೆ ಎಂದು ಮೂಲಗಳು ಹೇಳಿವೆ.

1.5 ಕೋಟಿ ಮಂದಿಯಿಂದ ಪವಿತ್ರ ಸ್ನಾನ

ಒಂದನೇ ಪುಟದಿಂದ...

ಚಳಿಯ ವಾತಾವರಣವನ್ನು ಲೆಕ್ಕಿಸದೆ ಭಕ್ತರು ಮುಂಜಾನೆಯಿಂದಲೇ ಸಂಗಮಕ್ಕೆ ಬರಲಾರಂಭಿಸಿದರಲ್ಲದೆ, ಕೆಲವೇ ಗಂಟೆಗಳಲ್ಲಿ ಇಡೀ ಪ್ರದೇಶ ಸಾಧು–ಸಂತರಿಂದ ತುಂಬಿತು.

ಬೆಳಿಗ್ಗೆ 11ರ ವೇಳೆಗೆ 80 ಲಕ್ಷಕ್ಕೂ ಅಧಿಕ ಮಂದಿ ಪವಿತ್ರ ಸ್ನಾನ ಮಾಡಿದರು ಎಂದು ಉತ್ತರ ಪ್ರದೇಶ ಸರ್ಕಾರದ ಪ್ರಕಟಣೆ ತಿಳಿಸಿದೆ. ಗಂಗಾನದಿ ದಡದಲ್ಲಿ ಪೂಜೆ ಸಲ್ಲಿಸಿದ ಭಕ್ತರು ನಂತರ ವಿವಿಧ ಕಡೆಗಳಲ್ಲಿ ಆಯೋಜಿಸಿರುವ ಧಾರ್ಮಿಕ ಪ್ರವಚನ ಮತ್ತು ಇತರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ಮಹಾಕುಂಭ ಮೇಳಕ್ಕೆ ಔಪಚಾರಿಕವಾಗಿ ಚಾಲನೆ ದೊರೆತಾಗ, ಭಕ್ತರು 'ಜೈ ಗಂಗಾ', 'ಜೈ ಶ್ರೀರಾಮ್', 'ಹರ ಹರ ಮಹಾದೇವ' ಎನ್ನುತ್ತಾ ತಂಡೋಪತಂಡವಾಗಿ ಸ್ನಾನ ಘಟ್ಟಗಳತ್ತ ಹೆಜ್ಜೆಯಿಟ್ಟರು. ಈ ವೇಳೆ ಇಡೀ ಸಂಗಮ ಪ್ರದೇಶದಲ್ಲಿ ಉತ್ಸಾಹದ ಅಲೆ ಎದ್ದಿತು. ಶಂಖ ಮತ್ತು ಭಜನೆಯ ಧ್ವನಿ ದಿನವಿಡೀ ಮೊಳಗಿತು.

ಸಂಗಮ ಪ್ರದೇಶದ ಹನುಮಾನ್ ದೇಗುಲದ ಬಳಿ ಸ್ಥಾಪಿಸಿರುವ 'ಸೆಲ್ಫಿ ಪಾಯಿಂಟ್' ಅಪಾರ ಸಂಖ್ಯೆಯ ಭಕ್ತರನ್ನು ತನ್ನತ್ತ ಸೆಳೆಯಿತು. ಅನೇಕ ಭಕ್ತರು ಸೆಲ್ಫಿ ತೆಗೆದುಕೊಂಡರು.

ಮಹಾಕುಂಭ ಮೇಳಕ್ಕೆ ಬಂದ ಅಸ್ಸಾಂ ಮತ್ತು ಛತ್ತೀಸಗಢದ ತಲಾ ಒಬ್ಬರು ಭಾನುವಾರ ತೀವ್ರ ಚಳಿಯಿಂದಾಗಿ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕಳೆದ ಎರಡು ದಿನಗಳಲ್ಲಿ ಅಸ್ವಸ್ಥತೆ ಮತ್ತು ಎದೆ ನೋವಿನಿಂದ ಒಂಬತ್ತು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಗಂಗಾ ನದಿಯ ದಂಡೆಯಲ್ಲಿರುವ ಬಿಡಾರಗಳನ್ನೊಳಗೊಂಡ ತಾತ್ಕಾಲಿಕ ನಗರವು ನಾಗಸಾಧುಗಳು, ಸಂತರು, ಮಠಾಧೀಶರು, ಬೈರಾಗಿಗಳು ಮತ್ತು ಭಕ್ತರಿಂದ ಬಹುತೇಕ ಭರ್ತಿಯಾಗಿದೆ.

'ಕಲ್ಪವಾಸ' ಆರಂಭ

- ಪವಿತ್ರ ಸ್ನಾನ ಮಾಡಿ 'ಕಲ್ಪವಾಸ' (ಒಂದು ತಿಂಗಳು ಕುಂಭದಲ್ಲಿ ಭಾಗವಹಿಸಿ, ಅತ್ಯಂತ ಶಿಸ್ತಿನ ಧಾರ್ಮಿಕ ಆಚರಣೆ ಅನುಸರಿಸುವವರು) ಆರಂಭಿಸಿದ ಭಕ್ತರು.
- ಮೊದಲ ದಿನ ಜನದಟ್ಟಣೆಯಿಂದಾಗಿ 'ಕಾಣೆ'ಯಾದ 250 ಮಂದಿಯನ್ನು ಕುಟುಂಬ ಸದಸ್ಯರೊಂದಿಗೆ ಮತ್ತೆ ಸೇರಿಸಲಾಯಿತು.
- ಪ್ರಧಾನಿ ಮೋದಿ ಅವರು ಮಹಾಕುಂಭ ಮೇಳವನ್ನು 'ಏಕತೆಯ ಕುಂಭ ಮೇಳ' ಎಂದು ಶ್ಲಾಘಿಸಿದರು. ಇದರ ಬೆನ್ನಲ್ಲೇ ಸಾಮಾಜಿಕ ಮಾಧ್ಯಮಗಳಲ್ಲಿ 'ಏಕತಾ ಕಾ ಮಹಾ ಕುಂಭ' ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ಮಹಾಕುಂಭ ಟ್ರೆಂಡಿಂಗ್‌ನಲ್ಲಿದೆ.

'ಯುಜಿಸಿ ಕರಡು ನಿಯಮಗಳ ಬಗ್ಗೆ ಅಪಪ್ರಚಾರ'

ನವದೆಹಲಿ (ಪಿಟಿಐ): ನೇಮಕಾತಿಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಹೊಸ ಕರಡು ನಿಯಮಗಳ ಬಗ್ಗೆ ಕಾಂಗ್ರೆಸ್ ಸುಳ್ಳು ಪ್ರಚಾರ ಮಾಡುತ್ತಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.



ಧರ್ಮೇಂದ್ರ ಪ್ರಧಾನ್

ವಿ.ವಿಗಳ ಕುಲಪತಿಗಳನ್ನು ರಾಜ್ಯಪಾಲರು ನೇಮಿಸುವ ಪರಿಪಾಠವು ಸ್ವಾತಂತ್ರ್ಯಪೂರ್ವದಿಂದಲೂ ನಡೆದುಕೊಂಡು ಬಂದಿದೆ ಎಂದು ಅವರು ಹೇಳಿದ್ದಾರೆ. ಕಳೆದ ವಾರ ಯುಜಿಸಿ ಪ್ರಕಟಿಸಿರುವ ಕರಡು ನಿಯಮಗಳಲ್ಲಿ ಸಹಾಯಕ ಪ್ರಾಧ್ಯಾಪಕರು ಮತ್ತು ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದಲ್ಲಿ ಮಹತ್ವದ ಬದಲಾವಣೆಯ ಪ್ರಸ್ತಾಪ ಮಾಡಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಯುಜಿಸಿ ಕರಡು ನಿಯಮದ (2025) ಪ್ರಕಾರ, ಕುಲಪತಿಗಳ ನೇಮಕದಲ್ಲಿ ರಾಜ್ಯಪಾಲರಿಗೆ ಅಪರಿಮಿತ ಅಧಿಕಾರ ನೀಡಲಾಗಿದೆ. ಅಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡದವರೂ ಈ ಹುದ್ದೆಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದು ರಾಜ್ಯಗಳ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ' ಎಂದು ಆರೋಪಿಸಿದ್ದರು.

ಯುಜಿಸಿ ಪ್ರಕಟಿಸಿರುವ ಕರಡು ನಿಯಮಗಳು (2025) ವಾಸ್ತವವಾಗಿ 2010ರ ಯುಜಿಸಿ ನಿಯಮಗಳ ಸ್ವರೂಪದಲ್ಲಿಯೇ ಇವೆ ಎಂದು ಪ್ರಧಾನ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕ್ಷೇಮ ಕುಶಲ



ರಕ್ತವನ್ನು ಹೆಚ್ಚಿಸಿಕೊಳ್ಳಿ

ಡಾ. ವೀಣಾ ಎನ್. ಸುಳ್ಯ

ರಕ್ತ ಎಂದರೆ ದೇಹದಲ್ಲಿರುವ ಕೆಂಪುಬಣ್ಣದ ದ್ರವ. ದೇಹಕ್ಕೆ ಗಾಯವಾದಾಗ ಹರಿದು ಬರುವ ರಕ್ತ, ದೇಹದ ರಕ್ತನಾಳಗಳಲ್ಲಿ ನಿರಂತರವಾಗಿ ಪ್ರವಹಿಸುತ್ತಲೇ ಇರುತ್ತದೆ. ರಕ್ತದ ಕೆಂಪುಬಣ್ಣಕ್ಕೆ ಕಾರಣ ಅದರಲ್ಲಿರುವ ಕೆಂಪು ರಕ್ತಕಣಗಳು ಹೊಂದಿರುವ 'ಹಿಮೋಗ್ಲೋಬಿನ್' ಎನ್ನುವ ಅಂಶ. ರಕ್ತದಲ್ಲಿ ಮುಖ್ಯವಾಗಿ ಕೆಂಪು ರಕ್ತಕಣಗಳು, ಬಿಳಿ ರಕ್ತಕಣಗಳು, ಪ್ಲೇಟ್‌ಲೆಟ್ಸ್, ನೀರಿನ ಅಂಶ – ಇವು ಅಡಕವಾಗಿವೆ. ದೇಹಕ್ಕೆ ಅಗತ್ಯವಾದ ಪೋಷಕಾಂಶಗಳನ್ನು, ಪ್ರಾಣವಾಯುವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಲುಪುವಂತೆ ಕಾರ್ಯವನ್ನು ನಿರ್ವಹಿಸುವುದೇ ರಕ್ತದ ಮುಖ್ಯ ಕೆಲಸ.

ಮನುಷ್ಯರ ದೇಹದಲ್ಲಿ 5–6 ಲೀಟರ್‌ನಷ್ಟು ರಕ್ತ ಇರುತ್ತದೆ. ರಕ್ತವು ದೇಹದಲ್ಲಿರುವ ಹೃದಯ ಮತ್ತು ರಕ್ತನಾಳಗಳಲ್ಲಿ ದ್ರವರೂಪದಲ್ಲಿರುತ್ತದೆ; ಆದರೆ ಅದು ಹೊರಗೆ ಬಂದ 3–4 ನಿಮಿಷಗಳಲ್ಲಿ ಹೆಪ್ಪುಗಟ್ಟುತ್ತದೆ. ಇದು ದೇಹದ ರಕ್ಷಣಾತ್ಮಕ ತಂತ್ರವೂ ಹೌದು. ರಕ್ತದಲ್ಲಿರುವ ಒಂದೊಂದು ಬಗೆಯ ಜೀವಕಣಗಳ ಜೀವಿತಾವಧಿ ಒಂದೊಂದು ಬಗೆಯಾಗಿರುತ್ತದೆ. ಉದಾಹರಣೆಗೆ: ಕೆಂಪು ರಕ್ತಕಣಗಳು 120 ದಿವಸಗಳು, ಬಿಳಿ ರಕ್ತಕಣಗಳು 2–3 ವಾರಗಳು, ಪ್ಲೇಟ್‌ಲೇಟ್‌ಗಳು 7–10 ದಿನಗಳು.

ವೈದ್ಯರು ನಿಮಗೆ ರಕ್ತ ಕಡಿಮೆಯಾಗಿದೆ ಎಂದಾಗ ಸಾಮಾನ್ಯವಾಗಿ ಹಿಮೋಗ್ಲೋಬಿನ್, ಎಂದರೆ ಕೆಂಪು ರಕ್ತಕಣಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಅರ್ಥ. ಹಿಮೋಗ್ಲೋಬಿನ್ ಎಂದರೆ 'ಹೀಮ್' ಮತ್ತು 'ಪ್ರೋಟೀನ್'. ಎಂದರೆ ಕಬ್ಬಿಣದ ಅಂಶ ಮತ್ತು ಪ್ರೋಟೀನ್ ಸೇರಿ ಹೀಮೊಗ್ಲೋಬಿನ್ ಆಗಿದೆ. ಆಮ್ಲಜನಕವನ್ನು ಶ್ವಾಸಕೋಶದಿಂದ ಇತರ ಜೀವಕೋಶಗಳಿಗೆ, ಇಂಗಾಲದ ಡೈಯಾಕ್ಸೈಡನ್ನು ಇತರ ಜೀವಕೋಶಗಳಿಂದ ಶ್ವಾಸಕೋಶಕ್ಕೆ ಸರಬರಾಜು ಮಾಡುವ ಜವಾಬ್ದಾರಿ ಹಿಮೋಗ್ಲೋಬಿನದ್ದು ಆಗಿದೆ. ಹಾಗಾಗಿ ಯಾವುದೇ ಕಾರಣಕ್ಕೆ ಹಿಮೋಗ್ಲೋಬಿನ್ ಕಡಿಮೆಯಾದಾಗ ದೇಹದ ಎಲ್ಲ ಚಟುವಟಿಕೆಗಳು ಆಮ್ಲಜನಕದ ಮೇಲೆ ಅವಲಂಬಿಸಿರುವ ಕಾರಣ, ನಮ್ಮ ಶರೀರದ ಕೆಲಸಕಾರ್ಯಗಳು ನಿಧಾನವಾಗಿ, ಮುಂದೆ ಕೆಲಸವನ್ನು ನಿರ್ವಹಿಸುವುದೇ ಸಾಧ್ಯವಿಲ್ಲದ ಪರಿಸ್ಥಿತಿಗೆ ತಲುಪುತ್ತದೆ. ರಕ್ತವನ್ನು ಶರೀರದಲ್ಲಿ ಹೆಚ್ಚು ಮಾಡಿಕೊಳ್ಳುವುದು ಎಂದರೆ ಹಿಮೋಗ್ಲೋಬಿನನ್ನು ಹೆಚ್ಚಿಸಿಕೊಳ್ಳುವುದು ಎಂದು ಅರ್ಥ.

ಹಿಮೋಗ್ಲೋಬಿನ್‌ನ ಉತ್ಪತ್ತಿಗೆ ಬೇಕಾದ ಅಂಶಗಳಾದ ಪ್ರೋಟೀನ್, ಕಬ್ಬಿಣದ ಅಂಶ, ವಿಟಮಿನ್ ಬಿ 12, ಫೋಲಿಕ್ ಆಸಿಡ್ – ಇವುಗಳನ್ನು ಪೂರೈಸಬೇಕಾಗುತ್ತದೆ. ಕೆಂಪುರಕ್ತಕಣಗಳ ಉತ್ಪತ್ತಿಯನ್ನು ಪ್ರಚೋದಿಸುತ್ತದೆ ಎರಿತ್ರೋಪೋಯಿಟಿನ್ ಎನ್ನುವ ರಸದೂತ; ಇದು ಉತ್ಪತ್ತಿಯಾಗುವುದು ಮೂತ್ರಪಿಂಡಗಳಲ್ಲಿ; ರಕ್ತಕಣಗಳ ಉತ್ಪತ್ತಿಯಾಗುವುದು ಮೂಳೆಗಳ ಅಸ್ಥಿಮಜ್ಜೆಯಲ್ಲಿ.

ಕಡಿಮೆಗೆ ಕಾರಣಗಳು

- ಪೌಷ್ಟಿಕಾಂಶಗಳ ಕೊರತೆ.
- **ರಕ್ತ ನಷ್ಟವಾಗುವುದು:** ಮುಟ್ಟಿನ ಸಮಯದಲ್ಲಿ ಅಧಿಕ ರಕ್ತಸ್ರಾವ, ಹೆರಿಗೆ ಸಮಯದಲ್ಲಿ ರಕ್ತಸ್ರಾವ, ಗುದದ್ವಾರದಿಂದ ರಕ್ತಸ್ರಾವ, ಇತ್ಯಾದಿ ಕಾರಣಗಳಿಂದ.
- ಕಿಡ್ನಿ ಸಂಬಂಧಿತ ಕಾಯಿಲೆಗಳಲ್ಲಿ, ಎರಿತ್ರೋಪೋಯಿಟಿನ್ ಉತ್ಪತ್ತಿ ಕಡಿಮೆಯಾದಾಗ, ದೀರ್ಘಕಾಲದ ನಂಜುಕಾಯಿಲೆ ಇದ್ದಾಗ.
- ಅಸ್ಥಿಮಜ್ಜೆಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇದ್ದಾಗ.
- **ಆನುವಂಶೀಯ ಕಾಯಿಲೆಗಳು:** ಕೆಂಪು ರಕ್ತಕಣಗಳ, ಹಿಮೊಗ್ಲೋಬಿನ್ ಉತ್ಪತ್ತಿಯಲ್ಲಿ ವ್ಯತ್ಯಾಸವಾಗಿದ್ದಾಗ, ಉದಾರಣೆಗೆ ಥಾಲಸೀಮಿಯಾ, ಸಿಕೆಲ್ ಸೆಲ್ ಅನೀಮಿಯಾ.

ಹೆಚ್ಚು ಮಾಡಿಕೊಳ್ಳುವುದು ಹೇಗೆ?

ರಕ್ತಹೀನತೆಯ ತೀವ್ರತೆಗೆ ತಕ್ಕಂತೆ ಚಿಕಿತ್ಸೆಯನ್ನು ನಿರ್ಧರಿಸಲಾಗುತ್ತದೆ. ಭಾರತದಲ್ಲಿ ರಕ್ತಹೀನತೆಗೆ ಕಾರಣ ಮುಖ್ಯವಾಗಿ ಪೌಷ್ಟಿಕಾಂಶಗಳ ಕೊರತೆ. ಶೇ 60–80ರಷ್ಟು ಮಂದಿಯ ರಕ್ತಹೀನತೆಗೆ ಕಾರಣ ಕಬ್ಬಿಣ ಅಂಶದ ಕೊರತೆ.

ರಕ್ತದ ಉತ್ಪತ್ತಿಗೆ ಕಬ್ಬಿಣಾಂಶ, ಪ್ರೋಟೀನ್, ವಿಟಮಿನ್ ಬಿ12, ಫೋಲಿಕ್ ಆಸಿಡ್, ವಿಟಮಿನ್ ಸಿ ಮುಖ್ಯವಾಗಿವೆ. ಹಾಗಾಗಿ ಈ ಅಂಶಗಳಿರುವ ಹಸಿರುತರಕಾರಿಗಳು, ಸೊಪ್ಪುಗಳು, ಮೊಳಕೆಕಟ್ಟಿದ ಕಾಳುಗಳು, ರಾಗಿ, ಹೆಸರುಕಾಳು, ನೆಲಗಡಲೆ, ಅಲಸಂದೆಬೀಜ, ಬೆಲ್ಲ, ನೆಲ್ಲಿಕಾಯಿ, ದಾಳಿಂಬೆ, ಹಣ್ಣು-ಹಂಪಲುಗಳು ಈ ಅಂಶಗಳನ್ನು ಒದಗಿಸುತ್ತವೆ.

ಕಬ್ಬಿಣ ಅಂಶದ ಮಾತ್ರೆಗಳನ್ನು ಸೇವಿಸಿದಾಗ, 7–10 ದಿನಗಳ ಬಳಿಕ ಹಿಮೋಗ್ಲೋಬಿನ್‌ನಲ್ಲಿ ಏರಿಕೆ ಕಾಣಬಹುದು. ಕಬ್ಬಿಣದ ಅಂಶದ ಮಾತ್ರೆಗಳನ್ನು ತೆಗೆದುಕೊಂಡಾಗ, ಮಲದ ಬಣ್ಣ ಕಪ್ಪಾಗುವುದು ಸಹಜ. ಹೊಟ್ಟೆನೋವು, ಎದೆಯುರಿ, ಮಲಬದ್ಧತೆ, ಕೆಲವೊಮ್ಮೆ ಭೇದಿಯೂ ಉಂಟಾಗಬಹುದು. ಮಾತ್ರೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಿದ್ದಾಗ ಅಥವಾ ಜೀರ್ಣಕ್ರಿಯೆಯಲ್ಲಿ ತೊಂದರೆಯಿದ್ದಾಗ ಕಬ್ಬಿಣದ ಅಂಶದ ಚುಚ್ಚುಮದ್ದುಗಳು ಸಹಕಾರಿ. 1000 mg ಕಬ್ಬಿಣದ ಅಂಶವನ್ನು ಒಂದೇ ಬಾರಿಗೆ ಕೊಡುವ ಅವಕಾಶವಿದೆ. ಆದರೆ ಹಿಮೋಗ್ಲೋಬಿನ್‌ನ ಏರಿಕೆ ತತ್‌ಕ್ಷಣಕ್ಕೆ ಆಗುವುದಿಲ್ಲ, 7–10 ದಿನಗಳ ಸಮಯ ಬೇಕಾಗುತ್ತದೆ.

ಕೆಂಪು ರಕ್ತಕಣಗಳ ಬೆಳವಣಿಗೆಗೆ ತುಂಬಾ ಅಗತ್ಯವಾದುದು ಫೋಲಿಕ್ ಆಸಿಡ್. ಹಸಿರು ಎಲೆಗಳ ತರಕಾರಿಗಳು, ಬೆಂಡೆಕಾಯಿ ಬಾಳೆಹಣ್ಣು, ಪಪ್ಪಾಯಿ, ಕಿತ್ತಳೆ, ಬೀನ್ಸ್, ಬಟಾಣಿ, ಮೊಟ್ಟೆ – ಇವುಗಳಲ್ಲಿ ಸಿಗುತ್ತದೆ. ವಿಟಮಿನ್ ಬಿ 12, ಹಾಲು, ಮೊಸರು ಬಾದಾಮಿ, ಗೋಡಂಬಿ, ಮೀನು, ಮಾಂಸ ಇವುಗಳಲ್ಲಿ ಲಭ್ಯ.

ಪ್ರೋಟೀನ್‌ಯುಕ್ತ ಆಹಾರ ಎಂದರೆ, ಕಡಿಮೆ ಕೊಬ್ಬಿನ ಮಾಂಸ, ಮೀನು, ಮೊಟ್ಟೆ , ಎಲ್ಲ ತರಹದ ಬೇಳೆಕಾಳುಗಳು; ಉದಾ: ಬೀನ್ಸ್, ಬಟಾಣಿ, ಸೋಯಾ ಮತ್ತು ಹಾಲು–ಮೊಸರು, ಧಾನ್ಯಗಳು.

ಎರಿತ್ರೋಪೋಯಿಟಿನ್ ಚುಚ್ಚುಮದ್ದು: ಮೂತ್ರಪಿಂಡದ ಕಾಯಿಲೆಯಿಂದ ಬಳಲುತ್ತಿರುವವರಲ್ಲಿ ಈ ರಸದೂತ ಉತ್ಪತ್ತಿಯಾಗದ ಕಾರಣ, ರಕ್ತಹೀನತೆ ಉಂಟಾದಾಗ ಈ ಇಂಜೆಕ್ಷನ್ ಕೊಡುವ ಮೂಲಕ ಸಮಸ್ಯೆಗೆ ಪರಿಹಾರವನ್ನು ಕೊಡಬಹುದು.

ಹೀಗೆ ನಮ್ಮ ಆಹಾರದಲ್ಲಿ ಪ್ರೋಟೀನ್ ಹೆಚ್ಚಾಗಿರುವ ಬೇಳೆಕಾಳುಗಳು, ಮೊಟ್ಟೆ, ಕಬ್ಬಿಣದ ಅಂಶ ಹೆಚ್ಚಿರುವ ಹಸಿರು ಸೊಪ್ಪು-ತರಕಾರಿಗಳು, ಹಣ್ಣು-ಹಂಪಲುಗಳು, ವಿಟಮಿನ್‌ಗಳು ಹೆಚ್ಚಿರುವ ಹಾಲು – ಇವುಗಳ ಸೇವನೆಯಿಂದ ರಕ್ತದ ಹಿಮೋಗ್ಲೋಬಿನ್ ಕಡಿಮೆಯಾಗದಂತೆ ನೋಡಿಕೊಳ್ಳಬಹುದು.

❖

'ಮರೆವು' ಮೈಮರೆಯದಿರಿ

ಡಾ. ಪ್ರಭಾ ಅಧಿಕಾರಿ ಎಂ. ಆರ್.

ನಾಲ್ಕು ವರ್ಷಗಳ ಹಿಂದಿನ ಘಟನೆ: ಜಗತ್ತೇ ತಲ್ಲಣಿಸಿದ್ದ ಕೋವಿಡ್–19 ಕಾಲವದು. ಊರಿಗೆ ಊರೇ 'ಲಾಕ್‌ಡೌನ್' ಎಂಬ ಗಾಢ ಮೌನದಲ್ಲಿ ಮುಳುಗಿತ್ತು. ಅವರೊಬ್ಬ ಲೆಕ್ಕಪರಿಶೋಧಕರು; ಮನೆಯ ಜಗುಲಿಯಲ್ಲಿ ಸೋಫಾಕ್ಕೆ ಒರಗಿ ಕುಳಿತಿದ್ದ ಅವರು, ಧಾವಂತದಲ್ಲಿ ಎದ್ದವರೇ, ಕಾರನ್ನು ಹೊರತೆಗೆದು ರಸ್ತೆಯಲ್ಲಿ ಹೊರಟೇ ಬಿಟ್ಟಿದ್ದರು. ನಿಃಶಬ್ದವಾಗಿದ್ದ ರಸ್ತೆಯಲ್ಲಿ ಬಂದ ಕಾರನ್ನು ಪೊಲೀಸರು ತಡೆದರು. ಪರಸ್ಪರ ವಾಗ್ವಾದಗಳು ನಡೆದು, ನಿಯಮ ಉಲ್ಲಂಘಿಸಿದ ಅವರ ವಿರುದ್ಧ ಪೊಲೀಸ್ ಪ್ರಕರಣ ದಾಖಲಾಯಿತು. ನಂತರ ಈ ಪ್ರಕರಣ ನ್ಯಾಯಾಲಯದ ಕಟಕಟೆಗೆ ಬಂದು ನಿಂತಿತು...

ಮರೆವಿನ ಕಾಯಿಲೆಯಿಂದ (Dementia, Alzheimer) ಬಳಲುತ್ತಿರುವ ಪತಿ ಲಾಕ್‌ಡೌನ್ ಅರಿವಿಲ್ಲದೆ ಹೊರಟಿದ್ದು, ಅವರ ಮೇಲೆ ವಿನಾ ಕಾರಣ ಪ್ರಕರಣ ದಾಖಲಾಗಿದ್ದನ್ನು ತಿಳಿದ ಪತ್ನಿ ಆಘಾತಗೊಂಡರು. ಪ್ರಕರಣ ಹಿಂಪಡೆಯುವಂತೆ ನಿವೇದಿಸಿಕೊಂಡರೂ ಸ್ಪಂದನೆ ಸಿಗಲಿಲ್ಲ. 2–3 ವರ್ಷ ಕೋರ್ಟ್‌ಗೆ ಅಲೆದಾಡಿದರು, ಪತಿಯ ಕಾಯಿಲೆಯ ಬಗ್ಗೆ ವೈದ್ಯರಿಂದ ಪ್ರಮಾಣಪತ್ರ ಪಡೆದು ನ್ಯಾಯಾಲಯದ ಮುಂದೆ ಸಲ್ಲಿಸಿದರು, ಪ್ರಕರಣ ಇತ್ಯರ್ಥ ಕಾಣಲಿಲ್ಲ. ಆ ಲೆಕ್ಕಪರಿಶೋಧಕರು ಇಹಲೋಕ ತ್ಯಜಿಸುವವರೆಗೂ ಪ್ರಕರಣ ಮುಂದುವರಿದಿತ್ತು. ಮಂಗಳೂರಿನಲ್ಲಿ ನೆಲೆಸಿದ್ದ ಆ ಲೆಕ್ಕಪರಿಶೋಧಕರ ಕುಟುಂಬದವರು ಎದುರಿಸಿದ ಸಂಕಟ ಹೇಳತೀರದು.

ಇದೊಂದು ಉದಾಹರಣೆಯಷ್ಟೆ. ಮರೆವಿನ ಕಾಯಿಲೆಯಿಂದ ಬಳಲುತ್ತಿರುವವರು, ಅವರ ಕುಟುಂಬದ ಸದಸ್ಯರು ಅನುಭವಿಸುವ ಕಷ್ಟಗಳು ಅಷ್ಟಿಷ್ಟಲ್ಲ.

ಕಾರಣಗಳೇನು?

ಮರೆವಿನ ಕಾಯಿಲೆಯಿಂದ ಬಳಲುವ ವ್ಯಕ್ತಿ ಮೇಲ್ನೋಟಕ್ಕೆ ಆರೋಗ್ಯವಂತರಾಗಿ ಕಾಣುತ್ತಾರೆ. ಆದರೆ, ಸ್ಮರಣಶಕ್ತಿ ಕಳೆದುಕೊಳ್ಳುವ ಅವರಿಗೆ ಜಗತ್ತಿನ ಆಗುಹೋಗುಗಳ ಪರಿವೆ ಇರುವುದಿಲ್ಲ. ಈ ಕಾಯಿಲೆ ಬರಲು ವಯಸ್ಸಾಗುವಿಕೆಯೇ ಮುಖ್ಯ ಕಾರಣ. ಆರೇಳು ದಶಕಗಳ ಹಿಂದೆ ಮನುಷ್ಯನ ಸರಾಸರಿ ಆಯುಸ್ಸು 37 ಇತ್ತು, ಈಗ ಅದು 74 ಆಗಿದೆ. ಆಧುನಿಕ ತಂತ್ರಜ್ಞಾನವು 'ನಿರಾಯಾಸ'ದ ಜೀವನಶೈಲಿಗೆ ನಮ್ಮನ್ನು ಒಗ್ಗಿಸಿದೆ.



ದೇಹವನ್ನು ದಂಡಿಸಿ ದುಡಿಯುತ್ತಿದ್ದ ಶ್ರಮಜೀವನ ಮರೆಯಾಗಿದೆ. ಸೌಲಭ್ಯಗಳು ಕೆಲಸವನ್ನು ಸುಲಭವಾಗಿಸಿವೆ. ಮೊಬೈಲ್ ಎಂಬ ಮಾಯಾಲೋಕವು ಪರಸ್ಪರ ಭೇಟಿ, ಸ್ನೇಹದ ತಂತುವನ್ನೇ ತುಂಡರಿಸಿದೆ. ಪರಿಣಾಮವಾಗಿ, ಒಂಟಿತನ, ಸಾಮಾಜಿಕ ಸಂಪರ್ಕ ಕಡಿಮೆಯಾಗಿ ಆಲೋಚನಾಶಕ್ತಿ ದುರ್ಬಲಗೊಳ್ಳುತ್ತಿದೆ. ಇತ್ತೀಚೆಗೆ ಜನರನ್ನು ಹೆಚ್ಚು ಕಾಡುವ ಮಧುಮೇಹ, ಅಧಿಕ ರಕ್ತದೊತ್ತಡ, ಕೊಲೆಸ್ಟ್ರಾಲ್‌ನಂತಹ ಸಮಸ್ಯೆಗಳು ಮರೆವಿನ ಕಾಯಿಲೆ ಪ್ರಮಾಣ ಹೆಚ್ಚಲು ಕಾರಣವಾಗುತ್ತಿವೆ. ಪರಿಸರಮಾಲಿನ್ಯ, ಶುದ್ಧ ಗಾಳಿಯ ಕೊರತೆಯೂ ಇದರೊಂದಿಗೆ ಸೇರಿಕೊಂಡಿದೆ.

ಗ್ಯಾಜೆಟ್‌ಗಳಿಗೆ ಅಂಟಿಕೊಂಡ ಪರಿಣಾಮ ರಾತ್ರಿಯ ಗಾಢನಿದ್ರೆಯ ಕೊರತೆಯಿಂದ ಮಿದುಳಿನ ಕಣಗಳಿಗೆ ವಿಶ್ರಾಂತಿ ಸಿಗುತ್ತಿಲ್ಲ. 'ಅಲ್ಝೈಮರ್' ಎಂಬ ನಿಧಾನ ವಿಷ ಮಿದುಳಿನ ಯೋಚನಾ ಸಾಮರ್ಥ್ಯವನ್ನು ಕೊಲ್ಲುತ್ತಿದೆ. 2015ರಲ್ಲಿ ದೇಶದಲ್ಲಿ ನಡೆದ ಸರ್ವೆ ಪ್ರಕಾರ 60 ವರ್ಷ ಮೇಲ್ಪಟ್ಟ ಶೇ 3.7ರಷ್ಟು ಜನರಲ್ಲಿ ಮರೆವಿನ ಕಾಯಿಲೆ ಪತ್ತೆಯಾಗಿತ್ತು, ಪ್ರಸ್ತುತ ಈ ಪ್ರಮಾಣ ಶೇ 7.2ಕ್ಕೆ ಏರಿಕೆಯಾಗಿದೆ.

ಪರಿಹಾರ ಏನು?

ದೇಹದೊಳಗೆ ಹಕ್ಕು ಸ್ಥಾಪಿಸಿರುವ ಅಧಿಕ ರಕ್ತದೊತ್ತಡ, ಮಧುಮೇಹ ಕಾಯಿಲೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ರಾತ್ರಿ ಬೇಗ ಮಲಗಿ, ಬ್ರಾಹ್ಮಿ ಮುಹೂರ್ತದಲ್ಲಿ ಏಳುವುದನ್ನು ರೂಢಿಸಿಕೊಳ್ಳಬೇಕು. ಮುಂಜಾನೆಯ ಸೂರ್ಯಕಿರಣಗಳು ಮಿದುಳಿಗೆ ಬೇಕಾಗುವ ಆಹಾರವನ್ನು ಒದಗಿಸುತ್ತವೆ. ಪ್ರತಿನಿತ್ಯ ಕನಿಷ್ಠ ಐದು ಕಿಲೋ ಮೀಟರ್ ವಾಕಿಂಗ್, ವ್ಯಾಯಾಮ ಮಾಡುವುದು ಅತಿ ಮುಖ್ಯ. ತರಕಾರಿ, ಹಣ್ಣು ಜೊತೆಗೆ, ದಿನಕ್ಕೆ ಎರಡು ಗ್ಲಾಸ್ ಹಾಲು ಸೇವನೆ, ಆರೋಗ್ಯಕರ ಆಹಾರ, ಉತ್ತಮ ಜೀವನಶೈಲಿಯನ್ನು ಪಾಲಿಸಿದರೆ, ಕಾಯಿಲೆ ಬರುವುದನ್ನು ತಡೆಗಟ್ಟಬಹುದು. ಎಣ್ಣೆಯಲ್ಲಿ ಕರಿದ ತಿನಿಸು, ಸಿಹಿ ಪದಾರ್ಥಗಳನ್ನು ತ್ಯಜಿಸುವುದು ಹಿತ.

ವಯಸ್ಸು ಹಿಮ್ಮುಖವಾಗಿ ಚಲಿಸಲಾರದು. ಆದರೆ, ಬದುಕಿಗೊಂದು ಶಿಸ್ತು ರೂಢಿಸಿಕೊಂಡರೆ ಕಾಯಿಲೆಗೆ ತುತ್ತಾದವರು, ಅದರ ತೀವ್ರತೆಯನ್ನು ಶೇ 50ರಷ್ಟು ಹಿಂದಕ್ಕೋಡಿಸಲು ಸಾಧ್ಯವಿದೆ.

50 ವರ್ಷ ದಾಟಿದ ಮೇಲೆ ಸಹಜವಾಗಿರುವ ವ್ಯಕ್ತಿಗೆ ಸ್ಮರಣಶಕ್ತಿ ಕುಂಠಿತವಾಗುತ್ತಿರುವುದು ಅನುಭವಕ್ಕೆ ಬಂದರೆ, ನಿದ್ದೆಯ ಕ್ರಮ ಅಸಹಜವಾದರೆ, ವೈದ್ಯರನ್ನು ಭೇಟಿ ಮಾಡಬೇಕು. ಮಧುಮೇಹ ಇರುವವರು ವರ್ಷಕ್ಕೊಮ್ಮೆ ತಪಾಸಣೆ ಮಾಡಿಸಿದರೆ ಹೆಚ್ಚು ಸುರಕ್ಷಿತ. ಈ ಕಾಯಿಲೆಗೆ ಆರಂಭಿಕ ಹಂತದಲ್ಲಿ ಚಿಕಿತ್ಸೆ ದೊರೆತರೆ, ರೋಗಿಯ ಆರೋಗ್ಯ ಸುಧಾರಣೆಯ ಸಾಧ್ಯತೆ ಹೆಚ್ಚಿರುತ್ತದೆ. ಕಾಯಿಲೆಯನ್ನು ಹತೋಟಿಯಲ್ಲಿ ಇಡಬಹುದು. ಮಧ್ಯಮ ಹಂತಕ್ಕೆ ತಲುಪಿದಾಗ ನೆನಪಿನ ಶಕ್ತಿ ಕಳೆದು ಹೋಗಲು ಪ್ರಾರಂಭವಾಗಿ, ನಂತರ ತಾವೇ ಯಾರೆಂಬುದನ್ನೂ ಮರೆಯುವ ಸ್ಥಿತಿ ಎದುರಾಗಬಹುದು. ಚಿಕಿತ್ಸೆ ನೀಡದೆ ನಿರ್ಲಕ್ಷ್ಯ ಮಾಡಿದರೆ, ಕಾಯಿಲೆಗೆ ತುತ್ತಾದ ವ್ಯಕ್ತಿ, ಕುಟುಂಬಕ್ಕೆ ಭಾರವಾಗುವ ಅಪಾಯವೂ ಇರುತ್ತದೆ.

ಆನುವಂಶಿಕ ಹಿನ್ನೆಲೆ ಇರುವವರು 40ರಿಂದ 60 ವಯೋಮಾನದ ನಡುವಿನಲ್ಲಿ ಈ ಕಾಯಿಲೆಗೆ ತುತ್ತಾಗಬಹುದು. ಕಾಯಿಲೆಯ ಲಕ್ಷಣ ಕಾಣಿಸಿಕೊಂಡರೆ ತಪಾಸಣೆ ಮಾಡಿಸಿಕೊಳ್ಳುವುದು ಒಳಿತು. ಮನೋರೋಗ ತಜ್ಞರು, ನರರೋಗ ತಜ್ಞರು, ಜೆರಿಯಾಟ್ರಿಕ್ ತಜ್ಞರ ಬಳಿ ತಪಾಸಣೆ ಮಾಡಿಸಿಕೊಳ್ಳಬಹುದು.

ರಾಜ್ಯದ ಬಹುತೇಕ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ 'ಬ್ರೇನ್ ಹೆಲ್ತ್ ಕ್ಲಿನಿಕ್' ವಿಭಾಗ ಇದ್ದು, ಇಲ್ಲಿನ ವೈದ್ಯರೂ ತಪಾಸಣೆ ಮಾಡುತ್ತಾರೆ. ನೇರವಾಗಿ ವೈದ್ಯರ ಬಳಿ ಹೋಗಲು ಮುಜುಗರವೆನ್ನಿಸಿದರೆ, ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲೂ ತಪಾಸಣೆ ಲಭ್ಯವಿದೆ.

ನಿರೂಪಣೆ: ಸಂಧ್ಯಾ ಹೆಗಡೆ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

12) ಯೂಕ್ಲಿಡ್‌ನ ಭಾಗಾಕಾರ ಸಿದ್ಧಾಂತ ಪ್ರತಿಜ್ಞೆಯನ್ನು ಉಪಯೋಗಿಸಿ, ಯಾವುದೇ ಧನಸಂಖ್ಯೆಯ ವರ್ಗವು 3m ಅಥವಾ 3m+1 ರೂಪದಲ್ಲಿರುತ್ತದೆಂದು ಮತ್ತು 3m+ 2 ರೂಪದಲ್ಲಿರುವುದಿಲ್ಲ ಎಂದು ತೋರಿಸಿ. ಇಲ್ಲಿ m ಒಂದು ಪೂರ್ಣಾಂಕ.

ಪರಿಹಾರ:–'a'ಯು ಒಂದು ಧನಪೂರ್ಣಾಂಕವಾರಲಿ. ಆಗ ಅದು 3q (or) 3q+1 (or) 3q+2 ರೂಪದಲ್ಲಿರುತ್ತದೆ.

ಆಗ ಈ ಪ್ರಕಾರದಲ್ಲಿರಬಹುದು

ಪ್ರಕಾರ 1: $a = 3q$ ಆದಾಗ,

$a^2 = (3q)^2 = 9q^2 = 3q\,(3q) = 3m$ ಇಲ್ಲಿ, $m = 3q^2$

ಪ್ರಕಾರ 2 : $a = 3q + 1$ ಆದಾಗ

$\Rightarrow a^2 = (3q+1)^2 = (3q)^2 + 2\,(3q)(1) + (1)^2 = 3q\,(3q+2) + 1$

$= 3m + 1$ ಇಲ್ಲಿ, $m = q\,(3q+2)$

ಪ್ರಕಾರ 3: $a = 3q + 2$ ಆದಾಗ

$\Rightarrow a^2 = (3q+2)^2 = (3q)^2 + 2\,(3q)\,(2) + (2)^2$

$= 9q^2 + 12q + 4 = 9q^2 + 12q + 3 + 1$

$= 3(3q^2 + 4q + 1) + 1$

$= 3m + 1$ ಇಲ್ಲಿ, $m = 3q^2 + 4q + 1$

ಆದ್ದರಿಂದ 'a' ಯು 3m ಅಥವಾ 3m+1 ಆಗಿದೆ.

13) ಒಂದು ನಾಣ್ಯವನ್ನು ಎರಡು ಬಾರಿ ಚಿಮ್ಮಿದಾಗ, ಕೆಳಗಿನ ಘಟನೆಗಳನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

(i) ಎರಡು ಶಿರಗಳು (ii) ಕನಿಷ್ಠ ಒಂದು ಶಿರ

(iii) ಶಿರ ಇಲ್ಲದಂತೆ (iv) ನಿರ್ದಿಷ್ಟವಾಗಿ ಒಂದು ಪುಚ್ಛ

ಪರಿಹಾರ: ಒಂದು ನಾಣ್ಯವನ್ನು ಎರಡು ಬಾರಿ ಚಿಮ್ಮಿದಾಗ ಉಂಟಾಗುವ ಫಲಿತ ಗಣವು

$S = \{HH, TT, HT, TH\} \quad \therefore n(S) = 4$

(i) 'A' ಎಂಬುದು ಎರಡು ಶಿರಗಳನ್ನು ಪಡೆಯುವ ಘಟನೆಯಾಗಿರಲಿ.

$A = \{HH\} \quad \therefore n(A) = 1$

$\therefore P(A) = \dfrac{n(A)}{n(S)} = \dfrac{1}{4}$

(ii) 'B' ಎಂಬುದು ಕನಿಷ್ಠ ಒಂದು ಶಿರವನ್ನು ಪಡೆಯುವ ಘಟನೆಯಾಗಿರಲಿ.

$B = \{HH, HT, TH\} \quad \therefore n(B) = 3$

$\therefore P(B) = \dfrac{n(B)}{n(S)} = \dfrac{3}{4}$

(iii) Cಂಬುದು ಒಂದೂ ಶಿರವನ್ನು ಪಡೆಯದ ಘಟನೆಯಾಗಿರಲಿ.

$C = \{TT\} \quad \therefore n(C) = 1$

$\therefore P(C) = \dfrac{n(C)}{n(S)} = \dfrac{1}{4}$


(iv) D ಎಂಬುದು ನಿರ್ದಿಷ್ಟವಾಗಿ ಒಂದು ಪುಚ್ಛವನ್ನು ಪಡೆಯುವ ಘಟನೆಯಾಗಿರಲಿ.

$D = \{HT, TH\} \quad \therefore n(D) = 2$

$\therefore P(D) = \dfrac{n(D)}{n(S)} = \dfrac{2}{4}$

14) ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5cm ಮತ್ತು 3cm ಆಗಿವೆ. ಚಿಕ್ಕ ವೃತ್ತಕ್ಕೆ ಸ್ಪರ್ಶಿಸುವಂತೆ ದೊಡ್ಡ ವೃತ್ತದ ಜ್ಯಾದ ಉದ್ದವನ್ನು ಕಂಡುಹಿಡಿಯಿರಿ.

ಪರಿಹಾರ:– ಸಮಸ್ಯೆಯನ್ನು ಆಧರಿಸಿ ಕೆಳಗಿನಂತೆ ರೇಖಾ ನಕ್ಷೆಯನ್ನು ಬರೆಯೋಣ. ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5cm ಮತ್ತು 3cm ಆಗಿವೆ. ಇದರ ಕೇಂದ್ರ ಆಗಿರಲಿ, AB ರೇಖಾಖಂಡವನ್ನು ರಚಿಸಿ ಅದೂ ಒಳಗಿರುವ ಸಣ್ಣ ವೃತ್ತಕ್ಕೆ P ಬಿಂದುವಿನಲ್ಲಿ ಸ್ಪರ್ಶಿಸುವಂತೆ ಇರಲಿ.



ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5cm ಮತ್ತು 3cm ಆಗಿವೆ. ಇದರ ಕೇಂದ್ರ ಆಗಿರಲಿ, AB ರೇಖಾಖಂಡವನ್ನು ರಚಿಸಿ ಅದೂ ಒಳಗಿರುವ ಸಣ್ಣ ವೃತ್ತಕ್ಕೆ P ಬಿಂದುವಿನಲ್ಲಿ ಸ್ಪರ್ಶಿಸುವಂತೆ ಇರಲಿ.

ಅಂದರೆ AB ಯು ಸಣ್ಣವೃತ್ತಕ್ಕೆ ಸ್ಪರ್ಷಕವಾಗಿದೆ ಹೀಗಾಗಿಯೇ

$\therefore OP \perp AB$

OPA ತ್ರಿಭುಜದಲ್ಲಿ

$OA^2 = AP^2 + OP^2$

$5^2 = AP^2 + 3^2$

$AP^2 = 25 - 9$

$AP = 4$

APಯು PBಗೆ ಸಮವಾಗಿದೆ

ಹೀಗಾಗಿ $AB = 2AP = 2 \times 4 = 8$ cm

ದೊಡ್ಡ ವೃತ್ತದ ಜ್ಯಾದ ಉದ್ದ= 8 cm

15) ಒಬ್ಬ ವ್ಯಕ್ತಿಯು 3 ಬ್ಯಾಟ್ ಗಳು ಮತ್ತು 2 ಚೆಂಡುಗಳನ್ನು ರೂ 960 ಪಾವತಿಸಿ ಕೊಂಡುಕೊಳ್ಳುತ್ತಾನೆ ಒಂದು ಬ್ಯಾಟ್ ನ ಬೆಲೆಯನ್ನು ಕಂಡುಹಿಡಿಯಿರಿ

ಉತ್ತರ:–

$3x + 2y = 960$

$3 \times 300 + 2y = 960$

$900 + 2y = 960$

$2y = 960 - 900$

$2y = 60$

$y = \dfrac{60}{2}$

$\boxed{y = 30}$

16)

cosec $(90^\circ - \theta) \times \cos\theta$ ದ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:

$\text{cosec}\,(90 - \theta) \times \cos\theta$

$\sec\theta \times \cos\theta$

$\dfrac{1}{\cos\theta} \times \cos\theta$

$= 1$

17) ಒಬ್ಬ ಜೀವ ವಿಮಾ ಏಜೆಂಟರು ಪಡೆದ 100 ಪಾಲಿಸಿದಾರರ ವಯಸ್ಸುಗಳ ವಿವರಣೆಯ ದತ್ತಾಂಶಗಳು ಕೆಳಗಿನಂತೆ ಇವೆ. ಪಾಲಿಸಿಗಳನ್ನು 18 ವರ್ಷ ದಾಟಿದ ಮತ್ತು 60 ವರ್ಷಕ್ಕಿಂತ ಕಡಿಮೆ ವಯಸ್ಸಿರುವ ಜನರಿಗೆ ಮಾತ್ರ ನೀಡಿದ್ದರೆ ವಯಸ್ಸುಗಳ ಮಧ್ಯಾಂಕವನ್ನು ಲೆಕ್ಕಾಚಾರ ಮಾಡಿ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

REVISION: MODEL QUESTIONS

2. What is interference of light? Give an example.

Ans;- Interference of light is the phenomenon of redistribution of light energy due to the superposition of light waves from two coherent sources. Eg:- The Soap bubbles appear coloured in sunlight due to the interference of light reflected from the soap bubble.

3. Give two differences between Fresnel diffraction and Fraunhofer diffraction.

Ans:- Two differences between Fresnel diffraction and Fraunhofer diffraction are -

Fraunhofer diffraction: 1) the source of light and screen are placed at infinite distance from obstacle.

2) In this case parallel rays and plane wavefronts are produced using lens.

4. What are meant by 'electric dipole' and 'electric dipole moment'?

Ans:- A pair of two equal and opposite charges separated by certain distance is called an electric dipole. Electric dipole moment of an electric dipole is defined as the product of the magnitude of either charge of the electric dipole and the dipole length.

5. Two capacitors of capacitance 3 μF and 6μF are connected in series. Calculate their effective capacitance.

Ans:- To calculate the effective capacitance of two capacitors of capacitance 3 μF and 6μF are connected in series.

We know that the two capacitors C_1 and C_2 are connected in series then effective capacitance is given by –

$$\frac{1}{C} = \frac{1}{C_1} + \frac{1}{C_2} \Rightarrow C = \frac{C_1 C_2}{C_1 + C_2}$$

Given, $C_1 = 3\ \mu F$ and $C_2 = 6\ \mu F$

$$\therefore C = \frac{C_1 C_2}{C_1 + C_2} = \frac{3 \times 2}{3 + 2} = \frac{6}{5} = 1.2\mu\ F$$

6. State Kirchoffs laws of electrical network.

Ans:- Kirchoffs laws of electrical network

Kirchoffs First law (The junction Law or Kirchoffs Current Law) states that – the sum of all the currents entering any point (or junction) must be equal to the sum of all currents leaving that point (junction).

Kirchoffs Second law (The Loop Law or Kirchoffs Voltage Law) states that – the algebraic sum of all voltages ie., the potential differences across all elements and e.m.fs of all sources in any closed electrical circuit is zero.

7. Define the terms 'Declination' and 'Inclination' at a place.

Ans:- **'Declination':-** The magnetic declination at a place is defined as the angle between geographic Meridian and magnetic meridian at that place.

Inclination

The magnetic inclination or dip at a place is the angle between the direction of the total intensity of magnetic field of the earth and a horizontal line in the magnetic meridian.

8. What is the nature of force between two long straight parallel conductors, when they carry currents in the –

(i) Same direction and

(ii) Opposite direction?

Ans:- The nature of force between two long straight parallel conductors, when they carry currents in the

(i) Same direction – they attract each other

(ii) Opposite direction – they repel each other

9. What is transformer? Give the principle of a transformer.

Ans:- A transformer is an electrical device that transfers energy between two or more circuits through electromagnetic induction.

It works on the principle of a transformer of Faradays law of electromagnetic induction.

10. Name any two types of electron emission.

Ans:- Two types of electron emission are -

a) Thermionic emission

b) Photoelectric emission

11. Obtain an expression for de Broglie wavelength of a photon.

Ans:- An expression for de Broglie wavelength of a photon.

$$\lambda = \frac{h}{m\nu}$$

12. What are liquid crystals? Give one of its applications.

Ans: Liquid crystals (LCs) are matter in a state that has properties between those of conventional liquid and those of solid crystal.

Application - It is used in Optical Imaging.

13. Derive lens maker's formula for convex lens placed in an optical medium

Ans:- This is for the better understanding:

Lens Maker's Formula:

The formula giving relation between the focal length (f) of the lens, refractive index of the material of the lens (n) and the radii of curvature of its surface (R&R) is known as Lens maker's formula.

The manufacturers of the lenses use this relation to design the lens of a given focal length and hence it is called so.

Assumptions made to derive Lens maker's formula:

i] The lens is thin and all the distances are measured from the optical centre of the lens.

ii] The aperture of the lens is small.

iii] The object is a point object and lies on the principal axis.

(Contd….)

ಬಾಂಗ್ಲಾದೇಶದ ರಾಯಭಾರಿಗೆ ಭಾರತದ ವಿದೇಶಾಂಗ ಸಚಿವಾಲಯ ಸಮನ್ಸ್

ಗಡಿಯಲ್ಲಿ ಬೇಲಿ: ನಿಯಮ ಪಾಲನೆ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಹಿರಿಯ ರಾಯಭಾರಿ, ಹಂಗಾಮಿ ಹೈಕಮಿಷನರ್ ನೂರುಲ್ ಇಸ್ಲಾಂ ಅವರನ್ನು ಸೋಮವಾರ ಕರೆಸಿದ ಭಾರತವು, ಉಭಯ ದೇಶಗಳ ನಡುವಿನ ಗಡಿಯಲ್ಲಿನ ಬೇಲಿ ನಿರ್ಮಿಸುವ ಕಾರ್ಯದಲ್ಲಿ ಎಲ್ಲ ನಿಯಮಗಳನ್ನು ಪಾಲಿಸಲಾಗುತ್ತಿದೆ ಎಂದು ತಿಳಿಸಿದೆ.

ಗಡಿ ಭದ್ರತಾ ಪಡೆಯ ಚಟುವಟಿಕೆಗಳ ಬಗ್ಗೆ ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯವು ಭಾನುವಾರ ಭಾರತದ ರಾಯಭಾರಿ ಪ್ರಣಯ್ ವರ್ಮಾ ಅವರನ್ನು ಕಚೇರಿಗೆ ಕರೆಸಿ ಕಳವಳ ವ್ಯಕ್ತಪಡಿಸಿತ್ತು. ಇದಾದ ಒಂದು ದಿನದ ಬಳಿಕ ಭಾರತವು ಬಾಂಗ್ಲಾದ ಹೈಕಮಿಷನರ್‌ಗೆ ಸಮನ್ಸ್ ಜಾರಿ ಮಾಡಿ ಕರೆಸಿಕೊಂಡಿತು.

ಗಡಿ ಭದ್ರತಾ ವಿಷಯದಲ್ಲಿ ಎರಡೂ ದೇಶಗಳ ಸರ್ಕಾರಗಳ ನಡುವಿನ ಒಪ್ಪಂದಗಳನ್ನು ಮತ್ತು ನಿಯಮಗಳನ್ನು ಭಾರತ ಗಮನಿಸಿದೆ ಎಂಬ ವಿಚಾರವನ್ನು ನೂರುಲ್ ಇಸ್ಲಾಂ ಅವರಿಗೆ ಮನವರಿಕೆ ಮಾಡಲಾಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

[illegible]

ಮುಖ್ಯಾಂಶಗಳು

- ಬಾಂಗ್ಲಾದೇಶದ ನಡೆಯ ಬೆನ್ನಲ್ಲೇ ಭಾರತದ ಕ್ರಮ
- ಎಲ್ಲ ಒಪ್ಪಂದಗಳನ್ನು ಬಾಂಗ್ಲಾ ಜಾರಿಗೆ ತರುತ್ತದೆ ಎಂಬ ನಿರೀಕ್ಷೆಯಿದೆ
- ಅಪರಾಧ ಮುಕ್ತ ಗಡಿಗೆ ಭಾರತ ಬದ್ಧ



'ಗಡಿಯಾಚೆಗಿನ ಅಪರಾಧ ಚಟುವಟಿಕೆಗಳು, ಕಳ್ಳಸಾಗಣೆ, ಅಪರಾಧಿಗಳ ಚಲನವಲನ ಮತ್ತು ಕಳ್ಳಸಾಗಣೆಯ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಮೂಲಕ ಅಪರಾಧ ಮುಕ್ತ ಗಡಿಯನ್ನು ಖಚಿತಪಡಿಸಿಕೊಳ್ಳಲು ಭಾರತ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ' ಎಂದು ತಿಳಿಸಿದೆ.

ಮುಳ್ಳುತಂತಿ ಬೇಲಿ, ಗಡಿ ದೀಪ, ತಾಂತ್ರಿಕ ಸಾಧನಗಳ ಅಳವಡಿಕೆ ಮತ್ತು ಜಾನುವಾರು ಬೇಲಿಗಳು ಗಡಿಯನ್ನು ಭದ್ರಪಡಿಸುವ ಕ್ರಮಗಳ ಭಾಗವಾಗಿವೆ ಎಂದು ಎಂಇಎ ಹೇಳಿದೆ.

'ಜುಕರ್‌ಬರ್ಗ್ ಹೇಳಿಕೆ ತಪ್ಪಾಗಿದೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮೆಟಾ ಮುಖ್ಯಸ್ಥ ಮಾರ್ಕ್ ಜುಕರ್‌ಬರ್ಗ್ ಅವರು ಭಾರತದ ಲೋಕಸಭಾ ಚುನಾವಣೆ ಫಲಿತಾಂಶದ ಬಗ್ಗೆ ನೀಡಿದ್ದ ಹೇಳಿಕೆಯು ವಾಸ್ತವವಾಗಿ ತಪ್ಪಾಗಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ಸೋಮವಾರ ಹೇಳಿದರು.



ಅಶ್ವಿನಿ ವೈಷ್ಣವ್

ಕೋವಿಡ್ ಸಾಂಕ್ರಾಮಿಕದ ಬಳಿಕ ಭಾರತ ಸೇರಿದಂತೆ ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಸರ್ಕಾರಗಳು 2024ರ ಚುನಾವಣೆಯಲ್ಲಿ ಅಧಿಕಾರವನ್ನು ಕಳೆದುಕೊಳ್ಳಲಿವೆ ಎಂದು ಜುಕರ್‌ಬರ್ಗ್ ಹೇಳಿದ್ದರು.

'ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ ಭಾರತದಲ್ಲಿ 2024ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. 64 ಕೋಟಿ ಮತದಾರರು ಭಾಗಿಯಾಗಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೇಲೆ ಮತದಾರರು ಮತ್ತೊಮ್ಮೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'80 ಕೋಟಿ ಜನರಿಗೆ ಉಚಿತ ಆಹಾರ, 220 ಕೋಟಿ ಡೋಸ್ ಲಸಿಕೆ ವಿತರಣೆ, ಕೋವಿಡ್ ಸಂದರ್ಭದಲ್ಲಿ ಜಗತ್ತಿನ ಹಲವು ದೇಶಗಳಿಗೆ ನೆರವು ಸೇರಿದಂತೆ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಪಟ್ಟವು ಪ್ರಧಾನಿ ಮೋದಿ ಅವರಿಗೆ ಸತತ ಮೂರನೇ ಬಾರಿಗೆ ಗೆಲುವು ತಂದುಕೊಟ್ಟಿತು' ಎಂದು ಹೇಳಿದ್ದಾರೆ.

'ಜುಕರ್‌ಬರ್ಗ್ ಅವರಿಂದ ತಪ್ಪು ಮಾಹಿತಿ ಬಂದಿರುವುದು ಬೇಸರದ ಸಂಗತಿ. ವಾಸ್ತವ ಮತ್ತು ವಿಶ್ವಾಸಾರ್ಹತೆಯನ್ನು ಎತ್ತಿ ಹಿಡಿಯೋಣ' ಎಂದು ಮೆಟಾವನ್ನು ಟ್ಯಾಗ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ನಾಳೆ ನಿಗದಿಯಾಗಿದ್ದ ಎನ್‌ಇಟಿ ಮುಂದಕ್ಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಇದೇ 15ರಂದು ನಿಗದಿಪಡಿಸಿದ್ದ 'ಯುಜಿಸಿ–ಎನ್‌ಇಟಿ' ಪರೀಕ್ಷೆಯನ್ನು ಮಕರ ಸಂಕ್ರಾಂತಿ ಮತ್ತು ಪೊಂಗಲ್ ಹಬ್ಬದ ಕಾರಣ ಮುಂದೂಡಿದೆ.



ಪಿಎಚ್‌.ಡಿ ಪ್ರವೇಶ, ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್) ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಹತೆಗಾಗಿ ನಡೆಯುವ ರಾಷ್ಟ್ರೀಯ ಅರ್ಹತಾ ಪರೀಕ್ಷೆಯು (ಎನ್‌ಇಟಿ) ಜನವರಿ 3ರಿಂದ ಆರಂಭವಾಗಿದ್ದು, 16ರವರೆಗೆ ನಿಗದಿಯಾಗಿತ್ತು. ಇದು ಕಂಪ್ಯೂಟರ್ ಆಧರಿತ ಪರೀಕ್ಷೆಯಾಗಿದ್ದು (ಸಿಬಿಟಿ) 85 ವಿಷಯಗಳಲ್ಲಿ ನಡೆಯಲಿದೆ.

'ಇದೇ 15ರಂದು ನಿಗದಿಯಾಗಿದ್ದ ಪರೀಕ್ಷೆಯನ್ನು ಮುಂದೂಡಲಾಗಿದ್ದು, ಪರೀಕ್ಷೆಯ ಮುಂದಿನ ದಿನಾಂಕವನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು. ಇದೇ 16ರ ಪರೀಕ್ಷೆಯು ನಿಗದಿಯಂತೆ ನಡೆಯಲಿದೆ' ಎಂದು ಎನ್‌ಟಿಎ ನಿರ್ದೇಶಕ (ಪರೀಕ್ಷೆ) ರಾಜೇಶ್ ಕುಮಾರ್ ತಿಳಿಸಿದ್ದಾರೆ.

'ನಾಲ್ಕು ಮಕ್ಕಳ ಹೊಂದಿದರೆ ₹1 ಲಕ್ಷ'

ಇಂದೋರ್ (ಪಿಟಿಐ): ನಾಲ್ಕರು ಮಕ್ಕಳನ್ನು ಹೊಂದುವ ಸನಾಢ್ಯ ಬ್ರಾಹ್ಮಣ ಸಮುದಾಯದ ದಂಪತಿಗೆ ₹1 ಲಕ್ಷ ಬಹುಮಾನ ನೀಡುವುದಾಗಿ ಮಧ್ಯಪ್ರದೇಶದ ಪರಶುರಾಮ್ ಕಲ್ಯಾಣ ಮಂಡಳಿಯ ಮುಖ್ಯಸ್ಥ ಪಂಡಿತ್ ವಿಷ್ಣು ರಾಜೋರಿಯಾ ಭಾನುವಾರ ಘೋಷಿಸಿದ್ದಾರೆ.

ಸನಾಢ್ಯ ಬ್ರಾಹ್ಮಣ ಸಮುದಾಯದ ವೈವಾಹಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದಾರೆ. ಈ ಕುರಿತು ಅವರ ಭಾಷಣದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆ ಆಗಿದೆ. 'ಒಳ್ಳೆಯ ಉದ್ಯೋಗದಲ್ಲಿ ಇರುವವರು ಒಂದೇ ಮಗುವನ್ನು ಹೊಂದುತ್ತಿದ್ದಾರೆ. ಇದು ಒಳ್ಳೆಯದಲ್ಲ' ಎಂದಿರುವ ಅವರು, 'ಹಿಂದೂಯೇತರ ಜನಸಂಖ್ಯೆ ಹೆಚ್ಚಳ ಆಗುತ್ತಿರುವ ಕುರಿತು ಪ್ರಶ್ನಿಸಿದ್ದಾರೆ. 'ಧರ್ಮದ್ರೋಹಿಗಳ ಜನಸಂಖ್ಯೆ ವೇಗವಾಗಿ ಹೆಚ್ಚುತ್ತಿದೆ' ಎಂದೂ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ನಾಗ್ ಎಂಕೆ–2 ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಮೂರನೇ ತಲೆಮಾರಿನ ಟ್ಯಾಂಕ್ ಪ್ರತಿಬಂಧಕ ಕ್ಷಿಪಣಿ ನಾಗ್ ಎಂಕೆ–2 ಪರೀಕ್ಷಾರ್ಥ ಪ್ರಯೋಗವನ್ನು ಭಾರತ ಯಶಸ್ವಿಯಾಗಿ ನಡೆಸಿತು.

ರಾಜಸ್ಥಾನದ ಪೋಖ್ರಾನ್‌ನಲ್ಲಿ ಸೇನೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಇತ್ತೀಚೆಗೆ ಪರೀಕ್ಷಾರ್ಥ ಪ್ರಯೋಗ ನಡೆಸಲಾಯಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಮೂರು ಬಾರಿ ಪ್ರಯೋಗ ನಡೆಸಲಾಯಿತು. ಈ ಸಂದರ್ಭದಲ್ಲಿ ನಿಗದಿಯಾದ ಎಲ್ಲಾ ಗುರಿಗಳನ್ನು ಕ್ಷಿಪಣಿಯು ಹೊಡೆದುರುಳಿಸಿತು ಎಂದು ತಿಳಿಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಭಾರತೀಯ ಸೇನೆ ಮತ್ತು ಕ್ಷಿಪಣಿ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗದಲ್ಲಿ ಭಾಗಿಯಾದ ಕೈಗಾರಿಕೆಗೆ ಅಭಿನಂದನೆ ತಿಳಿಸಿದ್ದಾರೆ

'ಎಲ್‌ಎಸಿಯು ಉದ್ದಕ್ಕೂ ಪರಿಸ್ಥಿತಿ ಸೂಕ್ಷ್ಮ'

ನವದೆಹಲಿ(ಪಿಟಿಐ): ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯುದ್ದಕ್ಕೂ (ಎಲ್‌ಎಸಿ) ಪರಿಸ್ಥಿತಿಯು ಸೂಕ್ಷ್ಮವಾಗಿದ್ದರೂ, ಸ್ಥಿರವಾಗಿದೆ ಎಂದು ಸೇನಾ ಮುಖ್ಯಸ್ಥ ಜ. ಉಪೇಂದ್ರ ದ್ವಿವೇದಿ ಹೇಳಿದ್ದಾರೆ.



ಉಪೇಂದ್ರ ದ್ವಿವೇದಿ

ಭೂ ಸೇನಾ ದಿನಾಚರಣೆ ಪ್ರಯುಕ್ತ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರದೇಶದಲ್ಲಿ ಇನ್ನೂ ಸ್ವಲ್ಪ ಮಟ್ಟಿನಲ್ಲಿ ಬಿಕ್ಕಟ್ಟು ಇದೆ. ಭಾರತ ಮತ್ತು ಚೀನಾ ಸೇನೆಗಳ ನಡುವಿನ ವಿಶ್ವಾಸವನ್ನು ಮರು ಸ್ಥಾಪಿಸಲು ಇನ್ನಷ್ಟು ಪ್ರಯತ್ನದ ಅಗತ್ಯವಿದೆ ಎಂದರು.

ಪೂರ್ವ ಲಡಾಖ್ ಗಡಿಯಲ್ಲಿನ ಡೆಪ್ಸಾಂಗ್ ಮತ್ತು ಡೆಮ್‌ಚೊಕ್ ಪ್ರದೇಶದಿಂದ ಉಭಯ ದೇಶಗಳು ಸೈನಿಕರನ್ನು ವಾಪಸು ಕರೆಸಿಕೊಳ್ಳುವ ಪ್ರಕ್ರಿಯೆ ಕಳೆದ ಅಕ್ಟೋಬರ್‌ನಲ್ಲಿ ನಡೆದಿದ್ದು, ಅಲ್ಲಿ ಸೈನಿಕರ ಗಸ್ತು ಪ್ರಕ್ರಿಯೆ ಆರಂಭವಾಗಿದೆ ಎಂದು ತಿಳಿಸಿದರು.

'ಸುಪ್ರೀಂ'ಗೆ ನ್ಯಾ. ಕೆ.ವಿನೋದ್ ಚಂದ್ರನ್ ನೇಮಕ

ನವದೆಹಲಿ: ಪಟ್ನಾ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಆಗಿದ್ದ ಕೃಷ್ಣನ್ ವಿನೋದ್ ಚಂದ್ರನ್ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿದೆ.

ಕೇಂದ್ರ ಕಾನೂನು ಸಚಿವಾಲಯವು ಈ ಬಗ್ಗೆ ಅಧಿಸೂಚನೆ ಹೊರಡಿಸಿರುವುದನ್ನು ಸಚಿವ ಅರ್ಜುನ್ ರಾಮ್ ಮೇಘಾವಾಲ ಅವರು 'ಎಕ್ಸ್' ಮೂಲಕ ತಿಳಿಸಿದ್ದಾರೆ.



ಚಂದ್ರನ್ ಅವರು 11 ವರ್ಷಕ್ಕೂ ಹೆಚ್ಚು ಅವಧಿಗೆ ಕೇರಳ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಅವರು ಕಳೆದ ಒಂದು ವರ್ಷದಿಂದ ಬಿಹಾರ ಹೈಕೋರ್ಟ್‌ನ ಮುಖ್ಯನ್ಯಾಯಾಮೂರ್ತಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು.



❦ ಸುಭಾಷಿತ ❦
ಒಂದು ಅಗುಳು ಅನ್ನದ ಹಿಂದೆ ಕೂಡ ಹಲವರ ಪರಿಶ್ರಮ ಇರುತ್ತದೆ. ಆದ್ದರಿಂದ, ಆಹಾರ ಸೇವಿಸುವಾಗ ವ್ಯರ್ಥ ಮಾಡುವುದು ಶ್ರೇಯಸ್ಕರವಲ್ಲ. –ಶಿವಕುಮಾರ ಸ್ವಾಮೀಜಿ

ಹಸು ಕೆಚ್ಚಲು ಕತ್ತರಿಸಿದ್ದು ಹೇಯಕೃತ್ಯ ಕ್ಷುಲ್ಲಕ ರಾಜಕೀಯವೂ ಖಂಡನಾರ್ಹ

ಬೆಂಗಳೂರಿನ ಚಾಮರಾಜಪೇಟೆಯ ರಸ್ತೆಬದಿಯಲ್ಲಿನ ಶೆಡ್‌ವೊಂದರಲ್ಲಿ ಮಲಗಿದ್ದ ಮೂರು ಹಸುಗಳ ಕೆಚ್ಚಲುಗಳನ್ನು ಕೊಯ್ದು, ಅವುಗಳನ್ನು ಗಂಭೀರವಾಗಿ ಗಾಸಿಗೊಳಿಸಿರುವುದು ನಾಗರಿಕ ಸಮಾಜವನ್ನೇ ಬೆಚ್ಚಿಬೀಳಿಸುವಂತಹ ಮೃಗೀಯ ಕೃತ್ಯ. ವಿಕೃತ ಮನೋಭಾವದ ಪುಂಡರಿಗೆ ಮಾತ್ರ ಮೂಕಪ್ರಾಣಿಗಳಿಗೆ ಈ ರೀತಿ ಚಿತ್ರಹಿಂಸೆ ನೀಡಲು ಸಾಧ್ಯ. ರಕ್ತದ ಮಡುವಿನಲ್ಲಿ ಮೂಕರೋದನ ಅನುಭವಿಸುತ್ತಿದ್ದ ಹಸುಗಳಿಗೆ ತಕ್ಷಣ ಚಿಕಿತ್ಸೆ ಕೊಡಿಸಿ, ಅವುಗಳನ್ನು ಪ್ರಾಣಾಪಾಯದಿಂದ ರಕ್ಷಿಸಿರುವುದು ಸಮಾಧಾನದ ಸಂಗತಿ. ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಆರೋಪಿಯೊಬ್ಬನನ್ನು ಬಂಧಿಸಿದ್ದಾರೆ. ಕೃತ್ಯವು ಕೋಮುಸೂಕ್ಷ್ಮ ಸ್ವರೂಪದ್ದಾಗಿರುವ ಕಾರಣ ಮತ್ತು ಸಂಕ್ರಾಂತಿ ಸಂದರ್ಭದಲ್ಲಿ ಇದಾಗಿದ್ದರಿಂದ ಸನ್ನಿವೇಶದ ಲಾಭ ಪಡೆಯುವ ಹವಣಿಕೆಯಲ್ಲಿ ರಾಜಕೀಯ ಮಾಡಲು ಹೊರಟಿರುವುದು ಕೂಡ ನಾಚಿಕೆಗೇಡಿನ ನಡೆ. ಕಿಡಿಗೇಡಿಗಳು ಎಸಗಿದ ದುಷ್ಕೃತ್ಯವನ್ನು ಮುಂದಿಟ್ಟುಕೊಂಡು ಸಮಾಜದ ಸ್ವಾಸ್ಥ್ಯ ಕೆಡಿಸುವ ಪ್ರಸ್ತುತ ಬೆಳವಣಿಗೆಗಳು ರಾಜಕೀಯ ಪಕ್ಷಗಳಿಗೆ ಶೋಭೆ ತರುವಂತಹವಲ್ಲ. ಸಾಮಾಜಿಕ ಕಂದರಗಳು ಹೆಚ್ಚುತ್ತಿರುವ ಈ ಹೊತ್ತಿನಲ್ಲಿ, ಯಾರೇ ಆಗಲಿ, ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತಹ ಕೆಲಸವನ್ನು ಮಾಡಬಾರದು.



ರಾಜ್ಯದಲ್ಲಿ ಎಲ್ಲಿಯೇ ಆಗಲಿ, ಸೌಹಾರ್ದ ಕದಡಲು ಕಾರಣವಾಗಬಹುದಾದ ಕೃತ್ಯಗಳು ನಡೆದಾಗ, ಆಡಳಿತ ಪಕ್ಷವು ಪರಿಸ್ಥಿತಿಯನ್ನು ತುಂಬಾ ಎಚ್ಚರದಿಂದ ಮತ್ತು ಜವಾಬ್ದಾರಿಯಿಂದ ನಿಭಾಯಿಸಬೇಕು. ವಿರೋಧ ಪಕ್ಷ ಸಂಯಮದಿಂದ ವರ್ತಿಸಬೇಕು. ಪರಸ್ಪರ ಭಾವೋದ್ರೇಕದ ಹೇಳಿಕೆಗಳನ್ನು ನೀಡುತ್ತಾ ಹೋದರೆ ಸಮಾಜದ ಸ್ವಾಸ್ಥ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬ ಎಚ್ಚರಿಕೆ ಎಲ್ಲರಿಗೂ ಇರಬೇಕು. ಆದರೆ, ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ವಕ್ಫ್ ಮಂಡಳಿ ವಿರುದ್ಧದ ಪ್ರತಿಭಟನೆಯಲ್ಲಿ ಸಾಂಕೇತಿಕವಾಗಿ ಇವೇ ಹಸುಗಳನ್ನು ಬಳಸಲಾಗಿತ್ತು, ಅದಕ್ಕಾಗಿ ಮುಚ್ಚು ಡ್ಯಾಗರ್ ಬಳಸಿ, ಅವುಗಳ ಕೆಚ್ಚಲು ಕೊಯ್ದು, ಕಾಲು ಕತ್ತರಿಸಲಾಗಿದೆ' ಎಂದು ಭಾವೋದ್ರೇಕಗೊಳಿಸುವ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ. ಬಿಜೆಪಿಯ ಇನ್ನೂ ಕೆಲವು ನಾಯಕರೂ ಇದೇ ಧಾಟಿಯಲ್ಲಿ ಮಾತನಾಡಿದ್ದಾರೆ. ಅವರ ಈ ಹೇಳಿಕೆಗಳು ಅನಪೇಕ್ಷಿತ. ಸ್ಥಳೀಯ ಶಾಸಕರೂ ಆಗಿರುವ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ತಕ್ಷಣ ಸ್ಥಳಕ್ಕೆ ಧಾವಿಸಿ, ಹಸುಗಳ ಮಾಲೀಕನನ್ನು ಸಂತೈಸಿ ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನ ಮಾಡಿದ್ದಾರೆ. ಗಾಯಗೊಂಡ ಹಸುಗಳಿಗೆ ಚಿಕಿತ್ಸೆ ಸಿಗುತ್ತಿರುವುದನ್ನು ಖಚಿತಪಡಿಸಿಕೊಂಡ ಅವರು, ಅವುಗಳ ಮಾಲೀಕನಿಗೆ ಬೇರೆ ಮೂರು ಹಸುಗಳನ್ನು ಕೊಡಿಸುವ ಭರವಸೆ ನೀಡಿದ್ದಾರೆ. ಸೂಕ್ಷ್ಮ ಸನ್ನಿವೇಶದಲ್ಲಿ ಇರಿಸಿದ ಸೂಕ್ತ ನಡೆ ಇದಾಗಿದೆ. ಈ ಹೀನ ಕೃತ್ಯದಿಂದ ಆಕ್ರೋಶಗೊಂಡ ಸ್ಥಳೀಯರು, ತಮ್ಮ ಪ್ರದೇಶದಲ್ಲಿ ಮಾದಕ ವ್ಯಸನಿಗಳು ಮತ್ತು ಪುಂಡರ ಹಾವಳಿ ಹೆಚ್ಚಾಗಿದೆ ಎಂದು ದೂರಿದ್ದಾರೆ. ಅಂತಹ ಪುಂಡಾಟಿಕೆ ಏನಾದರೂ ಅಲ್ಲಿ ನಡೆಯುತ್ತಿದ್ದರೆ ಅದನ್ನು ಮಟ್ಟಹಾಕುವ ಕೆಲಸವನ್ನು ಪೊಲೀಸರು ಮಾಡಬೇಕು ಮತ್ತು ಪೊಲೀಸರು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವುದನ್ನು ಖಚಿತಪಡಿಸಿಕೊಳ್ಳುವ ಕೆಲಸವನ್ನು ಸರ್ಕಾರ ಮಾಡಬೇಕು.

ಸೌಹಾರ್ದ ಕದಡಲು ಕಾರಣವಾಗಬಹುದಾದ ಕೃತ್ಯಗಳು ನಡೆದಾಗ, ಆಡಳಿತ ಪಕ್ಷವು ಪರಿಸ್ಥಿತಿಯನ್ನು ತುಂಬಾ ಎಚ್ಚರದಿಂದ ಮತ್ತು ಜವಾಬ್ದಾರಿಯಿಂದ ನಿಭಾಯಿಸಬೇಕು. ವಿರೋಧ ಪಕ್ಷ ಸಂಯಮದಿಂದ ವರ್ತಿಸಬೇಕು

ಈ ಕೃತ್ಯ ಕುರಿತಂತೆ ಪೊಲೀಸರು ನಿಷ್ಪಕ್ಷಪಾತವಾದ ತನಿಖೆ ನಡೆಸಿ, ಸತ್ಯಸಂಗತಿ ಏನೆಂಬುದನ್ನು ಸಮಾಜದ ಮುಂದಿಡುವ ಕೆಲಸ ಮಾಡಬೇಕು ಮತ್ತು ಈ ಕೆಲಸ ಸಾಧ್ಯವಾದಷ್ಟು ಬೇಗ ಆಗಬೇಕು. ಅವಘಡಗಳು ಸಂಭವಿಸಿದ ಮೇಲೆ, ಅಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಇರಲಿಲ್ಲ ಎಂದು ಹಲುಬುವ ಬದಲು, ಪ್ರಮುಖ ರಸ್ತೆಗಳು ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಕ್ಯಾಮೆರಾ ಕಣ್ಗಾವಲಿನ ವ್ಯವಸ್ಥೆಯನ್ನು ಆದ್ಯತೆ ಮೇರೆಗೆ ಮಾಡಬೇಕು. ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಬೇಕು. ಸಮಾಜದ ನೆಮ್ಮದಿ ಕದಡುವ ಘಟನೆಗಳು ನಡೆದಾಗ ನಮ್ಮ ರಾಜಕಾರಣಿಗಳು ಕ್ಷುಲ್ಲಕ ರಾಜಕೀಯದಲ್ಲಿ ತೊಡಗದೆ, ಪರಿಸ್ಥಿತಿಯನ್ನು ತಿಳಿಗೊಳಿಸಲು ಸಹಕರಿಸುವಂತಹ ಪ್ರಬುದ್ಧ ನಡೆಯನ್ನು ಪ್ರದರ್ಶಿಸಬೇಕು.

ದಿನದ ಟ್ವೀಟ್

ವರ್ಣಮಯ ರಾಜಧಾನಿ

ಬೆಂಗಳೂರಿನ ಸ್ಪಂದನಶೀಲ ವಾತಾವರಣದಿಂದ ಪ್ರಭಾವಿತನಾಗಿದ್ದೇನೆ- ಪುಸ್ತಕ ಮಳಿಗೆಗಳು, ಹೈ-ಟೆಕ್ ಅಂಗಡಿಗಳು, ವಿವಿಧ ಹಿನ್ನೆಲೆಯ ಜನ ಮತ್ತು ಧರ್ಮಗಳು, ಕಾಫಿ ಹೌಸ್‌ಗಳು, ಸಂಭಾಷಣೆಗಳು ಮಾತ್ರವಲ್ಲ ಕೆ.ಸಿ. ದಾಸ್ ಸಿಹಿತಿಂಡಿ ಮಳಿಗೆ ಸಹ ಇದಕ್ಕೆ ಕೊಡುಗೆ ನೀಡಿದೆ. ಭಾರತದ ರಾಜಕಾರಣವು ಬಲಕ್ಕೆ ವಾಲುತ್ತಿರಬಹುದು. ಆದರೆ, ಭಾರತದ ದಕ್ಷಿಣವು ಎಲ್ಲರನ್ನೂ ಸೆಳೆಯುತ್ತಿದೆ.



ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ

ಜನಪ್ರತಿನಿಧಿಗಳು ಜನದ್ರೋಹಿಗಳಾದಾಗ ಅವರನ್ನು ಜನರೇ ವಿಚಾರಿಸಿಕೊಳ್ಳಬೇಕಾಗುತ್ತದೆ. ಕೇಂದ್ರದ ಕಿವುಡು ಸರ್ಕಾರ ಮತ್ತು ಬಿಜೆಪಿಯ ಮೂಗ ನಾಯಕರ ವಿರುದ್ಧ ಕನ್ನಡಿಗರೆಲ್ಲರೂ ಜಾತಿ, ಧರ್ಮ, ಪಕ್ಷ ಪಂಥಗಳನ್ನು ಮೀರಿ ದನಿ ಎತ್ತಬೇಕಾಗಿದೆ. ಇಂತಹದ್ದೊಂದು ಸಂಕಲ್ಪವನ್ನು ಸಂಕ್ರಮಣದ ಶುಭದಿನದಂದು ಎಲ್ಲ ಕನ್ನಡಿಗರೂ ಕೈಗೊಂಡು ಕರ್ನಾಟಕವನ್ನು ಅನ್ಯಾಯ ಮತ್ತು ಅವಮಾನದಿಂದ ರಕ್ಷಿಸಬೇಕಾಗಿದೆ.



ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 14-1-2000

● **ಮೂವರು ಪಾಕಿಸ್ತಾನಿ ಉಗ್ರರ ಹತ್ಯೆ**
ಖಾನ್‌ಬಾಲ್ (ಕಾಶ್ಮೀರ), ಜ. 13 (ಪಿಟಿಐ, ಯುಎನ್‌ಐ)– ನಿನ್ನೆ ಸಂಜೆ ಭದ್ರತಾ ಪಡೆ ಮತ್ತು ಉಗ್ರಗಾಮಿಗಳ ನಡುವೆ ಇಲ್ಲಿ ನಡೆದ ಕಾಳಗದಲ್ಲಿ ಸೇನಾಪಡೆ ಮೇಜರ್, ಕರ್ನಾಟಕದವರಾದ ಮುತ್ತಣ್ಣ ಹಾಗೂ ಮೂವರು ವಿದೇಶಿ ಉಗ್ರಗಾಮಿಗಳು ಸೇರಿ ಒಟ್ಟು ಏಳು ಜನ ಮೃತಪಟ್ಟಿದ್ದಾರೆ.

ಪಾಕಿಸ್ತಾನ ಮೂಲದ ಲಷ್ಕರ್‌-ಎ-ತಯ್ಯಬಾಗೆ ಸೇರಿದ ಕನಿಷ್ಠ ಐವರು ಉಗ್ರಗಾಮಿಗಳು ಶಸ್ತ್ರಸಜ್ಜಿತರಾಗಿ, ಸೇನಾಪಡೆಗೆ ಸೇರಿದ ಇಲ್ಲಿನ ರಾಷ್ಟ್ರೀಯ ರೈಫಲ್ಸ್ ಶಿಬಿರದ ಕೇಂದ್ರ ಕಚೇರಿಯನ್ನು ನಿನ್ನೆ ಸಂಜೆ ಪ್ರವೇಶಿಸಿದರಲ್ಲದೆ ಗ್ರೆನೇಡ್ ದಾಳಿ ಮಾಡಿದರು. ಆಗ ಪ್ರತಿದಾಳಿ ನಡೆದಿದೆ.

● **ಸ್ಥಿರ ಬೆಲೆ: ಸಂಕ್ರಾಂತಿಗೆ ಹೊಸ ಕಾಂತಿ**
ಬೆಂಗಳೂರು, ಜ. 13– ಸುಗ್ಗಿ ಹಬ್ಬ ಸಂಕ್ರಾಂತಿ ಎಳ್ಳು- ಬೆಲ್ಲ, ಕಬ್ಬು, ಸಕ್ಕರೆ ಅಚ್ಚಿನೊಂದಿಗೆ ಸಂಭ್ರಮದಿಂದ ಕಾಲಿಟ್ಟಿದೆ. ಸಂಕ್ರಾಂತಿಯ ಸಡಗರಕ್ಕೆ ತಮ್ಮ ಸಡಗರ ಸೇರಿಸಿರುವ ಎಳ್ಳು-ಬೆಲ್ಲ, ಕಬ್ಬು ಹಾಗೂ ಸಕ್ಕರೆ ಅಚ್ಚುಗಳ ಬೆಲೆ ಈ ಬಾರಿ ಏರದಿರುವುದೇ ವಿಶೇಷ.

ಎಳ್ಳು-ಬೆಲ್ಲ, ಕಬ್ಬು, ಸಕ್ಕರೆ ಅಚ್ಚುಗಳು ಸಂಕ್ರಾಂತಿಯ ಅವಿಭಾಜ್ಯ ಅಂಗ. ಇವುಗಳ ಬೆಲೆ ನಗರದ ಎಲ್ಲ ಪ್ರಮುಖ ಮಾರುಕಟ್ಟೆಗಳಲ್ಲಿ ಬಹುತೇಕ ಏಕಪ್ರಕಾರವಾಗಿರುವುದು ಜನತೆಗೆ ಅದರಲ್ಲೂ ವಿಶೇಷವಾಗಿ ಗೃಹಿಣಿಯರಿಗೆ ಸಮಾಧಾನ ತಂದಿದೆ.

50 ವರ್ಷಗಳ ಹಿಂದೆ

ಮಂಗಳವಾರ, 14-1-1975

● **ವಿಶ್ರಾಂತಿ ವೇತನ, ನೌಕರಿಗಾಗಿ ಪರದಾಟ**
ಬೆಂಗಳೂರು, ಜ. 13– ಬಂದೂಕದ ಬಾಯಿಗೆ ಮಗನನ್ನು ಅರ್ಪಿಸಿದಾಕೆ ಎರಡು ವರ್ಷಗಳಿಂದ ವಿಶ್ರಾಂತಿ ವೇತನಕ್ಕಾಗಿ ಅಡ್ಡಾಡುತ್ತಿದ್ದಾಳೆ.

ಮತ್ತೊಬ್ಬರಿಗೆ ಹಾಸಿಗೆ ಮೇಲಿಂದಲೇ ನಳಿಕೆಯ ಮೂಲಕ ಮೂತ್ರ ವಿಸರ್ಜನೆ. ಇದೇ ರೀತಿ ದೀರ್ಘಕಾಲ ಅನುಭವಿಸಿ ಕೊನೆಗೊಂದು ದಿನ ಸಾವಿಗೆ ಶರಣಾದಾಗಿನಿಂದ ಅವರ ಕುಟುಂಬಕ್ಕೆ ಬವಣೆ. ಎಸ್.ಎಸ್.ಎಲ್.ಸಿ. ಜೊತೆಗೆ ಟೈಪಿಂಗ್ ಪರೀಕ್ಷೆ ಪಾಸಾಗಿರುವ ಮಗಳಿಗೆ ಕೆಲಸ ಕೊಡಿ ಎಂದು ಹಲವಾರು ಕಾರ್ಖಾನೆಗಳಿಗೆ ಮನವಿ ಮೇಲೆ ಮನವಿ ಸಲ್ಲಿಸಿದರೂ ಕೆಲಸ ಹಾಗಿರಲಿ ಉತ್ತರ ಕೂಡ ಇಲ್ಲ.

ವಿಧಾನಸೌಧದಲ್ಲಿಂದು ಕಾರ್ಮಿಕ ಖಾತೆಯ ರಾಜ್ಯ ಸಚಿವ ಕೆ.ಶ್ರೀರಾಮುಲು ಅವರು ಕರೆದಿದ್ದ ಸ್ವಾತಂತ್ರ್ಯಯೋಧರ ಸಮ್ಮೇಳನದಲ್ಲಿ ತಮ್ಮ ಹಾಗೂ ತಮ್ಮ ಸಹ ಯೋಧರ ಸಂಕಷ್ಟಗಳನ್ನು ಸ್ವಾತಂತ್ರ್ಯ ಹೋರಾಟಗಾರರು ತೋಡಿಕೊಂಡ ರೀತಿ ಇದು. ಸ್ವಾತಂತ್ರ್ಯ ಹೋರಾಟಗಾರರು ವಿಶ್ರಾಂತಿ ವೇತನ ಪಡೆಯಲು ಕನಿಷ್ಠ ಮೂರು ತಿಂಗಳಾದರೂ ಸೆರೆಮನೆ ಶಿಕ್ಷೆ ಅನುಭವಿಸಿರಬೇಕೆಂಬ ನಿಯಮ ಸಡಿಲಗೊಳಿಸುವ, ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ನೌಕರಿ ಕಳೆದುಕೊಂಡವರಿಗೆ ವಿಶ್ರಾಂತಿ ವೇತನ ನೀಡುವ, ಸ್ವಾತಂತ್ರ್ಯಯೋಧರ ಮಕ್ಕಳಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವುದರ ಕುರಿತು ಚರ್ಚಿಸಲು ಸಚಿವರು ಈ ಸಮ್ಮೇಳನ ಕರೆದಿದ್ದರು. ಜೈಲುವಾಸ ಅನುಭವಿಸಿದುದರ ಮೇಲೆ ವಿಶ್ರಾಂತಿ ವೇತನ ನಿಗದಿಪಡಿಸುವುದು ಸರಿಯೇ?

ಈ ಪ್ರಶ್ನೆ ಹಾಕಿದ ಸ್ವಾತಂತ್ರ್ಯಯೋಧ ಕೆ.ಜೀವಣ್ಣರಾಯರು, ಮ್ಯಾಜಿಸ್ಟ್ರೇಟರು ಶಿಕ್ಷೆ ವಿಧಿಸುವಾಗ ಇಷ್ಟು ಜುಲ್ಮಾನೆ ಕೊಡಬೇಕು, ತಪ್ಪಿದರೆ ಇಷ್ಟು ದಿನ ಸಜಾ ಎಂದು ತೀರ್ಪು ನೀಡುತ್ತಿದ್ದರು. ದಂಡ ಕೊಡಲು ಹಣವಿಲ್ಲದೆ ಸೆರೆಮನೆ ವಾಸ ಅನುಭವಿಸಿದವರೂ ಉಂಟು.

ಹಾಗಾದರೆ ಬರೀ ದಂಡ ತೆತ್ತವರು ವಿಶ್ರಾಂತಿ ವೇತನಕ್ಕೆ ಅರ್ಹರಲ್ಲವೇ ಎಂದು ಕೇಳಿದ ಅವರು 'ಜೈಲುವಾಸ ಮುಖ್ಯವಲ್ಲ, ಉದ್ದೇಶ ಮುಖ್ಯ' ಎಂದರು.

ಇದೆ ಬಲವಾದ ಸಮರ್ಥನೆ, ಈಗ ಇದು ರಾಜಕೀಯ ಇಚ್ಛಾಶಕ್ತಿಯ ವಿಚಾರ ಮಾತ್ರ

ಕಾಯ್ದೆಬದ್ಧ ಎಂಎಸ್‌ಪಿ: ಬೇಡಿಕೆ ನ್ಯಾಯಯುತ

ವಿಶ್ಲೇಷಣೆ

ಕವಿತಾ ಕುರುಗಂಟಿ
ಕಿರಣ್ ಕುಮಾರ್ ವಿಸ್ಸಾ
ಯೋಗೇಂದ್ರ ಯಾದವ್

ರೈತರಿಗೆ ಕಾಯ್ದೆಯ ಖಾತರಿ ಇರುವ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯು ಜಾರಿಗೆ ಬರುವ ಕಾಲ ಸನ್ನಿಹಿತವಾಗಿದೆಯೇ? ರೈತ ನಾಯಕ ಜಗಜಿತ್ ಸಿಂಗ್ ಡಲ್ಲೇವಾಲ್ ಈ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಒಂದೂವರೆ ತಿಂಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಈ ಮಧ್ಯೆ, ಕೃಷಿ, ಹೈನುಗಾರಿಕೆ ಮತ್ತು ಆಹಾರ ಸಂಸ್ಕರಣೆಗೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯು ಕಾಯ್ದೆಯ ಖಾತರಿ ಇರುವ ಎಂಎಸ್‌ಪಿ ಜಾರಿ ಮಾಡಬೇಕು ಎಂದು ಶಿಫಾರಸು ಮಾಡಿದೆ. ಪಂಜಾಬ್‌ನ ಖನೌರಿ ಪಟ್ಟಣದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ರೈತ ಸಂಘಟನೆಗಳ ಅತಿದೊಡ್ಡ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ ಇದೇ ಬೇಡಿಕೆ ಇರಿಸಿಕೊಂಡು ಪ್ರಮುಖ ಕ್ರಿಯಾಯೋಜನೆ ಪ್ರಕಟಿಸುವ ಸಾಧ್ಯತೆ ಇದೆ.

ಆದರೆ, ಈ ಬೇಡಿಕೆ ಈಡೇರಿಸುವ ಮನಃಸ್ಥಿತಿಯು ಕೇಂದ್ರ ಸರ್ಕಾರಕ್ಕೆ ಇದ್ದಂತೆ ಕಾಣಿಸುತ್ತಿಲ್ಲ. 'ಎಂಎಸ್‌ಪಿ ಈಗಲೂ ಇದೆ, ಮುಂದೆಯೂ ಇರಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪದೇ ಪದೇ ಹೇಳಿದ್ದಾರೆ. ಆದರೆ, ಪ್ರತಿಭಟನೆ ನಡೆಸುತ್ತಿರುವ ರೈತರ ಜೊತೆಗೆ ಮಾತುಕತೆ ನಡೆಸುವ ಪ್ರಯತ್ನವನ್ನು ಕೂಡ ಸರ್ಕಾರ ಮಾಡಿಲ್ಲ. ಪ್ರಧಾನಿಯವರು ರೈತರಿಗೆ ನೀಡಿದ 'ಹೊಸ ವರ್ಷದ ಉಡುಗೊರೆ' ಏನೆಂದರೆ, ಬೆಳೆ ವಿಮೆ ಮತ್ತು ರಸಗೊಬ್ಬರ ಸಹಾಯಧನ ಮುಂದುವರಿಸಲಾಗುವುದು ಎಂಬ ಅದೇ ಹಳಸಲು ಘೋಷಣೆ. ಈ ಘೋಷಣೆಯಲ್ಲಿ ಎಂಎಸ್‌ಪಿ ಬೇಡಿಕೆ ಮರೆಯಾಯಿತು. ಜೊತೆಗೆ, ಸರ್ಕಾರವು ಇತ್ತೀಚೆಗೆ ಪ್ರಕಟಿಸಿದ, ಮುಂದಿನ ಹತ್ತು ವರ್ಷಗಳ 'ಕೃಷಿ ಮಾರುಕಟ್ಟೆಯ ರಾಷ್ಟ್ರೀಯ ಚೌಕಟ್ಟು' ಕರಡುವಿನಲ್ಲಿ ಎಂಎಸ್‌ಪಿಯ ಕಾಯ್ದೆಬದ್ಧ ಖಾತರಿ ಬಿಡಿ, ಎಂಎಸ್‌ಪಿಯ ಉಲ್ಲೇಖ ಕೂಡ ಇಲ್ಲ.

ಈ ಬಿಕ್ಕಟ್ಟಿನ ನಡುವೆಯೇ ರೈತರ ಸಂಕಷ್ಟ ಮುಂದುವರಿದಿದೆ. ರಾಜಸ್ಥಾನದ ಮೆಡತಾದ ಪ್ರಮುಖ ಕೃಷಿ ಮಾರುಕಟ್ಟೆಯ ಉದಾಹರಣೆಯನ್ನು ತೆಗೆದುಕೊಳ್ಳೋಣ. ಇಲ್ಲಿ ಮುಂಗಾರು ಹಂಗಾಮಿನ ಪ್ರಮುಖ ಬೆಳೆ ಹೆಸರುಕಾಳು. 2024ರ ಡಿಸೆಂಬರ್‌ನಲ್ಲಿ ಹೆಸರುಕಾಳಿಗೆ ಘೋಷಿಸಿದ್ದ ಎಂಎಸ್‌ಪಿ ಕ್ವಿಂಟಲ್‌ಗೆ ₹8,682. ಆದರೆ, ರೈತರಿಗೆ ದೊರೆತ ಸರಾಸರಿ ದರ ₹6,467 ಮಾತ್ರ. ರೈತರು ತಮ್ಮ ಉತ್ಪನ್ನವನ್ನು ಎಂಎಸ್‌ಪಿಗಿಂತ ₹2,215 ಕಡಿಮೆಗೆ ಮಾರಿ ನಷ್ಟ ಮಾಡಿಕೊಳ್ಳಬೇಕಾಯಿತು. ಮಹಾರಾಷ್ಟ್ರದ ಜಲಾನಾ ಮಾರುಕಟ್ಟೆಯಲ್ಲಿ ಜೋಳಕ್ಕೆ ಕ್ವಿಂಟಲ್‌ಗೆ ರೈತರಿಗೆ ಸಿಕ್ಕ ಸರಾಸರಿ ದರ ₹2,456. ಆದರೆ, ಪ್ರಕಟಿಸಲಾದ ಎಂಎಸ್‌ಪಿ ₹3,371. ರೈತರಿಗೆ ಕ್ವಿಂಟಲ್‌ಗೆ ಆದ ನಷ್ಟ ₹915. ಮಧ್ಯಪ್ರದೇಶದಲ್ಲಿ ಮೆಕ್ಕೆಜೋಳಕ್ಕೆ ಇದ್ದ ಎಂಎಸ್‌ಪಿ ₹2,225. ಆದರೆ ರೈತರಿಗೆ ಸಿಕ್ಕಿದ್ದು ₹1,980 ಮಾತ್ರ. ಅಕ್ಟೋಬರ್ ಮತ್ತು ಡಿಸೆಂಬರ್ ನಡುವಣ ಮೂರು ತಿಂಗಳಲ್ಲಿ ಸೊಯಾಬೀನ್‌ಗೆ ಇದ್ದ ಸರಾಸರಿ ಮಾರುಕಟ್ಟೆ ದರ ಕ್ವಿಂಟಲ್‌ಗೆ ಮಹಾರಾಷ್ಟ್ರದಲ್ಲಿ ₹4,076, ಮಧ್ಯಪ್ರದೇಶದಲ್ಲಿ ₹4,148. ಆದರೆ, ಎಂಎಸ್‌ಪಿ ₹4,892. ಇದು ಎಂಎಸ್‌ಪಿ ಹಿಂದಿನ ಕತೆ ಮತ್ತು ರೈತರ ಬೇಡಿಕೆಯ ಹಿಂದೆ ಇರುವ ತರ್ಕ.

ಸರ್ಕಾರ ಪ್ರತಿವರ್ಷವೂ 23 ಬೆಳೆಗಳಿಗೆ ಅಧಿಕೃತವಾಗಿ ಎಂಎಸ್‌ಪಿ ಘೋಷಣೆ ಮಾಡುತ್ತದೆ. ಸರ್ಕಾರವು ರೈತರಿಗೆ ಬಹುದೊಡ್ಡ ಅನುಕೂಲ ಮಾಡಿಕೊಡುತ್ತಿದೆ ಎಂದು ಜನರು ಭಾವಿಸುವ ರೀತಿಯಲ್ಲಿ ಈ ಘೋಷಣೆ ಹೊರಬೀಳುತ್ತದೆ. ವಾಸ್ತವದಲ್ಲಿ, ಈ 'ಕನಿಷ್ಠ ದರ' ರೈತರಿಗೆ ಸಿಗುವಲ್ಲಿ ಸರ್ಕಾರದ ಕೆಲಸ ಅತ್ಯಲ್ಪ. ಮಾರುಕಟ್ಟೆಯಲ್ಲಿ ದರವು ಎಂಎಸ್‌ಪಿಗಿಂತ ಕೆಳಗೆ ಹೋದಾಗ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದಾದರೆ, 'ಕನಿಷ್ಠ' ಮತ್ತು 'ಬೆಂಬಲ' ಎಂಬುದೆಲ್ಲ ಅರ್ಥಹೀನ. ಎಂಎಸ್‌ಪಿಗೆ ರಕ್ಷಣೆ ಇಲ್ಲ ಎಂದಾದರೆ ಅದು ಎಂಎಸ್‌ಪಿಯೇ ಅಲ್ಲ. ಸರ್ಕಾರವು ಇದಕ್ಕೆ ಖಾತರಿ ನೀಡಬೇಕು ಎಂಬುದಷ್ಟೇ ರೈತರ ಬೇಡಿಕೆ. ಕಾಯ್ದೆಬದ್ಧವಾದ ಎಂಎಸ್‌ಪಿ ಸುಸಂಬದ್ಧ ಮತ್ತು ಕಾರ್ಯಸಾಧು. ಇದನ್ನು ಭರಿಸುವ ಶಕ್ತಿಯೂ ದೇಶಕ್ಕೆ ಇದೆ. ಇದನ್ನು ಹೇಗೆ ಜಾರಿಗೊಳಿಸಬಹುದು ಎಂಬುದನ್ನು ನೋಡೋಣ.

ಎಲ್ಲ ಬೆಳೆಗಳನ್ನು ಸಂಪೂರ್ಣವಾಗಿ ಸರ್ಕಾರ ಖರೀದಿಸಲೇಬೇಕು ಅಥವಾ ಎಂಎಸ್‌ಪಿಗಿಂತ ಕಡಿಮೆ ದರದಲ್ಲಿ ಮಾರಾಟವಾಗುವ ಬೆಳೆಗಳನ್ನು ಖರೀದಿಸಬೇಕು ಎಂಬ ಯೋಚನೆಯನ್ನೇ ತಲೆಯಿಂದ ತೆಗೆದುಬಿಡೋಣ. ಇದು ಕಾರ್ಯಸಾಧುವೂ ಅಲ್ಲ, ಅಗತ್ಯವೂ ಇಲ್ಲ. ಎಂಎಸ್‌ಪಿಗಿಂತ ಕಡಿಮೆಗೆ ಖರೀದಿ ಮಾಡುವುದು ಕಾನೂನುಬಾಹಿರ ಮತ್ತು ಹಾಗಾದಾಗ ಶಿಕ್ಷೆಯ ವ್ಯವಸ್ಥೆ ರೂಪಿಸುವುದು ಸರಳವಾದ ವಿಚಾರವೂ ಅಲ್ಲ. ಇಂತಹುದನ್ನು ಹಿಂದೆ ಮಾಡಿ ನೋಡಲಾಗಿದೆ ಮತ್ತು ಈ ವ್ಯವಸ್ಥೆ ಪ್ರಯೋಜನಕಾರಿ ಅಲ್ಲ.

ಕಾಯ್ದೆಬದ್ಧ ಎಂಎಸ್‌ಪಿಯ ಮೂಲತತ್ವ ಬಹಳ ಸರಳವಾಗಿದೆ: ಎಲ್ಲ ಉತ್ಪನ್ನಗಳಿಗೆ ಲಾಭದಾಯಕವಾದ ಎಂಎಸ್‌ಪಿಯನ್ನು ಪಡೆಯುವ ಕಾಯ್ದೆಬದ್ಧ ಹಕ್ಕು ರೈತರಿಗೆ ಇರಬೇಕು ಮತ್ತು ಅದು ದೊರೆಯುವಂತೆ ನೋಡಿಕೊಳ್ಳುವ ಕಾಯ್ದೆಬದ್ಧ ಹೊಣೆಗಾರಿಕೆ ಸರ್ಕಾರಕ್ಕೆ ಇರಬೇಕು. ರೈತರ ಉತ್ಪನ್ನಗಳಿಗೆ ಲಾಭದಾಯಕ ದರ ದೊರಕುವುದನ್ನು 'ಖಾತರಿ'ಪಡಿಸುವ ಹೊಣೆಗಾರಿಕೆ ಸರ್ಕಾರದ್ದು ಎಂಬುದಷ್ಟೇ ಇದರ ಅರ್ಥ. ಉತ್ಪನ್ನಗಳನ್ನು ಸರ್ಕಾರವೇ ಖರೀದಿಸಬೇಕು ಎಂದು ಅಲ್ಲ. ಹಾಗೆಯೇ, ಲಾಭದಾಯಕ ಬೆಲೆ ಪಡೆದುಕೊಳ್ಳುವುದು ರೈತರ ಹಕ್ಕು, ಅದನ್ನು ಯಾರು ನೀಡುತ್ತಾರೆ ಎಂಬುದು ಇಲ್ಲಿ ಮುಖ್ಯವಲ್ಲ. ಈ ತತ್ವವನ್ನು ಮೂರು ಮುಖ್ಯ ವಿಧಾನಗಳ ಮೂಲಕ ಜಾರಿಗೆ ತರಬಹುದು: ಖರೀದಿ ವಿಸ್ತರಣೆ, ಪರಿಣಾಮಕಾರಿ ಮಾರುಕಟ್ಟೆ ಹಸ್ತಕ್ಷೇಪ ಮತ್ತು ಕೊರತೆಯಾದ ಮೊತ್ತವನ್ನು ಪಾವತಿಸುವ ಭರವಸೆ.

ಈಗ ಇರುವ ಖರೀದಿ ವ್ಯವಸ್ಥೆಯ ವಿಸ್ತರಣೆ ಮತ್ತು ಪರಿಷ್ಕರಣೆ ಈ ದಿಸೆಯಲ್ಲಿ ಮೊದಲ ಹೆಜ್ಜೆಯಾಗಬೇಕು. ಕಾಳುಗಳು, ಧಾನ್ಯಗಳು ಮತ್ತು ಎಣ್ಣೆಬೀಜಗಳ ಖರೀದಿಯನ್ನು ಹೆಚ್ಚಿಸಬೇಕು ಮತ್ತು ಆಹಾರ ಭದ್ರತೆ ಯೋಜನೆಯಲ್ಲಿ ಇವುಗಳ ಪಾಲನ್ನು ಹೆಚ್ಚಿಸಬೇಕು. ಈ ಮೂಲಕ ಈಗ ಖರೀದಿಯಲ್ಲಿ ಇರುವ ಅಸಮತೋಲನವನ್ನು ನಿವಾರಿಸಬಹುದು. ಮಾರುಕಟ್ಟೆಯಲ್ಲಿ ಕೆಲವು ಹಸ್ತಕ್ಷೇಪಗಳನ್ನು ನಡೆಸಬೇಕು: ದರವು ಎಂಎಸ್‌ಪಿಗಿಂತ ಕೆಳಕ್ಕೆ ಕುಸಿಯುತ್ತಿದೆ ಎಂದಾಗ ಖರೀದಿಯನ್ನು ಸೀಮಿತಗೊಳಿಸಬೇಕು. ಅಂತರರಾಷ್ಟ್ರೀಯ ವ್ಯಾಪಾರ ನೀತಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಬೇಕು. ಉಗ್ರಾಣಗಳ ಪರಿಸ್ಥಿತಿ ಉತ್ತಮಪಡಿಸಬೇಕು; ರೈತ ಉತ್ಪಾದಕ ಸಂಘಟನೆಗಳನ್ನು (ಎಫ್‌ಪಿಒ) ಬಲಪಡಿಸಿ ಸಣ್ಣ ರೈತರು ಕೂಡ ದರ ಏರಿಕೆಯಾಗುವ ತನಕ ಉತ್ಪನ್ನಗಳನ್ನು ಸಂಗ್ರಹಿಸಿ ಇರಿಸಿಕೊಳ್ಳಲು ಶಕ್ತರಾಗುವಂತೆ ಮಾಡಬೇಕು. ಕೊನೆಯದಾಗಿ, ಈ ಯಾವ ವಿಧಾನವೂ ದರವನ್ನು ಎಂಎಸ್‌ಪಿಗಿಂತ ಮೇಲಕ್ಕೆ ಏರಿಸಲು ನೆರವಾಗದೇ ಇದ್ದಾಗ ಮಾತ್ರ ಎಂಎಸ್‌ಪಿ ಮತ್ತು ಮಾರುಕಟ್ಟೆ ದರದ ನಡುವಣ ಅಂತರದ ಮೊತ್ತವನ್ನು ಸರ್ಕಾರ ರೈತರಿಗೆ ಪಾವತಿಸಬೇಕು. 'ಕೊರತೆಯ ಮೊತ್ತ ಪಾವತಿ'ಯ ಕಾಯ್ದೆಬದ್ಧ ಖಾತರಿಯಿಂದಾಗಿ ಎಂಎಸ್‌ಪಿ ಪಡೆಯುವುದು ರೈತರ ಕಾನೂನುಬದ್ಧ ಹಕ್ಕಾಗುತ್ತದೆ.

ಕಾಯ್ದೆಬದ್ಧವಾದ ಎಂಎಸ್‌ಪಿಯನ್ನು ಭರಿಸಲು ಸಾಧ್ಯವೇ? ಎಂಎಸ್‌ಪಿಗೆ ₹14 ಲಕ್ಷ ಕೋಟಿಯಷ್ಟು ಬೃಹತ್ ಮೊತ್ತ ಬೇಕಾಗುತ್ತದೆ ಎಂದು ಕೆಲವರು ಉದ್ದೇಶಪೂರ್ವಕವಾಗಿ ತಪ್ಪು ಲೆಕ್ಕ ಹಾಕುತ್ತಿದ್ದಾರೆ. ಪ್ರತಿ ಬೆಳೆಯ ಎಲ್ಲ ಉತ್ಪನ್ನಗಳನ್ನೂ ಸರ್ಕಾರವೇ ಖರೀದಿಸಬೇಕಾಗುತ್ತದೆ ಎಂದು ಪರಿಗಣಿಸಿದರೆ ಮಾತ್ರ ಇಷ್ಟು ದೊಡ್ಡ ಮೊತ್ತ ಬೇಕಾಗುತ್ತದೆ. ಆದರೆ, ಇಲ್ಲಿ ರೈತರ ಬೇಡಿಕೆ ಅದು ಅಲ್ಲವೇ ಅಲ್ಲ. ಹಾಗಾಗಿ, ಸರ್ಕಾರವು ಉತ್ಪನ್ನಗಳ ಖರೀದಿಗೆ ವ್ಯಯಿಸಿದ ಹಣ ಮತ್ತು ಮಾರುಕಟ್ಟೆಯಲ್ಲಿ ಅದನ್ನು ಮಾರಿದ ದರದ ನಡುವಣ ವ್ಯತ್ಯಾಸವಷ್ಟೇ ಸರ್ಕಾರದ ವಾಸ್ತವಿಕ ವೆಚ್ಚವಾಗುತ್ತದೆ. ಮಾರುಕಟ್ಟೆ ದರವು ಎಂಎಸ್‌ಪಿಗಿಂತ ಕಡಿಮೆಯಾದಾಗ ಮಾತ್ರ ಸರ್ಕಾರದ ಮಧ್ಯಪ್ರವೇಶ ಬೇಕಾಗುತ್ತದೆ.

15 ಬೆಳೆಗಳ ಕಾಯ್ದೆಬದ್ಧ ಎಂಎಸ್‌ಪಿಗೆ ಒಟ್ಟು ಎಷ್ಟು ವೆಚ್ಚವಾಗುತ್ತದೆ ಎಂಬುದನ್ನು 2022–23ರ ದರದಲ್ಲಿ ನಾವು ಲೆಕ್ಕ ಹಾಕಿದ್ದೇವೆ. ಎಲ್ಲ ಬೆಳೆಗಳನ್ನು ಸೇರಿಸಿ ಎಂಎಸ್‌ಪಿಗಿಂತ ಕಡಿಮೆಗೆ ಮಾರಾಟವಾದ ಅಂತರವನ್ನು ಭರಿಸಲು ಬೇಕಾಗಿದ್ದುದು ₹26,469 ಕೋಟಿ. ಭಾಗಶಃ ವೆಚ್ಚದ ಆಧಾರದಲ್ಲಿ ಸರ್ಕಾರ ಘೋಷಿಸಿದ ಎಂಎಸ್‌ಪಿ ದರವನ್ನು ಇರಿಸಿಕೊಂಡು ಈ ಲೆಕ್ಕ ಹಾಕಲಾಗಿದೆ. ಈಗಿನ ದರದಲ್ಲಿ, ಕಾನೂನುಬದ್ಧ ಎಂಎಸ್‌ಪಿಯು ಕೇಂದ್ರದ ಬಜೆಟ್‌ನ ಶೇ 0.5ರಷ್ಟಾಗುತ್ತದೆ. ರೈತರು ಬೇಡಿಕೆ ಇರಿಸಿರುವ ದರವನ್ನೇ ನೀಡಿದರೂ ಒಟ್ಟು ಪ್ರಮಾಣವು ಬಜೆಟ್‌ನ ಶೇ 4.2ರಷ್ಟಾಗುತ್ತದೆ. ಒಟ್ಟು ದೇಶಿ ಉತ್ಪನ್ನದ ಶೇ 0.6ರಷ್ಟಾಗುತ್ತದೆ. ಕೃಷಿಕರ ಕುಟುಂಬಗಳಿಗೆ ದೊರೆಯುವ ಹೆಚ್ಚುವರಿ ವರಮಾನದಿಂದ ಅವರ ಖರೀದಿ ಸಾಮರ್ಥ್ಯದ ಏರಿಕೆಯು ಅರ್ಥವ್ಯವಸ್ಥೆಯ ಸಕಾರಾತ್ಮಕ ಬೆಳವಣಿಗೆಗೆ ಕಾರಣವಾಗುತ್ತದೆ. ಹೀಗಾಗಿ, ಎಂಎಸ್‌ಪಿ ನೀಡಿಕೆಗೆ ಬಲವಾದ ಸಮರ್ಥನೆಯೇ ದೊರೆಯುತ್ತದೆ. ಈಗ ಇದು ರಾಜಕೀಯ ಇಚ್ಛಾಶಕ್ತಿಯ ವಿಚಾರ ಮಾತ್ರ.



ಲೇಖಕರು: ಕವಿತಾ– ಅಲಯನ್ಸ್ ಫಾರ್ ಸಸ್ಟೈನೆಬಲ್ ಆ್ಯಂಡ್ ಹೋಲಿಸ್ಟಿಕ್ ಅಗ್ರಿಕಲ್ಚರ್ (ಆಶಾ) ಸಂಸ್ಥೆಯ ಸಹ ಸಂಚಾಲಕಿ. ಕಿರಣ್ ಕುಮಾರ್– ರೈತು ಸ್ವರಾಜ್ಯ ವೇದಿಕಾದ ಸಹಸಂಸ್ಥಾಪಕ. ಯೋಗೇಂದ್ರ ಯಾದವ್– ಸ್ವರಾಜ್ ಇಂಡಿಯಾ ಸದಸ್ಯ

ಚುರುಮುರಿ



ಸಂಕ್ರಾಂತಿ ಫಲಗಳು

● ಲಿಂಗರಾಜು ಡಿ.ಎಸ್.

2025ರ ಮಕರ ಸಂಕ್ರಾಂತಿಯ ಪ್ರಭಾವದಿಂದ ನಾಡು ಮಿಶ್ರ ಫಲಿತಾಂಶಗಳನ್ನು ಹೊಂದಿರಲಿದೆ. ಸಂಕ್ರಾಂತಿ ಪುರುಷನು ಕೈಯಲ್ಲಿ ಖಡ್ಗ ಹಿಡಿದು ತೆರಳುತ್ತಿರುವುದರಿಂದ ಅಂತರ್ಯುದ್ಧ ಭೀತಿ. ಚೀನಿ ವೈರಸ್ಸುಗಳಿಂದ ರೋಗ ಭಯವು. ರೈತರಿಗೆ ಬೆಲೆ ಕುಸಿತ, ಬೆಳೆ ಹಾನಿಯ ದುಷ್ಫಲವು. ಬ್ಯಾಂಕ್ ಬಡ್ಡಿ ದರ ಇಳಿಕೆ, ಬಸ್ ಪ್ರಯಾಣ ದರ, ದಿನಸಿ ಬೆಲೆ ಗಗನಕ್ಕೆ, ಚಿನ್ನ-ಬೆಳ್ಳಿ ತೇಜಿಯಾಗುವುವು.

ರಾಜರಿಗೆ ಸುಭಿಕ್ಷಾ ಫಲಗಳಿದ್ದರೂ ಸುಖವಿಲ್ಲ. ಟ್ರಂಪು ಚಕ್ರವರ್ತಿಗಳಿಗೆ ನೀಲಿ ಚಿತ್ರದಿಂದ ತಲೆಬೇನೆ. ರಾಜಕಾರಣಿಗಳಿಗೆ ನಿರಂತರ ಧನಲಾಭ ಮತ್ತು ಸ್ವಂತ ಅಭಿವೃದ್ಧಿಗಾಗಿ ನಿದ್ರಾನಾಶ. ರಾಜ್ಯದಲ್ಲಿ ಅಧಿಕಾರದ ಸ್ಥಿರತೆಯ ಕೊರತೆಯಿಂದ ಪಕ್ಷಗಳಲ್ಲಿ ಆಂತರಿಕವಾಗಿ ಚೇರುಪೇರು ಸಂಭವ. ಭೋಜನಕೂಟಗಳ ಶೆಡ್-ಯಂತ್ರಗಳಿಂದ ಪಕ್ಷಗಳ ಹೈಕಮಾಂಡುಗಳು ಸುಸ್ತು. ಶಾಸಕರನ್ನು ಸೆಳೆಯಲು ಪಕ್ಷಾಂತರ ಮಂತ್ರದ ಪ್ರಯೋಗ.

ಹಿಂಬಾಲಕರು, ಗುತ್ತಿಗೆದಾರರ ನಡುವೆ ಪರ್ಸೆಂಟೇಜ್ ಕಲಹ. ಕೇಂದ್ರದಿಂದ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ಫೇಲು. ಕಮಲ ಗೋತ್ರದವರಿಗೆ ನಮೋ, ಶಾ ಪ್ರಾರ್ಥನೆ ಒಳಿತನ್ನು ಉಂಟು ಮಾಡಿದರೆ ಹಸ್ತಗೋತ್ರದವರಿಗೆ ಸೋಗಾ ಮತ್ತು ರಾಗಾ ಧ್ಯಾನ ಶ್ರೇಯಸ್ಕರ.

ಜನತೆಯ ಗೋಚಾರಫಲದಲ್ಲಿ ಮಾನಸಿಕ ಶಕ್ತಿ ಹೆಚ್ಚಳ. ವೈ-ಕುಂಠ ವೇ-ಕಾದಶಿಯಲ್ಲಿ ಸ್ವರ್ಗ ದರ್ಶನಕ್ಕೆ ನೂಕುನುಗ್ಗಲು. ತಾರೆಗಳಿಗೆ ಬೇಲು ಭಾಗ್ಯ, ಜನತೆಗೆ ಟೋಲು ಬಾಧೆ. ಅತಿಥಿ ಉಪನ್ಯಾಸಕರಿಗೆ ಉದ್ಯೋಗ ನಷ್ಟ ಸಂಭವ. ಡಿಜಿಟಲ್ ಅರೆಸ್ಟ್ ಹೆಚ್ಚುವುದು. ಶ್ರಮಜೀವಿಗಳಿಗೆ ಕುಂಭಮೇಳ, ಸಂಕ್ರಾಂತಿ, ರೊಟ್ಟಿಹಬ್ಬದ ಸಂಭ್ರಮ. ರಾಜಕಾರಣಿಗಳಿಗೆ ಅಧಿಕಾರ ದೊರೆಯದ ಬೇಗುದಿ.

ಸರ್ಕಾರಿ ನೌಕರರ ಗುರುಬಲ ಅಮೋಘವಾಗಿದ್ದು ಕನಕವರ್ಷ ಸಾಧ್ಯತೆ. ಆದರೆ ಲೋಕಾಯುಕ್ತ ಗ್ರಹಗಳಿಂದ ದಾಳಿಯ ಭಯ ಕಾಡಲಿದೆ. ಸಾಲ-ಸೋಲುಗಳ ನಡುವೆ ನಗುವನ್ನು ಮರೆಯದವರಿಗೆ ಸುಖನಿದ್ರಾ ಪ್ರಾಪ್ತಿರಸ್ತು.

ಸಂಗತ

ಮಾಹಿತಿ ಹೆಕ್ಕುವ 'ಡಿಜಿಟಲ್ ಪುಸ್ತಕ'

ಸಾಮಾಜಿಕ ಜಾಲತಾಣಗಳ ಸಾಧಕ, ಬಾಧಕಗಳನ್ನು ಅರಿಯದೆ ಅವುಗಳನ್ನು ಬಳಸುವುದು ಮಕ್ಕಳ ಹಕ್ಕು ಮತ್ತು ಖಾಸಗಿತನಕ್ಕೆ ಧಕ್ಕೆ ತರುತ್ತದೆ

● ಡಾ. ಕೆ.ಎಸ್.ಚೈತ್ರಾ

ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ ಕುರಿತ ಕರಡು ನಿಯಮಾವಳಿಯನ್ನು ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆ ಮಾಡಿದೆ. ಇದರ ಪ್ರಕಾರ, ಮಕ್ಕಳ ಖಾಸಗಿತನ ಹಾಗೂ ಅವರ ಹಕ್ಕುಗಳನ್ನು ರಕ್ಷಿಸುವ ದಿಸೆಯಲ್ಲಿ, 18 ವರ್ಷದ ಒಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆಯಲು ಪೋಷಕರ ಸಮ್ಮತಿ ಬೇಕಾಗುತ್ತದೆ. ಪೋಷಕರೆಂದು ಗುರುತಿಸಲಾದ ವ್ಯಕ್ತಿಯು ವಯಸ್ಕರೇ ಅಲ್ಲವೇ ಎಂಬುದನ್ನು ಪರಿಶೀಲಿಸಲು ಸೂಕ್ತ ವ್ಯವಸ್ಥೆ ರೂಪಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ. ಈ ಕುರಿತು ಸಾರ್ವಜನಿಕರಿಗೆ ಆಕ್ಷೇಪ ಇದ್ದಲ್ಲಿ ಫೆ. 18ರ ಒಳಗೆ ಸಲ್ಲಿಸಬಹುದಾಗಿದೆ.

ಸಾಮಾಜಿಕ ಜಾಲತಾಣಗಳು ಪರಸ್ಪರ ಸಂಪರ್ಕ, ಸಾಮಾಜಿಕ ಜಾಗೃತಿ, ಸಮಾನಮನಸ್ಕರ ಭೇಟಿ, ವಿವಿಧ ಕ್ಷೇತ್ರಗಳ ಪರಿಣತರ ಪರಿಚಯ ಇವೆಲ್ಲಕ್ಕೂ ಉತ್ತಮ ಮಾರ್ಗ. ಬಾಲ್ಯದಿಂದಲೇ ತಂತ್ರಜ್ಞಾನದಲ್ಲಿ ಪರಿಣತರಾಗಿರುವ ಮಕ್ಕಳಿಗೆ ಇದು ಆಕರ್ಷಕ ಎನಿಸುವುದರಲ್ಲಿ ಸಂಶಯವೇ ಇಲ್ಲ. ಆದರೆ, ಸಾಮಾಜಿಕ ಜಾಲತಾಣಗಳನ್ನು ಹೇಗೆ, ಯಾವಾಗ, ಎಲ್ಲಿ ಬಳಸಬೇಕು ಎನ್ನುವ ವಿವೇಕ ಮಕ್ಕಳಿಗೆ ಇರುವುದಿಲ್ಲ.

ಭಾರತದಲ್ಲಿ 2022ರಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗದ ವತಿಯಿಂದ ನಡೆದ ಸಮೀಕ್ಷೆಯ ಪ್ರಕಾರ, 9 ವರ್ಷದಿಂದ 13 ವರ್ಷದವರೆಗಿನ ನಗರವಾಸಿ ಮಕ್ಕಳು ದಿನಕ್ಕೆ ಮೂರಕ್ಕಿಂತ ಹೆಚ್ಚು ಗಂಟೆ ಸಾಮಾಜಿಕ ಜಾಲತಾಣಗಳಲ್ಲಿ ಕಳೆಯುತ್ತಿದ್ದಾರೆ. 10 ವರ್ಷದ ಮಕ್ಕಳು ಈಗಾಗಲೇ ತಮ್ಮದೇ ಖಾತೆಯನ್ನು ಹೊಂದಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಎಲ್ಲವೂ ಆನ್‌ಲೈನ್ ಪದ್ಧತಿಗೆ ಬದಲಾದಾಗ, ಸ್ಮಾರ್ಟ್‌ಫೋನ್‌ಗಳ ಬಳಕೆ ಅನಿವಾರ್ಯವಾಗಿ, ಸಾಮಾಜಿಕ ಜಾಲತಾಣಗಳ ಬಳಕೆ ಮಿತಿಮೀರಿತು.

ವೈಯಕ್ತಿಕ ಖಾತೆ ತೆರೆಯಲು ವಯೋಮಿತಿ ಇದ್ದರೂ ಬಹಳಷ್ಟು ಮಕ್ಕಳು ತಂದೆ-ತಾಯಿಯ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿದ್ದಾರೆ. ಇದು ಅವರ ಶೈಕ್ಷಣಿಕ, ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಪ್ರಗತಿಗೆ ಹಾನಿಯನ್ನುಂಟು ಮಾಡುತ್ತಿದೆ ಎಂಬುದು ಬೆಳಕಿಗೆ ಬಂದಿತ್ತು. ಅನಾಮಧೇಯ ನಕಲಿ ಖಾತೆಯಿಂದ ತೊಂದರೆ, ಚಾರಿತ್ರ್ಯವಧೆಯಾಗುವ ಸೈಬರ್ ಬುಲ್ಲಿಯಿಂಗ್ ಕೂಡ ಬಹು ಅಪಾಯಕಾರಿ. ಹಾಗಾಗಿ, ಮಕ್ಕಳಿಗೆ ಇಂಟರ್ನೆಟ್ ಡಿಅಡಿಕ್ಷನ್ ಸೆಂಟರ್‌ಗಳನ್ನು ಸ್ಥಾಪಿಸಬೇಕು. ಜೊತೆಗೆ ಶಾಲೆ ಮತ್ತು ಕಾಲೇಜುಗಳಲ್ಲಿ ಈ ವಿಷಯದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸೂಚಿಸಲಾಗಿತ್ತು.

ಸಾಮಾಜಿಕ ಜಾಲತಾಣಗಳಲ್ಲಿ ಪ್ರವೇಶ ಎಂದರೆ ನಮ್ಮ ಬದುಕಿಗೆ ಇತರರು ಪ್ರವೇಶಿಸಲು ಅನುಮತಿ ನೀಡಿದ ಹಾಗೆ! ಖಾತೆ ತೆರೆಯುವ ಮುನ್ನ ಅಲ್ಲಿನ 'ನಿಯಮಗಳಿಗೆ ಬದ್ಧರಾಗಿರುತ್ತೇವೆ' ಎನ್ನುವ ಷರತ್ತನ್ನು ಒಪ್ಪಬೇಕಾಗುತ್ತದೆ. ಇದರಿಂದಾಗಿ, ಬಳಸುವ ಖಾತೆ ಖಾಸಗಿಯದ್ದಾಗಿದ್ದರೂ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವ ಹಕ್ಕು ಸಹಜವಾಗಿಯೇ ಕಂಪನಿಗೆ ಸಿಗುತ್ತದೆ. ಅಲ್ಲಿ ನಾವು ಹಾಕುವ ಪೋಸ್ಟ್, ಕಾಮೆಂಟ್ ಎಲ್ಲವೂ ಡಿಜಿಟಲ್‌ಲೋಕದ ಹೆಜ್ಜೆಗಳು. ಕಂಪನಿಗಳು ಇದರಿಂದ ಹೆಸರು, ವಿಳಾಸ, ಹುಟ್ಟಿದ ದಿನಾಂಕ, ಫೋಟೊ, ವಿಡಿಯೊ, ಶಾಲಾ- ಕಾಲೇಜು ಇವೆಲ್ಲದರ ಜೊತೆಗೆ ಆಸಕ್ತಿ, ಸ್ನೇಹಿತ ವರ್ಗ, ಓಡಾಡಿದ ಸ್ಥಳ, ಖರೀದಿಸುವ ವಸ್ತುಗಳು, ಆಹಾರ ಪದ್ಧತಿ, ಇಷ್ಟಪಡುವ ಮನರಂಜನಾ ವಿಧಾನ, ಧಾರ್ಮಿಕ ನಂಬಿಕೆ ಇವೆಲ್ಲವುಗಳ ಮಾಹಿತಿಯನ್ನು ಪಡೆಯುತ್ತವೆ. ಮಾತ್ರವಲ್ಲ, ಇವೆಲ್ಲವನ್ನೂ ಸಮೀಕ್ಷೆ, ಸಂದರ್ಶನ, ವಿಮರ್ಶೆ, ದೂರು ಇವುಗಳಲ್ಲಿ ಬಳಸಲು ಸಾಧ್ಯವಿದೆ. ಹಾಗಾಗಿ, ಈ ಜಾಲತಾಣಗಳು ನಮ್ಮ ಬಗ್ಗೆ ಮಾಹಿತಿ ತಿಳಿಸುವ ಡಿಜಿಟಲ್ ಪುಸ್ತಕವಿದ್ದಂತೆ! ಗೊತ್ತಿಲ್ಲದೇ ಇವುಗಳನ್ನು ಬಳಸುವುದು ಮಕ್ಕಳ ಹಕ್ಕು ಮತ್ತು ಖಾಸಗಿತನಕ್ಕೆ ಧಕ್ಕೆ ತರುತ್ತದೆ.



ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಮಕ್ಕಳ ಸಾಮಾಜಿಕ ಜಾಲತಾಣ ಬಳಕೆಗೆ ವಯಸ್ಸಿನ ಮಿತಿಯನ್ನು ವಿಧಿಸಲಾಗಿದೆ. ಸದ್ಯಕ್ಕೆ ಭಾರತದಲ್ಲಿ 13 ವರ್ಷ ಮೇಲ್ಪಟ್ಟ ಮಕ್ಕಳು ಸೋಷಿಯಲ್ ಮೀಡಿಯಾದಲ್ಲಿ ಖಾತೆಗಳನ್ನು ಕ್ಷಣಮಾತ್ರದಲ್ಲಿ ತೆರೆಯಬಹುದು. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಸುರಕ್ಷತೆ ಕಾಯ್ದುಕೊಳ್ಳುವುದು ಗಂಭೀರ ಸಮಸ್ಯೆಯಾಗಿರುವುದರಿಂದ ಖಾತೆ ತೆರೆಯಲು ವಯೋಮಿತಿ ಹೆಚ್ಚಿಸಬೇಕು ಮತ್ತು ಪೋಷಕರ ಸಮ್ಮತಿ ಬೇಕು ಎನ್ನುವುದು ಅನೇಕರ ವಾದವಾಗಿತ್ತು. ಆದರೆ ಈ ರೀತಿ ನಿರ್ಬಂಧ ಹೇರುವುದು ಸರಿಯೇ, ಅದು ಪ್ರಾಯೋಗಿಕವೇ ಎನ್ನುವ ಪ್ರಶ್ನೆಯೂ ಮೂಡುತ್ತದೆ.

ಇಂದಿನ ಮಕ್ಕಳು ತಂತ್ರಜ್ಞಾನ ಬಳಕೆಯಲ್ಲಿ ನಿಪುಣರು. ಆಧುನಿಕ ಆ್ಯಪ್‌ಗಳು ಮತ್ತು ವಿಧಾನಗಳಿಂದ ಸಾಮಾಜಿಕ ಜಾಲತಾಣಗಳನ್ನು ಮುಚ್ಚಿಡಬಹುದಾದರೂ ಅದರ ಬಳಕೆಗೆ ಹಿರಿಯರ ಅನುಮತಿ ಬೇಕೆಂದಾಗ, ಮಕ್ಕಳಿಗೆ ಅದರ ಬಗ್ಗೆ ಆಕರ್ಷಣೆ ಹೆಚ್ಚುತ್ತದೆ. ಹೇಗೋ ಮಾಡಿ ಇನ್ನಿತರ ಮಾರ್ಗ ಕಂಡುಕೊಳ್ಳುತ್ತಾರೆ. ಹಾಗಾಗಿ, ಎಲ್ಲವನ್ನೂ ಯೋಚಿಸಿ ಪ್ರಾಯೋಗಿಕವಾಗಿ ಸಾಧ್ಯವಾಗುವ ಮಾರ್ಗವನ್ನು ಅನುಸರಿಸಬೇಕು ಎಂಬುದು ಹಲವರ ವಾದ.

ಮಕ್ಕಳ ವಯಸ್ಸಿಗೆ ಸೂಕ್ತವಾದಂತಹ ಜಾಲತಾಣಗಳ ನಿರ್ಮಾಣ, ಡಿಜಿಟಲ್ ಸಾಕ್ಷರತೆಯ ಬಗ್ಗೆ ಶಿಕ್ಷಣ, ಸಮಯದ ಮಿತಿ, ಜಾಲತಾಣಗಳಲ್ಲಿ ನೋಡುವ ವಿಷಯದ ಕುರಿತು ಫಿಲ್ಟರ್ ಮತ್ತು ಸುರಕ್ಷತೆ ಕುರಿತು ಮಕ್ಕಳಿಗೆ ಮನೆ, ಶಾಲೆಗಳಲ್ಲಿ ಮಾರ್ಗದರ್ಶನ ಸಿಗಬೇಕು. ಹಾಗಾಗಿ, ಪೋಷಕರು ಸಾಮಾಜಿಕ ಜಾಲತಾಣಗಳ ಬಳಕೆಗೆ ಅನುಮತಿ ನೀಡುವುದು, ಬಳಕೆಯ ಮೇಲೆ ಕಣ್ಣಿಡುವುದು ಸರಿ. ಅದರೊಂದಿಗೇ ಸಮರ್ಥ, ಸುರಕ್ಷಿತ ಬಳಕೆ, ಸಾಧಕ ಬಾಧಕಗಳ ಬಗ್ಗೆ ಪರಿಣತರಿಂದ ಅರಿವು ಮೂಡಿಸುವ ಕೆಲಸ ಅವಶ್ಯವಾಗಿ ನಡೆಯಬೇಕು.

ವಾಚಕರ ವಾಣಿ

'ನಮ್ಮ ಬಸ್ಸು, ನಮ್ಮ ಸಂಸ್ಥೆ' ಭಾವ ಮೂಡಿಸಿ

ಮೈಸೂರಿನಲ್ಲಿ ನಡೆಯಲಿರುವ ನನ್ನ ಮಿತ್ರನ ಮದುವೆಗೆ ಬಂಧು-ಬಳಗ ಮತ್ತು ಗೆಳೆಯರನ್ನು ಬೆಂಗಳೂರಿನಿಂದ ಕರೆದೊಯ್ಯಲು ಕೆಎಸ್‌ಆರ್‌ಟಿಸಿಯ ಸಾಮಾನ್ಯ ಬಸ್ಸನ್ನು (ರಾಜಹಂಸ, ವೋಲ್ವೊದ ದರ ಕೇಳಿದರೆ ಬವಳಿಯೇ ಬಂದೀತು) ಒಂದು ದಿನಕ್ಕೆ ಕಾಯ್ದಿರಿಸಲು ವಿಚಾರಿಸಿದಾಗ, ಕಿಲೊಮೀಟರ್‌ಗೆ ನಿಗದಿತ ದರ, ಜಿಎಸ್‌ಟಿ, ಟೋಲ್ ಸೇರಿದಂತೆ ಸರಿಸುಮಾರು ₹ 40 ಸಾವಿರ ಆಗುತ್ತದೆ ಎಂಬ ಮಾಹಿತಿ ಲಭಿಸಿತು. ಅಷ್ಟು ಹಣ ಭರಿಸಲಾಗದ ಮಿತ್ರ ಖಾಸಗಿ ಸಾರಿಗೆಯವರಲ್ಲಿ ವಿಚಾರಿಸಿದಾಗ, ಎಲ್ಲವನ್ನೂ ಒಳಗೊಂಡಂತೆ ₹ 25 ಸಾವಿರ ಆಗುತ್ತದೆ ಎಂದು ತಿಳಿಸಿದರು. ಬೆರಳೆಣಿಕೆಯಷ್ಟು ವಾಹನಗಳಿರುವ ಖಾಸಗಿಯವರ ದರ ಕಡಿಮೆ ಇದ್ದು, ಸಾವಿರಾರು ವಾಹನಗಳಿರುವ ಸರ್ಕಾರಿ ನಿಗಮಗಳಲ್ಲಿ ದರ ಹೆಚ್ಚೇಕೆ?

ಸಾರಿಗೆ ನಿಗಮಗಳು ಜನಸ್ನೇಹಿ ಆಗಿರಬೇಕೇ ವಿನಾ ಜನರನ್ನು ಕಿತ್ತು ತಿನ್ನುವಂತೆ ಆಗಬಾರದು. ಸರ್ಕಾರದ ಸೇವೆ ದುಬಾರಿ ಆಗಿಸುವ ಮೂಲಕ ಖಾಸಗಿಯವರತ್ತ ಜನ ಮುಖಮಾಡುವ ಅನಿವಾರ್ಯ ಸ್ಥಿತಿ ತಂದೊಡ್ಡಿದ್ದು ತರವಲ್ಲ. ದರ ನಿಗದಿ ಮಾಡುವ ಮುನ್ನ ಸರಿಯಾಗಿ ಯೋಚಿಸಲಿ. ಜನರಿಗೆ ನಮ್ಮ ಬಸ್ಸು, ನಮ್ಮ ಸಂಸ್ಥೆ ಎಂಬ ಭಾವ ಮೂಡುವಂತಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸಂ...ಕ್ರಾಂತಿ!
ಪ್ರತಿ ಹಬ್ಬ ಬಂದಾಗೆಲ್ಲ
ಗಗನಕ್ಕೆ ಏರುತ್ತದೆ ದರ
ಹೂ, ಹಣ್ಣು,
ತರಕಾರಿಯದೆಲ್ಲ,
ಅದಕ್ಕೆ ಹೊರತಲ್ಲ
ಸಂಕ್ರಾಂತಿಯ
ಎಳ್ಳು- ಬೆಲ್ಲ!

ಮ.ಗು.ಬಸವಣ್ಣ, ಮೈಸೂರು

ಅನಾಹುತ ತಡೆಗೆ ನಡೆಯಲಿ ಚಿಂತನೆ

ವಿಶ್ವದ ದೊಡ್ಡಣ್ಣ ಎಂಬ ಹೆಗ್ಗಳಿಕೆಯನ್ನು ಹೊಂದಿರುವ ಅಮೆರಿಕದ ಲಾಸ್ ಏಂಜಲೀಸ್‌ನ ಪೆಸಿಫಿಕ್ ಪ್ಯಾಲಿಸೈಡ್ಸ್ ಹಾಗೂ ಈಟನ್ ಕೆಯಾನ್ ಪ್ರದೇಶಗಳಲ್ಲಿ ಪ್ರಬಲವಾಗಿ ಉರಿಯುತ್ತಿರುವ ಕಾಳ್ಗಿಚ್ಚಿನಿಂದ ನಾವೆಲ್ಲಾ ಪಾಠ ಕಲಿಯಬೇಕಿದೆ. ಯಾವುದೇ ದೇಶ ಎಷ್ಟೇ ಬಲಿಷ್ಠವಾಗಿರಲಿ, ಎಷ್ಟೇ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿರಲಿ, ಏನೆಲ್ಲಾ ಸುರಕ್ಷಾ ಕ್ರಮಗಳನ್ನು ಮುಂಚಿತವಾಗಿ ಅಳವಡಿಸಿಕೊಂಡಿರಲಿ, ಪ್ರಕೃತಿಯ ರುದ್ರಾವತಾರದ ಮುಂದೆ ಎಲ್ಲವೂ ಶೂನ್ಯ ಎಂಬುದು ಇದರಿಂದ ತಿಳಿಯುತ್ತದೆ.

ಅಮೆರಿಕವು ವಾತಾವರಣಕ್ಕೆ ಅತಿಹೆಚ್ಚು ವಿಷಕಾರಿ ಅನಿಲಗಳನ್ನು ಹೊರಸೂಸುತ್ತಾ ಜಾಗತಿಕ ತಾಪಮಾನ ಏರಿಕೆಯಲ್ಲಿ ಬಹುದೊಡ್ಡ ಪಾಲನ್ನು ಹೊಂದಿದೆ. ಅರಣ್ಯ ಸಂಪತ್ತು ಹಾಗೂ ಭವಿಷ್ಯದಲ್ಲಿ ಮಾನವ ಜನಾಂಗವನ್ನು ಕಾಪಾಡಿಕೊಳ್ಳಲು ಮತ್ತು ಕಾಳ್ಗಿಚ್ಚಿನಂತಹ ಅನಾಹುತಗಳನ್ನು ತಡೆಗಟ್ಟಲು ಜಾಗತಿಕ ಮಟ್ಟದಲ್ಲಿ ಚಿಂತನೆ ನಡೆಸಿ, ಅದನ್ನು ಅಳವಡಿಸಿಕೊಳ್ಳಲು ಮುಂದಾಗಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಬೇಕಿದೆ ಸಹಬಾಳ್ವೆಯ ಸಂಕ್ರಮಣ

'ಸಮೃದ್ಧಿ ಬರಲಿಲ್ಲ– ಸಂಪ್ರದಾಯ ಬಿಡಲಿಲ್ಲ' ಎಂಬ ಶೀರ್ಷಿಕೆಯಡಿ ಪ್ರಕಟವಾದ ದಶಕಗಳ ಹಿಂದಿನ ಸುದ್ದಿಯು (50 ವರ್ಷಗಳ ಹಿಂದೆ, ಜ. 13) ಇಂದಿಗೂ ಪ್ರಸ್ತುತವಾಗಿದೆ. ಆಹಾರ ಪದಾರ್ಥಗಳ ಬೆಲೆ ಅದರಲ್ಲೂ ಸಂಕ್ರಾಂತಿ ಹಬ್ಬಕ್ಕೆ ಅಗತ್ಯವಾದ ಎಳ್ಳು, ಬೆಲ್ಲ, ಕಬ್ಬು ಸೇರಿದಂತೆ ಎಲ್ಲವುಗಳ ಬೆಲೆಯೂ ಏರಿರುವುದು, ಹಬ್ಬದ ಸಂದರ್ಭದಲ್ಲಿ ಅತಿಯಾಗಿ ಬೆಲೆ ಏರಿಸುವ ಚಾಳಿ ಅಂದೂ ಇತ್ತು ಇಂದೂ ಇದೆ ಎಂಬುದನ್ನು ತಿಳಿಸುತ್ತದೆ. ಹಿಂದಿನಂತೆ ಉತ್ತಮ ಗುಣಮಟ್ಟದ ಎಳ್ಳು, ಬೆಲ್ಲ ಮಾರುಕಟ್ಟೆಯಲ್ಲಿ ಲಭ್ಯವಿಲ್ಲವಾದರೂ ಬೆಲೆ ಮಾತ್ರ ನೂರಾರು ಪಟ್ಟು ಹೆಚ್ಚಿದೆ! ಮನುಷ್ಯನ ದೈನಂದಿನ ಜೀವನದಲ್ಲಿ ಶಾಂತಿ, ಸಹಬಾಳ್ವೆ, ಸಹನೆಯ ಸಂಕ್ರಮಣ ಯಾವತ್ತೂ ಬೇಕಿದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ, ಶಿವಮೊಗ್ಗ

ಇ– ಖಾತೆ: ಪ್ರಶಂಸನೀಯ ಕ್ರಮ

ವಾಣಿಜ್ಯ, ವ್ಯವಸಾಯ ಹಾಗೂ ನಗರ ಆಸ್ತಿಗಳಿಗೆ ಇ–ಖಾತೆ ಒದಗಿಸಲು ಮಾಡಿರುವ ವ್ಯವಸ್ಥೆ ನಿಜಕ್ಕೂ ಪ್ರಶಂಸನೀಯ. ನಮ್ಮ ರೈತರು ಹಾಗೂ ಮಧ್ಯಮ ವರ್ಗದ ಜನರಿಗೆ ಇದು ಭದ್ರತೆ ಒದಗಿಸುವುದರ ಜೊತೆಗೆ ಅವರ ಮೇಲಾಗುವ ಶೋಷಣೆಯನ್ನು ತಪ್ಪಿಸುತ್ತದೆ. ಇದರ ಪ್ರಯೋಜನವನ್ನು ಎಲ್ಲರೂ ಪಡೆದುಕೊಳ್ಳಬೇಕು. ಆದರೆ ಮಧ್ಯವರ್ತಿಗಳು ಇದನ್ನು ದುರುಪಯೋಗ ಪಡಿಸಿಕೊಳ್ಳದಂತೆ ಎಚ್ಚರಿಕೆ ವಹಿಸಬೇಕು. ಇ-ಖಾತೆಯಿಂದಾಗುವ ಪ್ರಯೋಜನಗಳ ಬಗ್ಗೆ ಇನ್ನಷ್ಟು ಪ್ರಚಾರ ಕೊಡುವುದು ಒಳ್ಳೆಯದು. ಕಂದಾಯ ಇಲಾಖೆಯು ಸ್ವಲ್ಪ ದಿನಗಳ ಮಟ್ಟಿಗೆ ಇ- ಖಾತೆಗೆ ಪ್ರತ್ಯೇಕ ವಿಭಾಗವನ್ನು ರಚಿಸುವ ಬಗ್ಗೆ ಚಿಂತನೆ ನಡೆಸಲಿ.

ಜಿ.ಪಿ.ದಯಾನಂದ, ಬೆಂಗಳೂರು

ಮಳೆನೀರು ಸಂಗ್ರಹ: ಬೇಕು ಜಲಸಾಕ್ಷರತೆ

ನದಿ ಜೋಡಣೆ ಯೋಜನೆಗಳಿಂದ ಆಗುವ ದೂರಗಾಮಿ ಪರಿಣಾಮಗಳ ಬಗ್ಗೆ ಎಚ್ಚರ ವಹಿಸಬೇಕೆಂದು ಎಚ್.ಎಸ್.ಮಂಜುನಾಥ ತಿಳಿಸಿದ್ದಾರೆ (ಸಂಗತ, ಜ. 13). ನದಿಗಳ ಜೋಡಣೆಯಿಂದ ನೀರಿನ ಸಮಸ್ಯೆ ನೀಗುವುದಕ್ಕಿಂತ ಪರಿಸರಕ್ಕೆ ಹಾನಿಯಾಗುವುದೇ ಹೆಚ್ಚು. ಅತಿ ಕಡಿಮೆ ವೆಚ್ಚದಲ್ಲಿ ಪರಿಸರಸ್ನೇಹಿಯಾದ, ಉಚಿತವಾಗಿ, ಯಥೇಚ್ಛವಾಗಿ ದೊರೆಯುವ ಮಳೆನೀರನ್ನು ಸಂಗ್ರಹಿಸಿ, ಸಂರಕ್ಷಿಸಿ, ಜಾಣ್ಮೆಯಿಂದ ಬಳಸಿದರೆ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಬಹುದು. ಮಳೆನೀರನ್ನು ಮನೆಗಳ ತಾರಸಿ ಮೇಲೆ, ಕೃಷಿ ಹೊಂಡದಲ್ಲಿ, ಕೆರೆಗಳಲ್ಲಿ ಸಂಗ್ರಹಿಸಿ ಬಳಸುವ ಜಲ ಸಾಕ್ಷರತೆ ಬೇಕಾಗಿದೆ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕೊಕ್ಕೊ ದೇಸೀ ಆಟಕ್ಕೆ ವಿಶ್ವಕಿರೀಟದ ಮೆರುಗು



ಪ್ರಜಾವಾಣಿ ವಾರ್ತೆ

ಭಾರತ ಕೊಕ್ಕೊ ಫೆಡರೇಷನ್ (ಕೆಕೆಎಫ್‌ಐ) ನಿರ್ವಹಿಸುತ್ತಿರುವ ಕೊಕ್ಕೊ ವಿಶ್ವಕಪ್ ಟೂರ್ನಿ ಸೋಮವಾರ ಆರಂಭವಾಗಿದ್ದು, 19ರವರೆಗೆ ದೆಹಲಿಯಲ್ಲಿ ನಡೆಯಲಿದೆ. ಈವರೆಗೆ ದೇಶೀಯ ಮಟ್ಟದಲ್ಲಿ ಚಾಂಪಿಯನ್‌ಷಿಪ್‌ಗಳು, ಖಂಡದ ವ್ಯಾಪ್ತಿಯಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಟೂರ್ನಿಗಳು ನಡೆದಿದ್ದವು. ಆದರೆ, ವಿಶ್ವಕಪ್ ಇದೇ ಮೊದಲನೆಯದ್ದು. ಹಾಗಾಗಿ, ಈ ದೇಸಿ ಕ್ರೀಡೆಯ ಇತಿಹಾಸದಲ್ಲಿ ಇದೊಂದು ಮಹತ್ವದ ಮೈಲಿಗಲ್ಲು. ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಏಕಕಾಲಕ್ಕೆ ಪಂದ್ಯಾವಳಿ ನಡೆಯುತ್ತಿರುವುದು ಮತ್ತೊಂದು ವಿಶೇಷ. ಪುರುಷರ ವಿಭಾಗದಲ್ಲಿ ಭಾರತ ಸೇರಿದಂತೆ 20 ದೇಶಗಳ ತಂಡಗಳು ಭಾಗವಹಿಸಿದ್ದರೆ, ಮಹಿಳೆಯರ ವಿಭಾಗದಲ್ಲಿ 19 ತಂಡಗಳು ಪಾಲ್ಗೊಂಡಿವೆ. ವೀಸಾ ಸಿಗದ ಕಾರಣದಿಂದ ಪಾಕಿಸ್ತಾನದ ತಂಡಗಳು ಭಾಗವಹಿಸಿಲ್ಲ.

ಪ್ರತೀಕ್ ವೈಕರ್ ಅವರು ಭಾರತದ ಪುರುಷರ ತಂಡದ ನಾಯಕರಾಗಿದ್ದರೆ, ಪ್ರಿಯಾಂಕಾ ಇಂಗ್ಳೆ ಮಹಿಳಾ ತಂಡವನ್ನು ಮುನ್ನಡೆಸುತ್ತಿದ್ದಾರೆ. ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿ ಹಲವು ಕಾರಣಗಳಿಗೆ ಜಾಗತಿಕ ಕ್ರೀಡಾ ಇತಿಹಾಸದಲ್ಲಿ ಮಹತ್ವದ್ದೆನಿಸಿದೆ.

ಕ್ರೀಡಾಳುಗಳಲ್ಲಿ ಶಿಸ್ತು, ಬದ್ಧತೆ, ಕೆಚ್ಚು, ಸ್ಪರ್ಧಾತ್ಮಕತೆ ಉತ್ತೇಜಿಸುವ ಆಟ ಕೊಕ್ಕೊ. ಭಾರತದ ಇತರ ಕ್ರೀಡೆಗಳಂತೆ ಕೊಕ್ಕೊ ಕೂಡ ಸರಳವಾದ, ದುಬಾರಿ ಅಲ್ಲದ ಮತ್ತು ಮನರಂಜನೆ ನೀಡುವಂಥ ಆಟ. ಆದರೆ, ಈ ಆಟ ಆಡಲು ದೈಹಿಕ ಕ್ಷಮತೆ ಇರಬೇಕು. ಆಟಗಾರರು ವೇಗವಾಗಿ ಓಡಬೇಕು. ಅಷ್ಟೇ ಅಲ್ಲ, ಓಡುವಾಗ ವೇಗವನ್ನು ದಿಢೀರ್ ಆಗಿ ನಿಯಂತ್ರಿಸುವುದು ಕೂಡ ಮುಖ್ಯ. ಸುಮ್ಮನೇ ಓಡುವುದಕ್ಕಿಂತಲೂ ಬಾಗುವುದು, ನೆಗೆಯುವುದು ಮತ್ತು ಬೆನ್ನಟ್ಟುವುದು, ಎದುರಾಳಿಯಿಂದ ತಪ್ಪಿಸಿಕೊಳ್ಳುವ ಕೌಶಲವೂ ಕ್ರೀಡಾಳುಗಳಲ್ಲಿರಬೇಕು. ಈ ಆಟದ ವೈಶಿಷ್ಟ್ಯ ಈ ಕೌಶಲಗಳಲ್ಲೇ ಅಡಕವಾಗಿದೆ.

ಗ್ರಾಮೀಣ ಕ್ರೀಡೆ ಎಂದೇ ಹೆಸರಾಗಿದ್ದ ಇದು, ಶಾಲೆಯ ಅಂಗಳಗಳಲ್ಲಿ, ಬೀದಿಗಳಲ್ಲಿ ಆಡುವ ಆಟವಾಗಿತ್ತು. ಶಾಲೆ ಕಾಲೇಜುಗಳ ಮಟ್ಟದಲ್ಲಿ ಜನಪ್ರಿಯಗೊಂಡು, ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದ ಮಟ್ಟದವರೆಗೆ ಪಂದ್ಯಗಳು ನಡೆಯತೊಡಗಿದವು. ಕ್ರಮೇಣ ರಾಜ್ಯ ತಂಡಗಳು ಹುಟ್ಟಿಕೊಂಡು, ಅನೇಕ ಪ್ರತಿಭಾವಂತರು ಬೆಳಕಿಗೆ ಬಂದರು. ಆನಂತರ ಇದು ಭಾರತದ ನೆರೆಯ ರಾಷ್ಟ್ರಗಳಿಗೆ ಹರಡಿ, ಏಷ್ಯಾದ ಹಲವು ರಾಷ್ಟ್ರಗಳಲ್ಲಿ ತಂಡಗಳು ಹುಟ್ಟಿಕೊಂಡವು. ಆಧುನಿಕ ಜಗತ್ತಿನಲ್ಲಿ ಭಾರತದ ಮಹಾರಾಷ್ಟ್ರದಲ್ಲಿ ಮೊದಲು ಪರಿಚಯವಾದ (1914) ಈ ಕ್ರೀಡೆ ವಿಶ್ವಕಪ್ ಆಯೋಜನೆಯ ಹಂತದವರೆಗೆ ತಲುಪಲು ಶತಮಾನದಷ್ಟು ಅವಧಿಯನ್ನು ತೆಗೆದುಕೊಂಡಿದೆ.

ದೇಸಿ ಕ್ರೀಡೆಯಾದ ಕೊಕ್ಕೊ ಅನ್ನು ಜಾಗತಿಕ ಕ್ರೀಡೆಯನ್ನಾಗಿ ಮಾಡುವ ದಿಸೆಯಲ್ಲಿ ಈ ವಿಶ್ವಕಪ್ ನಿರ್ಣಾಯಕ ಪಾತ್ರ ವಹಿಸಲಿದೆ. ಕೊಕ್ಕೊ ಬಗ್ಗೆ ಇದುವರೆಗೆ ಅರಿಯದ ರಾಷ್ಟ್ರಗಳು ಕೂಡ ವಿಶ್ವಕಪ್ ನಂತರ ಈ ಆಟವನ್ನು ತಮ್ಮ ದೇಶಗಳಲ್ಲಿ ಅಳವಡಿಸಿಕೊಳ್ಳಬಹುದು. ಅದರಿಂದ ಹೊಸ ಪ್ರತಿಭೆಗಳು ಹುಟ್ಟಿಕೊಂಡು, ಅಂತರರಾಷ್ಟ್ರೀಯ 'ಸ್ಟಾರ್'ಗಳು ಬೆಳಕಿಗೆ ಬರಬಹುದು ಎಂಬ ನಿರೀಕ್ಷೆ ಕ್ರೀಡಾವಲಯದಲ್ಲಿದೆ.

ಆಟದ ಬೆಳವಣಿಗೆಯ ದೃಷ್ಟಿಯಿಂದಲೂ ವಿಶ್ವಕಪ್ ಟೂರ್ನಿ ಮಹತ್ವದ್ದಾಗಿದೆ. ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್, ಒಲಿಂಪಿಕ್ಸ್ ಸೇರಿದಂತೆ ಜಾಗತಿಕ ಮಟ್ಟದ ಕ್ರೀಡಾಕೂಟಗಳಲ್ಲಿ ಈ ಕೊಕ್ಕೊಗೆ ಸ್ಥಾನ ದೊರಕಿಸಿಕೊಡುವ ಉದ್ದೇಶವೂ ಭಾರತಕ್ಕಿದೆ.


ದೆಹಲಿಯಲ್ಲಿ ಮೊದಲ ಆವೃತ್ತಿಯ ಕೊಕ್ಕೊ ವಿಶ್ವಕಪ್ ಪಂದ್ಯಗಳು ಆರಂಭವಾಗಿವೆ. ಈ ಮೂಲಕ ಭಾರತವು ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆದಿದೆ. ಭಾರತದ ಮಣ್ಣಿನ ಆಟವಾದ, ಶತಮಾನಗಳಷ್ಟು ಹಳೆಯದಾದ ಕೊಕ್ಕೊಗೆ ಜಾಗತಿಕ ಮಾನ್ಯತೆ ದೊರಕಿಸಿಕೊಡುವ ಮತ್ತು ಆಟವನ್ನು ಜನಪ್ರಿಯಗೊಳಿಸುವ ದಿಸೆಯಲ್ಲಿ ಇದು ಮಹತ್ವದ ಹೆಜ್ಜೆ. ಟೂರ್ನಿಯು ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ನಡೆಯುತ್ತಿವೆ



ವಿಶ್ವಕಪ್‌ನಲ್ಲಿ ಭಾಗವಹಿಸಿರುವ ತಂಡಗಳು

ಪುರುಷರ ವಿಭಾಗ		ಮಹಿಳೆಯರ ವಿಭಾಗ	
ಗುಂಪು ಎ	ಭಾರತ, ನೇಪಾಳ, ಪೆರು, ಬ್ರೆಜಿಲ್, ಭೂತಾನ್	ಗುಂಪು ಎ	ಭಾರತ, ಇರಾನ್, ಮಲೇಷ್ಯಾ, ದಕ್ಷಿಣ ಕೊರಿಯಾ
ಗುಂಪು ಬಿ	ದಕ್ಷಿಣ ಆಫ್ರಿಕಾ, ಘಾನಾ, ಇರಾನ್ ಅರ್ಜೆಂಟೀನಾ, ನೆದರ್ಲೆಂಡ್ಸ್	ಗುಂಪು ಬಿ	ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನ್ಯಾ, ಉಗಾಂಡಾ, ನೆದರ್ಲೆಂಡ್ಸ್
ಗುಂಪು ಸಿ	ಬಾಂಗ್ಲಾದೇಶ, ಶ್ರೀಲಂಕಾ, ದಕ್ಷಿಣ ಕೊರಿಯಾ, ಅಮೆರಿಕ, ಪೋಲೆಂಡ್	ಗುಂಪು ಸಿ	ನೇಪಾಳ, ಭೂತಾನ್, ಶ್ರೀಲಂಕಾ, ಜರ್ಮನಿ, ಬಾಂಗ್ಲಾದೇಶ
ಗುಂಪು ಡಿ	ಇಂಗ್ಲೆಂಡ್, ಜರ್ಮನಿ, ಮಲೇಷ್ಯಾ, ಆಸ್ಟ್ರೇಲಿಯಾ, ಕೆನ್ಯಾ	ಗುಂಪು ಡಿ	ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಪೋಲೆಂಡ್, ಪೆರು, ಇಂಡೊನೇಷ್ಯಾ





ಕ್ರಿಕೆಟ್ ಅಬ್ಬರದ ಮುಂದೆ ಕೊಕ್ಕೊ ಮಂಕು

ವಿದೇಶದಲ್ಲಿ ಹುಟ್ಟಿದ ಕ್ರಿಕೆಟ್ ಇಂದು ಭಾರತದ ಅತ್ಯಂತ ಜನಪ್ರಿಯ ಮತ್ತು ಪ್ರಭಾವಿ ಆಟ. ಕ್ರಿಕೆಟಿಗರು ಅಭಿಮಾನಿಗಳ ಪಾಲಿಗೆ ದೇವರಾಗಿದ್ದಾರೆ. ಆದರೆ, ನೂರಾರು ವರ್ಷಗಳ ಇತಿಹಾಸವಿರುವ, ಭಾರತದಲ್ಲಿಯೇ ಹುಟ್ಟಿದ ಕೊಕ್ಕೊ ಆಟ ಬಹಳ ಕಾಲದವರೆಗೆ ಗ್ರಾಮೀಣ ಕ್ರೀಡೆಯಾಗಿಯೇ ಉಳಿದುಬಿಟ್ಟಿತ್ತು. ಯುವಜನರಿಗೆ ಇದು ನೆಚ್ಚಿನ ಆಟವಾಗಿರಲಿಲ್ಲ. ಕ್ರಿಕೆಟ್‌ನಲ್ಲಿರುವಷ್ಟು ಹಣ ಇಲ್ಲದಿರುವುದು, ಅದರ ಪ್ರಚಾರ ಶೈಲಿ ಇತ್ಯಾದಿ ಅಂಶಗಳು ಇದಕ್ಕೆ ಕಾರಣ.

ಇಂದು ಭಾರತದಲ್ಲಿ ಒಬ್ಬ ಕ್ರೀಡಾಪಟು ಯಶಸ್ವಿ ಕ್ರಿಕೆಟ್ ಆಟಗಾರನಾಗಿ ರೂಪುಗೊಳ್ಳಲು ದುಬಾರಿ ಹಣ ವ್ಯಯಿಸಬೇಕು. ಕಡುಬಡವರು ಪ್ರತಿಭಾವಂತರಾಗಿದ್ದರೂ ಅವರು ಕ್ರಿಕೆಟ್ ಆಟದಲ್ಲಿ ಬೆಳೆಯುವುದು ಅಷ್ಟು ಸುಲಭವಲ್ಲ. ತರಬೇತಿ, ಆಯ್ಕೆ ಪ್ರಕ್ರಿಯೆ ಇತ್ಯಾದಿಗಳು ಬಡವರ ಕೈಗೆ ಎಟುಕದಂತಾಗಿವೆ. ಆದರೆ, ಕೊಕ್ಕೊ ತರಹದ ದೇಸಿ ಆಟಗಳು ಕ್ರಿಕೆಟ್‌ಗೆ ಹೋಲಿಸಿದರೆ ಹೆಚ್ಚು ಹಣ ಬೇಡುವುದಿಲ್ಲ. ಮಹಾರಾಷ್ಟ್ರದ ಸಾರಿಕಾ ಕಾಳೆ ದಿನಕ್ಕೆ ಕೇವಲ ಒಂದು ಹೊತ್ತು ಊಟ ಮಾಡಿ ನಂತರ ರಾಷ್ಟ್ರ ಮಟ್ಟದ ಆಟಗಾರ್ತಿಯಾಗಿ ಬೆಳೆದಿದ್ದರು. ಭಾರತ ಮಹಿಳಾ ಕೊಕ್ಕೊ ತಂಡದ ನಾಯಕಿ ಆಗಿ ಎರಡು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದ್ದರು. ದೆಹಲಿಯ ನಸ್ರೀನ್ ಶೇಖ್ ಕೂಡ ಬಡ ಕುಟುಂಬದವರು. ಅಪಾರ ಕಷ್ಟ ಅನುಭವಿಸಿ ಕೊಕ್ಕೊ ಆಟದಲ್ಲಿ ಉನ್ನತ ಸಾಧನೆ ಮಾಡಿದರು. ಸಾರಿಕಾ ಮತ್ತು ನಸ್ರೀನ್ ಇಬ್ಬರಿಗೂ ಅರ್ಜುನ ಪ್ರಶಸ್ತಿ ದೊರಕಿತು. ಎಷ್ಟೇ ಸಾಧನೆ ಮಾಡಿದರೂ ದೇಶಕ್ಕೆ ಕೀರ್ತಿ ತಂದರೂ ಸಣ್ಣ ಮಟ್ಟದ ಕ್ರಿಕೆಟ್ ಆಟಗಾರರಿಗೆ ಇರುವಷ್ಟು ಬೆಂಬಲ, ಜನಪ್ರಿಯತೆಯೂ ಇವರಿಗಿಲ್ಲ ಎನ್ನುವುದು ವಾಸ್ತವ.

ಇತ್ತೀಚಿನ ದಿನಗಳಲ್ಲಿ ಕೊಕ್ಕೊ ಕ್ರೀಡೆಯತ್ತ ಹೆಚ್ಚು ಯುವಜನರು ಚಿತ್ತ ಹರಿಸುತ್ತಿದ್ದಾರೆ. ಐಪಿಎಲ್ ಮಾದರಿಯ ಕೊಕ್ಕೊ ಲೀಗ್‌ಗಳೂ ನಡೆಯುತ್ತಿವೆ. ಈ ವಿಶ್ವಕಪ್ ನಂತರ ಪರಿಸ್ಥಿತಿ ಮತ್ತಷ್ಟು ಉತ್ತಮಗೊಳ್ಳಬಹುದು ಎನ್ನುವ ಆಶಾವಾದ ಇದೆ.



ದೊಡ್ಡ ಇತಿಹಾಸದ ಕ್ರೀಡೆ

ತಂಡದ ಸದಸ್ಯನಿಂದ 'ಕೋ' ಪಡೆದು ಎದುರಾಳಿ ತಂಡದ ಆಟಗಾರರನ್ನು ಬೆನ್ನಟ್ಟಿ ಮುಟ್ಟುವ ಕೊಕ್ಕೊ ಆಟ, ಭಾರತದ ಹಳ್ಳಿ ಸೊಗಡಿನ ಕ್ರೀಡೆ. ಇದರ ಮೂಲ ಯಾವುದು, ಎಲ್ಲಿ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟ. ಆದರೆ, ಈ ಆಟಕ್ಕೆ ಸಾವಿರಾರು ವರ್ಷಗಳ ಇತಿಹಾಸ ಇದೆ ಎಂದು ಹೇಳಲಾಗುತ್ತಿದೆ. ಇದು, 'ಓಡಿ ಬೆನ್ನಟ್ಟುವ' (run chase) ಆಟದ ಮತ್ತೊಂದು ರೂಪ.

ದೇಶದಲ್ಲಿ ಈ ಕ್ರೀಡೆ ಮೊದಲು ಆರಂಭಗೊಂಡಿದ್ದು ಮಹಾರಾಷ್ಟ್ರದಲ್ಲಿ. ಆಗ, ರಥದ ಮೂಲಕ ಆಡಲಾಗುತ್ತಿತ್ತು. ಆ ಕಾರಣಕ್ಕೆ ಈ ಆಟವನ್ನು 'ರಥೇರಾ' ಎಂದು ಕರೆಯಲಾಗುತ್ತಿತ್ತು.

ಕೊಕ್ಕೊಗೆ 20ನೇ ಶತಮಾನದ ಆರಂಭದಲ್ಲಿ ಹೊಸ ರೂಪ (ಎದುರಾಳಿ ತಂಡದ ಕ್ರೀಡಾಳುವನ್ನು ಓಡಿಕೊಂಡು ಬೆನ್ನಟ್ಟುವುದು) ದೊರೆಯಿತು. ಮಹಾರಾಷ್ಟ್ರದಲ್ಲಿ **1914**ರಲ್ಲಿ ಈ ಕ್ರೀಡೆಗೆ ಆಧುನಿಕ ನಿಯಮಗಳನ್ನು ರೂಪಿಸುವ ಪ್ರಯತ್ನ ನಡೆಯಿತು. ಪುಣೆಯ ಡೆಕ್ಕನ್ ಜಿಮ್ಖಾನಾ ಕ್ಲಬ್, ಕೊಕ್ಕೊ ಆಟಕ್ಕೆ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ರೂಪಿಸಿತು. ನಂತರದ ದಶಕಗಳಲ್ಲಿ ನಿಯಮಗಳು ಸುಧಾರಿಸಿ ಆಟವು ಮತ್ತಷ್ಟು ಪಕ್ವಗೊಂಡು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿತು.

ಕೊಕ್ಕೊ ನಡೆದು ಬಂದ ಹಾದಿ...

- ಮಹಾರಾಷ್ಟ್ರದ ಅಖಿಲ ಮಹಾರಾಷ್ಟ್ರ ಶಾರೀರಿಕ ಶಿಕ್ಷಣ ಮಂಡಲವು **1935**ರಲ್ಲಿ ಈ ಆಟಕ್ಕೆ ನಿರ್ದಿಷ್ಟ ಮತ್ತು ನಿಖರವಾದ ನಿಯಮಾವಳಿಗಳನ್ನು ರೂಪಿಸಿತು
- **1936**ರಲ್ಲಿ ಜಗತ್ತಿಗೆ ಈ ಕ್ರೀಡೆಯನ್ನು ಪರಿಚಯಿಸಲಾಯಿತು. ಬರ್ಲಿನ್ ಒಲಿಂಪಿಕ್ಸ್ ಸಂದರ್ಭದಲ್ಲಿ ಭಾರತದ ದೇಸಿ ಕ್ರೀಡೆಗಳಾದ ಕಬಡ್ಡಿ, ಮಲ್ಲಕಂಬ ಹಾಗೂ ಇನ್ನಿತರ ಆಟಗಳೊಂದಿಗೆ ಕೊಕ್ಕೊ ಆಟವನ್ನೂ ಪ್ರದರ್ಶಿಸಲಾಯಿತು
- **1950**ರ ಹೊತ್ತಿಗೆ ಕರ್ನಾಟಕವೂ ಸೇರಿದಂತೆ ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ, ಗುಜರಾತ್, ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೊಕ್ಕೊ ಜನಪ್ರಿಯಗೊಂಡಿತು
- **1955**ರಲ್ಲಿ ಭಾರತೀಯ ಕೊಕ್ಕೊ ಒಕ್ಕೂಟ (ಕೆಕೆಎಫ್‌ಐ) ಸ್ಥಾಪನೆಗೊಂಡಿತು
- ಅಖಿಲ ಭಾರತ ಮಟ್ಟದಲ್ಲಿ ಮೊದಲ ಕೊಕ್ಕೊ ಚಾಂಪಿಯನ್‌ಷಿಪ್ ಆಂಧ್ರಪ್ರದೇಶದ ವಿಜಯವಾಡದಲ್ಲಿ **1959-60**ರಲ್ಲಿ ನಡೆಯಿತು
- **1960-61**ರಲ್ಲಿ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ರಾಷ್ಟ್ರೀಯ ಮಹಿಳಾ ಚಾಂಪಿಯನ್‌ಷಿಪ್ ಆಯೋಜಿಸಲಾಗಿತ್ತು
- **1982**ರಲ್ಲಿ ನವದೆಹಲಿಯಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಮತ್ತೆ ಕೊಕ್ಕೊ ಆಟವನ್ನು ಜಗತ್ತಿನ ಮುಂದೆ ಪ್ರದರ್ಶಿಸಲಾಯಿತು
- **1996**ರಲ್ಲಿ ಮೊತ್ತ ಮೊದಲ ಕೊಕ್ಕೊ ಏಷ್ಯನ್ ಚಾಂಪಿಯನ್‌ಷಿಪ್ ಕೋಲ್ಕತ್ತದಲ್ಲಿ ನಡೆಯಿತು
- **1998**ರಲ್ಲಿ ಕೋಲ್ಕತ್ತದಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ಕೊಕ್ಕೊ ಚಾಂಪಿಯನ್‌ಷಿಪ್ ಜರುಗಿತು
- **2016**ರಲ್ಲಿ ಗುವಾಹಟಿಯಲ್ಲಿ ನಡೆದ ದಕ್ಷಿಣ ಏಷ್ಯನ್ ಗೇಮ್ಸ್‌ನಲ್ಲಿ ಕೊಕ್ಕೊ ಕೂಡ ಸ್ಥಾನ ಪಡೆಯಿತು
- ಭಾರತ, ಇಂಗ್ಲೆಂಡ್, ಅಮೆರಿಕ, ಪಾಕಿಸ್ತಾನ, ಜರ್ಮನಿ, ಮಲೇಷ್ಯಾ, ಇಂಡೊನೇಷ್ಯಾ, ಶ್ರೀಲಂಕಾ, ನೇಪಾಳ, ಭೂತಾನ್, ಇರಾನ್ ಸೇರಿದಂತೆ ಜಗತ್ತಿನ **25** ರಾಷ್ಟ್ರಗಳು ಕೊಕ್ಕೊ ತಂಡಗಳನ್ನು ಹೊಂದಿವೆ

ಆಧಾರ: ಒಲಿಂಪಿಕ್ಸ್‌ಡಾಟ್‌ಕಾಮ್, ಕೊಕ್ಕೊ ಚಾಂಪಿಯನ್ಸ್‌ಡಾಟ್‌ಕಾಮ್, ಪಿಟಿಐ, ಟೆಕ್ಸ್ಟ್ ಬುಕ್ ಆಫ್ ಕೊಕ್ಕೊ

(ಲೇಖಕಿ ಕವಿತಾ ವರ್ಮಾ)

ಸಿನಿ ಬಿಟ್ಸ್




ರಾಧಿಕಾ, ರಮೇಶ್ ಅರವಿಂದ್, ಆಕಾಶ್ ಶ್ರೀವತ್ಸ, ರವಿ ಕಶ್ಯಪ್

ರಮೇಶ್ 106ನೇ ಚಿತ್ರ ದೈಜಿ

ರಮೇಶ್ ಅರವಿಂದ್ ನಟನೆಯ 106ನೇ ಚಿತ್ರ, ಆಕಾಶ್ ಶ್ರೀವತ್ಸ ನಿರ್ದೇಶನದ 'ದೈಜಿ' ಚಿತ್ರದ ಮುಹೂರ್ತ ಇತ್ತೀಚೆಗೆ ಬೆಂಗಳೂರಿನ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ನಡೆಯಿತು.

'ದೈಜಿ' ಥ್ರಿಲ್ಲರ್ ಹಾರರ್ ಚಿತ್ರವಾಗಿದ್ದು ರಮೇಶ್ ಅರವಿಂದ್ ಮುಖ್ಯ ಭೂಮಿಕೆಯಲ್ಲಿದ್ದಾರೆ. ಈ ಹಿಂದೆ ರಮೇಶ್ ಅವರು ನಟಿಸಿದ್ದ 'ಶಿವಾಜಿ ಸುರತ್ಕಲ್' ಸಿನಿಮಾ ಸರಣಿಯನ್ನು ಆಕಾಶ್ ನಿರ್ದೇಶಿಸಿದ್ದರು. ಇದು ರಮೇಶ್ ಅವರ ಸಿನಿಪಯಣಕ್ಕೆ ಹೊಸ ತಿರುವು ನೀಡಿತ್ತು. ಇವರ ಕಾಂಬಿನೇಷನ್‌ನ ಮೂರನೇ ಸಿನಿಮಾ ಇದಾಗಿದೆ. ರವಿ ಕಶ್ಯಪ್ ಅವರು ಈ ಚಿತ್ರವನ್ನು ನಿರ್ಮಿಸಲಿದ್ದಾರೆ. 'ದೈಜಿ'ಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಅರ್ಥಗಳಿವೆ. ಕೊಂಕಣಿಯಲ್ಲಿ 'ದೈಜಿ' ಎಂದರೆ ರಕ್ತ ಸಂಬಂಧ. ಜಪಾನೀ ಭಾಷೆಯಲ್ಲಿ 'ದೈಜಿ' ಎಂದರೆ ಬಹಳ ಕಾಳಜಿ ವಹಿಸಬೇಕಾದ ವಿಚಾರ ಎಂದು ಚಿತ್ರತಂಡ ತಿಳಿಸಿದೆ. ಹಿಂದೆಂದೂ ಕಾಣಿಸಿಕೊಳ್ಳದಂತಹ ಪಾತ್ರದಲ್ಲಿ ರಮೇಶ್ ಅವರು ಇಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರದ ನಾಯಕಿಯಾಗಿ ರಾಧಿಕಾ ನಾರಾಯಣ್ ನಟಿಸಲಿದ್ದು, ಶ್ರೀಶ ಕುದುವಳ್ಳಿ ಛಾಯಾಚಿತ್ರಗ್ರಹಣ ಚಿತ್ರಕ್ಕಿರಲಿದೆ. ಚಿತ್ರದ ಚಿತ್ರೀಕರಣ ಶೀಘ್ರದಲ್ಲೇ ವಿದೇಶದಲ್ಲಿ ಪ್ರಾರಂಭವಾಗಲಿದೆ.



ಶ್ರೇಯಸ್‌ಗೆ ಕೀರ್ತಿ ಕೃಷ್ಣ ನಾಯಕಿ

ಶ್ರೇಯಸ್ ನಟನೆಯ 'ದಿಲ್‌ದಾರ್' ಸಿನಿಮಾದ ಚಿತ್ರೀಕರಣ ಅಂತಿಮಹಂತ ತಲುಪಿದ್ದು, ಚಿತ್ರತಂಡ ನಾಯಕಿಯನ್ನು ಪರಿಚಯಿಸಿದೆ.

ಮಧು ಗೌಡ ಗಂಗೂರ್ ನಿರ್ದೇಶನದಲ್ಲಿ ಮೂಡಿ ಬಂದಿರುವ ಈ ಸಿನಿಮಾದ ಹಾಡೊಂದರ ಚಿತ್ರೀಕರಣವಷ್ಟೇ ಬಾಕಿ ಇದೆ. ನಿರ್ದೇಶಕ ಸಿಂಪಲ್ ಸುನಿ ನಿರ್ದೇಶನದ 'ದೇವರು ರುಜು ಮಾಡಿದನು' ಸಿನಿಮಾದ ನಾಯಕಿಯಾಗಿ ಇತ್ತೀಚೆಗಷ್ಟೇ ಆಯ್ಕೆಯಾಗಿದ್ದ ಕೀರ್ತಿ ಕೃಷ್ಣ ಇದೀಗ ಮತ್ತೊಂದು ಪ್ರಾಜೆಕ್ಟ್ ಒಪ್ಪಿಕೊಂಡಿದ್ದಾರೆ. ನಟ ಶರಣ್ ಅವರ ತಂಗಿ ಉಷಾ ಕೃಷ್ಣ ಅವರ ಮಗಳಾದ ಕೀರ್ತಿ ಈ ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಡಲಿದ್ದಾರೆ.

ಯುಗಾದಿ ವೇಳೆಗೆ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಸಿದ್ಧತೆ ನಡೆಸಿದೆ. ಎಲ್ಲಾ ವರ್ಗಕ್ಕೂ ಹಿಡಿಸುವಂತೆ ಈ ಸಿನಿಮಾ ರೂಪುಗೊಂಡಿದ್ದು ಭರಪೂರ ಮನರಂಜನೆಯೂ ಇರಲಿದೆ. ಭರ್ಜರಿಯಾದ ಆ್ಯಕ್ಷನ್ ದೃಶ್ಯಗಳ ಮೂಲಕ ಶ್ರೇಯಸ್ ಪ್ರೇಕ್ಷಕರ ಮುಂದೆ ಬರಲಿದ್ದಾರೆ ಎಂದಿದೆ ಚಿತ್ರತಂಡ. ಸಾಧು ಕೋಕಿಲಾ, ಚಂದ್ರಪ್ರಭ, ಕಾರ್ತಿಕ್, ಚಿಲ್ಲರ್ ಮಂಜು ಸೇರಿದಂತೆ ಹಾಸ್ಯ ನಟರ ದಂಡೇ ಈ ಚಿತ್ರದಲ್ಲಿದೆ. ಕೆಜಿಎಫ್ ಖ್ಯಾತಿಯ ಆಂಡ್ರೂಸ್ ಅವಿನಾಶ್, ಭಜರಂಗಿ ಲೋಕಿ, ಅರ್ಪಿತ್ ಖಳ ನಟರಾಗಿ ನಟಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ 'ತಿರುಪತಿ ದೇವಾಲಯದಲ್ಲಿ ಇತ್ತೀಚೆಗೆ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ ಮಗುವಿನ ಮೃತದೇಹ ಒಯ್ಯಲು ತಿರುಪತಿ ಸರ್ಕಾರಿ ಆಸ್ಪತ್ರೆಯವರು ₹20 ಸಾವಿರ ಕೇಳಿದರು. ಅಷ್ಟೊಂದು ಹಣ ಇಲ್ಲದ ಮಗುವಿನ ತಂದೆಯು ಮೃತದೇಹವನ್ನು 90 ಕಿ.ಮೀ ದೂರದಲ್ಲಿರುವ ತಮ್ಮ ಊರಿಗೆ ಬೈಕ್‌ನಲ್ಲಿ ಕೊಂಡೊಯ್ದರು' ಎಂದು ಹೇಳಿಕೊಂಡು ಪೋಸ್ಟ್ ಮಾಡಲಾದ ವಿಡಿಯೊ ತುಣುಕೊಂದನ್ನು 'ಎಕ್ಸ್'ನಲ್ಲಿ ಹಲವರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

✓ ಘಟನೆಗೆ ಸಂಬಂಧಿಸಿದ ಪದಗಳನ್ನು ಬಳಸಿ ಇಂಟರ್‌ನೆಟ್‌ನಲ್ಲಿ ಹುಡುಕಾಟ ನಡೆಸಿದಾಗ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು 2022ರ ಏ. 26ರಂದು ಇದೇ ವಿಡಿಯೊವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು ಕಂಡು ಬಂತು. ಜೊತೆಗೆ ಆ ವಿಡಿಯೊಗೆ ಸಂಬಂಧಿಸಿ ಹಲವು ಮಾಧ್ಯಮಗಳು ಮಾಡಿದ ವರದಿಗಳೂ ಸಿಕ್ಕಿದವು. ಜೆಸವಾ ಎಂಬ 10 ವರ್ಷದ ಬಾಲಕ ತಿರುಪತಿಯ ವೆಂಕಟೇಶ್ವರ ರಾಮ್‌ನಾರಾಯಣ್ ರುಯಿಯಾ ಆಸ್ಪತ್ರೆಯಲ್ಲಿ ಯಕೃತ್ತು ಮತ್ತು ಕಿಡ್ನಿ ಸಮಸ್ಯೆಯಿಂದ ಮೃತಪಟ್ಟಿದ್ದ. ಆತನ ತಂದೆ ಶವವನ್ನು ಊರಿಗೆ ತೆಗೆದುಕೊಂಡು ಹೋಗಲು ಸರ್ಕಾರಿ ಆಂಬುಲೆನ್ಸ್‌ಗೆ ಕಾದಿದ್ದರು. ಆದರೆ, ಆಂಬುಲೆನ್ಸ್ ಬಂದಿರಲಿಲ್ಲ. ಖಾಸಗಿ ಆಂಬುಲೆನ್ಸ್‌ಗೆ ಪಾವತಿಸುವಷ್ಟು ಹಣ ಅವರಲ್ಲಿ ಇರಲಿಲ್ಲ. ಹಾಗಾಗಿ, ತನ್ನ ಬೈಕ್‌ನಲ್ಲೇ ಮಗನ ಶವವನ್ನು ಊರಿಗೆ ಕೊಂಡೊಯ್ದಿದ್ದರು. ಈಗ, ಜನವರಿ 8ರಂದು ತಿರುಪತಿಯಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೂ ಈ ವಿಡಿಯೊಗೂ ತಳಕುಹಾಕಲಾಗುತ್ತಿದೆ. ಇದು 2022ರ ಏಪ್ರಿಲ್ ವಿಡಿಯೊ ಎಂದು ಆಂಧ್ರ ಪೊಲೀಸರು ಕೂಡ 'ಎಕ್ಸ್'ನಲ್ಲಿ ಸ್ಪಷ್ಟನೆ ನೀಡಿದ್ದಾರೆ ಎಂಬುದಾಗಿ ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಜನಸಂಖ್ಯೆ ಬೆಳೆಸೋದು ವಿಕಾಸ ಅಲ್ಲ!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

109

ನಮ್ಮ ದೇಶ ಕೆಟ್ಟಿದೆ. ನಮ್ಮ ಜನ ಕೆಟ್ಟಿದ್ದಾರೆ ಅಂತೀವಿ. ಯಾರೋ ಒಂದಿಷ್ಟು ಜನ ನಮ್ಮ ಮಣ್ಣು ಮಾರಿಕೊಂಡವರನ್ನು ನೋಡಿ, ದನ ತಿನ್ನುವ ಮೇವು ಮಾರಿಕೊಂಡವರನ್ನು ನೋಡಿ ನಮ್ಮ ದೇಶ ಕೆಟ್ಟಿದೆ ಅನ್ನಬಾರದು. ಮಣ್ಣು ಮಾರಿದವರನ್ನು, ಮೇವು ಮಾರಿದವರನ್ನು ನೋಡಿ ದೇಶಕ್ಕೆ ಭವಿಷ್ಯ ಇಲ್ಲ ಎಂದು ಭಾವಿಸುವ ಬದಲು ಸಿಯಾಚಿನ್ ನಂತಹ ಹಿಮಾಚ್ಛಾದಿತ ಪ್ರದೇಶದಲ್ಲಿ ಹಿಮದೊಳಗೆ ಬಿದ್ದು ಆರು ದಿನವಾದರೂ ನಮ್ಮ ಗಡಿಯನ್ನು ರಕ್ಷಣೆ ಮಾಡುತ್ತಾರಲ್ಲ, ಹನುಮಂತಪ್ಪ ಕೊಪ್ಪದ ಅಂತಹ ಸೈನಿಕರು ನಮ್ಮ ದೇಶದಲ್ಲಿ ಇದ್ದಾರಲ್ಲ ಎಂದು ಹೆಮ್ಮೆ ಪಡಬೇಕು. ಕಾಡುಗಳ್ಳ ವೀರಪ್ಪನ್‌ನನ್ನು ನೋಡಿ ದುಃಖ ಪಡೋದಕ್ಕಿಂತ ವಿಶ್ವೇಶ್ವರಯ್ಯ ಅವರಂತಹ ವ್ಯಕ್ತಿ ಹುಟ್ಟಿದ ನಾಡಿನಲ್ಲಿ ನಾವು ಹುಟ್ಟಿದ್ದೀವಿ ಅಂತ ಹೆಮ್ಮೆ ಪಡಬೇಕು.

ಈ ದೇಶವನ್ನು ಕಟ್ಟಲು ಸಾವಿರಾರು ಜನ ತ್ಯಾಗ, ಬಲಿದಾನ ಮಾಡಿದ್ದಾರೆ. ನಾವು ಇವತ್ತು ಅರಾಂ ಇದ್ದೇವೆ ಅಂದ್ರ ಅವರ ಕೊಡುಗೆ ಬಹಳ ದೊಡ್ಡದಿದೆ. ಬರೀ ದೊಡ್ಡ ದೊಡ್ಡ ಜನ ದೇಶಕ್ಕೆ ತ್ಯಾಗ ಮಾಡಿದ್ದಾರೆ ಅಂತಲ್ಲ; ಸಣ್ಣ ಸಣ್ಣ ಜನ ಕೂಡಾ ದೇಶವನ್ನು ಕಟ್ಟಲು ಕೊಡುಗೆ ನೀಡಿದ್ದಾರೆ. ಕುರಿ ಕಾಯೋ ಹುಡುಗ ಕಾಳಿದಾಸ ಆಗಿದ್ದು ಇದೇ ಭೂಮಿಯಲ್ಲಿ. ಗುಡಿಸಲಲ್ಲಿ ಇದ್ದ ಚಾಣಕ್ಯ ಸಾಮ್ರಾಜ್ಯ ಕಟ್ಟಿದ್ದು ಇದೇ ಮಣ್ಣಿನಲ್ಲಿ. ಬೀದಿ ದೀಪದಲ್ಲಿ ಓದಿ ಬೆಳೆದ ಅಂಬೇಡ್ಕರ್ ದೇಶಕ್ಕೆ ಸಂವಿಧಾನ ಕೊಟ್ಟಿದ್ದು ಇದೇ ಭೂಮಿಯಲ್ಲಿ. ಬೋಟು ಕಟ್ಟುವವನ ಮಗ ದೊಡ್ಡ ವಿಜ್ಞಾನಿಯಾಗಿದ್ದು, ರಾಷ್ಟ್ರಪತಿಯಾಗಿದ್ದು ಇದೇ ಮಣ್ಣಲ್ಲಿ ಅಲ್ಲವೇನು? ಇದರ ಬಗ್ಗೆ ನಮಗೆ ಹೆಮ್ಮೆ ಇರಬೇಕು.

ದೇಶ ವಿಕಾಸ ಆಗೋದು ಅಂದರ ದೊಡ್ಡ ದೊಡ್ಡ ಕಟ್ಟಡಗಳು ಬರೋದಲ್ಲ. ಭಾರತ ಬೇರೆ ದೇಶದ ಮೇಲೆ ದಾಳಿ ಮಾಡಿ ನಮ್ಮ ಗಡಿಗಳನ್ನು ವಿಸ್ತಾರ ಮಾಡೋದಲ್ಲ. ನಮ್ಮ ಜನಸಂಖ್ಯೆಯನ್ನು ಹೆಚ್ಚು ಮಾಡೋದು ಅಲ್ಲ. ವಿಕಾಸ ಅಂದರ ವಾಸ್ತವದಿಂದ ಸಾಧ್ಯತೆಯೆಡೆಗಿನ ಪಯಣ. ಬಹಿರಂಗ ವಿಕಾಸ ಒಂದೇ ಅಲ್ಲ. ಅಂತರಂಗದ ವಿಕಾಸವೂ ಆಗಬೇಕು. ಒಂದು ಮೊಗ್ಗು ಅರಳಿ ಸುಗಂಧ ಬೀರೋದು ವಿಕಾಸ. ಎಲ್ಲ ಬೀಜಗಳೂ ವೃಕ್ಷವಾಗೋದಿಲ್ಲ. ಕೆಲವೇ ಕೆಲವು ಮಾತ್ರ ಮಣ್ಣಿನ ಸತ್ವವನ್ನು ಹೀರಿ ಮರವಾಗಿ ಬೆಳೆಯುತ್ತವೆ. ಬೀಜ ವಾಸ್ತವ. ಮರವಾಗಿ ಬೆಳೆಯೋದು ಸಾಧ್ಯತೆ. ಎಲ್ಲೋ ಗುಡ್ಡದಲ್ಲಿ ಬಿದ್ದ ಮಳೆಯ ಹನಿ ವಾಸ್ತವ. ಅದು ಕೃಷ್ಣೆಯಾಗಿ ಹರಿಯೋದು ಸಾಧ್ಯತೆ ಅಥವಾ ಸಾಮರ್ಥ್ಯ. ಬಿಂದು ಸಿಂಧು ಆಗುವುದು ಸಾಮರ್ಥ್ಯ. ಸಿದ್ದಾರ್ಥ ವಾಸ್ತವ, ಗೌತಮ ಬುದ್ಧ ಸಾಮರ್ಥ್ಯ. ನರೇಂದ್ರನಾಥ ವಾಸ್ತವ, ವಿವೇಕಾನಂದ ಸಾಧ್ಯತೆ. ಒಂದು ಟೇಬಲ್ ಇದ್ದರೆ ಅದು ಬರೀ ಟೇಬಲ್ ಅಷ್ಟೆ. ಒಂದು ಕುರ್ಚಿ ಇದ್ದರೆ ಅದು ಬರೀ ಕುರ್ಚಿ ಅಷ್ಟೆ. ಆದರೆ ಒಂದು ಮಗು ಬರೀ ಮಗುವಲ್ಲ. ಹಲವು ಸಾಧ್ಯತೆ ಅದು. ನಾವು ಬರೀ ಉಸಿರು ತೆಗೆದುಕೊಳ್ಳೋದು ಬಿಡೋದು ಮಾಡಿ ಸತ್ತರೆ ಪ್ರಯೋಜನ ಇಲ್ಲ. ಹೀಗಾದರೆ ಅದು ನಿಧಾನ ಸಾವು. ಅಗಾಧ ಸಾಧ್ಯತೆಗಳೊಂದಿಗೆ ಹುಟ್ಟಿದ ಮಗುವೊಂದು ವೃದ್ಧಾಪ್ಯದ ಕಡೆಗೆ ಬೆಳೆಯಬಾರದು, ಎತ್ತರಕ್ಕೆ ಬೆಳೆಯಬೇಕು ಅದು ವಿಕಾಸ. ಹೃದಯ ವಿಕಾಸ ಆಗುತ್ತಿರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 14, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣಪ್ರತಿಪದ್ ಗಂ. 27-22 ನಕ್ಷತ್ರ: ಪುನರ್ವಸು ಗಂ. 10-17 ಯೋಗ: ವಿಷ್ಕಂಭ ಗಂ. 26-58 ಕರಣ: ಬಾಲವ ಗಂ. 15-35, ಧನು ಮಾಸದ 29 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 07-01 ಸೂರ್ಯಾಸ್ತ : 06-19
ಮುಸ್ಲಿಂ ದಿನಾಂಕ : 13 ರಜಬ್ , ದಿನ ವಿಶೇಷ : ಮಕರ ಸಂಕ್ರಾಂತಿ, ಉತ್ತರಾಯಣ ಪುಣ್ಯಕಾಲ ಮಧ್ಯಾಹ್ನ 2-50 ರ ನಂತರ, ಅದೃಷ್ಟ ಸಂಖ್ಯೆ : 3, 7

ಮೇಷ: ರಾಜಕೀಯಕ್ಕೆ ಪ್ರವೇಶ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲು ಅತಿ ಚಿಂತನೆ ನಡೆಸುವಿರಿ. ತರಕಾರಿ ವ್ಯಾಪಾರಿಗಳಿಗೆ ಲಾಭ ಉಂಟಾಗುವುದು. ಸ್ವಲ್ಪ ಪರಿಶ್ರಮ ಕೂಡ ಕಾರ್ಯಸಾಧನೆಯಲ್ಲಿ ಫಲ ನೀಡಲಿದೆ.

ವೃಷಭ: ವಿವಾಹ ವಿಷಯಗಳಲ್ಲಿ ಮಗಳ ಅಭಿಪ್ರಾಯ ಪಡೆದು ಮುಂದುವರಿಯುವುದು ಉತ್ತಮ. ಆಹಾರ ನಿಯಮದಿಂದ ಆರೋಗ್ಯದಲ್ಲಿ ಸುಧಾರಣೆ ಇರುವುದು. ನಿರುದ್ಯೋಗಿಗಳಿಗೆ ಸುಲಭವಾಗಿ ಉದ್ಯೋಗ ದೊರೆಯಲಿದೆ.

ಮಿಥುನ: ಭೂ ಸಂಬಂಧದ ವ್ಯವಹಾರದಲ್ಲಿ ಅನಿಸಿಕೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದಲ್ಲಿ ವ್ಯವಹಾರಗಳು ಕೈಗೂಡಲಿವೆ. ವಿಶ್ರಾಂತಿಯಿಲ್ಲದ ಕಾರ್ಯದೊತ್ತಡದಿಂದ ಅನಾರೋಗ್ಯ ಉಂಟಾಗಬಹುದು. ಬಾಕಿ ಇದ್ದ ಯೋಜನೆ ಪೂರ್ಣಗೊಳಿಸಿ.

ಕರ್ಕಾಟಕ: ಶುಭ ಸಮಾರಂಭಗಳು ಇರುವುದರಿಂದ ಸಂಭ್ರಮದ ವಾತಾವರಣವಿರುವುದು. ರೈತರಿಗೆ ಹೆಚ್ಚಿನ ಬೆಳೆ ಕಣ್ಣಿಗೆ ಕಂಡರೂ, ರೋಗಬಾಧೆ ಯಿಂದ ನಿರಾಸೆ ಉಂಟಾಗಬಹುದು. ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ದಿನಗಳು.

ಸಿಂಹ: ನಿಮ್ಮ ವ್ಯಕ್ತಿತ್ವವನ್ನು ಸಹಿಸಲಾರದ ಜನರು ಎದುರಾಗಬಹುದು. ಮಗಳ ವಿದ್ಯಾಭ್ಯಾಸದಲ್ಲಿನ ಪ್ರಗತಿಯಿಂದಾಗಿ ಆನಂದ ಉಂಟಾಗುತ್ತದೆ. ಹಂಗಾಮಿ ವೃತ್ತಿಯವರಿಗೆ ಸಂಪಾದನೆಗೆ ಅಡೆತಡೆ ಉಂಟಾಗಬಹುದು.

ಕನ್ಯಾ: ಹೋರಾಟ ನಡೆಸಿದ ನಂತರದಲ್ಲಿ ಗೆಲುವನ್ನಾಗಲೀ ಸೋಲನ್ನಾಗಲಿ ಒಪ್ಪಿಕೊಳ್ಳಲು ತೀರ್ಮಾನಿಸಿ. ಬ್ಯಾಂಕ್ ನೌಕರರು ವರ್ಗಾವಣೆ ಮಾಡಿಸಿಕೊಳ್ಳಲು ಪ್ರಯತ್ನ ಪಡಬಹುದು. ಇನ್ನೊಬ್ಬರ ಬಗ್ಗೆ ಕೆಟ್ಟ ಮಾತುಗಳು ಬೇಡ.

ತುಲಾ: ಬೇರೆಯವರ ಅಧೀನದಲ್ಲಿ ಕೆಲಸ ನಿರ್ವಹಿಸಬಾರದು, ಪರಾವಲಂಬಿಯಾಗಿ ಇರಬೇಕು ಎಂಬ ಆಸೆಯು ಕಾಡಲಿದೆ. ಮಗನ ಮುಂದಿನ ಓದಿನ ವಿಷಯವಾಗಿ ಮನೆಯಲ್ಲಿ ಗಂಭೀರವಾದ ಚರ್ಚೆಗೆ ಬರುವುದು.

ವೃಶ್ಚಿಕ: ಅನಿವಾರ್ಯ ಕಾರಣಗಳಿಂದ ನಿತ್ಯದ ಆಚರಣೆಯಲ್ಲಿ ಕೆಲವು ಬದಲಾವಣೆ ಕಾಣುವಿರಿ. ತೆಂಗು ಬೆಳೆಗಾರರಿಗೆ ಬೆಳೆಯ ಜತೆಗೆ ಹೆಚ್ಚಿನ ಲಾಭವೂ ಇರುವುದು. ಕೆಲಸ ವಿಳಂಬವಾಗಿ ನೆರವೇರುವುದು.

ಧನು: ಜವಾಬ್ದಾರಿಯಿಂದ ನಡೆಯುತ್ತಿರುವ ಸಂಘ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯ ಬರಬಹುದು. ಸಮಾಧಾನದಿಂದ ಎದುರಿಸುವುದು ಬುದ್ಧಿವಂತಿಕೆಯ ಗುಣ. ಉದ್ಯೋಗದಲ್ಲಿ ಸ್ಥಾನ ಬದಲಾವಣೆ ಆಗಿ ಮನಸ್ಸಿಗೆ ನೆಮ್ಮದಿ ಸಿಗುವುದು.

ಮಕರ: ಪಾಲುದಾರರೊಂದಿಗೆ ಹಣಕಾಸಿನ ವಿಷಯದಲ್ಲಿ ಬಿಗಿ ಹಿಡಿತ ಪಡೆಯುವುದು ಅನಿವಾರ್ಯ. ಕಾಗದದ ಉದ್ಯಮದವರಿಗೆ ಲಾಭ ಉಂಟಾಗಲಿದೆ. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿರುವುದು.

ಕುಂಭ: ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ದೊರೆಯಲಿದೆ. ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕ ಅನುಕೂಲ ಉಂಟಾಗುವುದು. ವಿವಾಹ ಸಂಬಂಧದ ಮಾತುಕತೆಗಳು ಫಲಕಾರಿ.


ಮೀನ: ತಪ್ಪನ್ನು ಮಾಡದಿದ್ದರೂ ಅದರ ಅಪವಾದ ಸುತ್ತುಕೊಳ್ಳುವ ಪ್ರಸಂಗ ನಡೆಯಬಹುದು. ರೈತಾಪಿ ವರ್ಗದವರ ಈ ದಿನದ ಕೆಲಸ ಕಾರ್ಯಗಳಿಗೆ ತಡೆ ಬರಬಹುದು. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು.

ಪದಬಂಧ 5922

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜನ ಮಾಡುವ ಎಣ್ಣೆ ಮಜ್ಜನ (4)
3.ಶ್ರೇಷ್ಠವಾದ ಕಾವ್ಯ (4)
5.ಖರ್ಪರದ ಹತ್ತಿರವಿರುವ ಪಕ್ಷಿ (3)
7.ತನ್ಮಯನಾಗಿ ಕುಳಿತಿರುವ ಮಗ! (3)
8.ಒಂದೇ ವಿಷಯದಲ್ಲಿ ಆಸಕ್ತನಾಗಿರುವವನು (3)
10.ಈತ ವಿವೇಕಶಾಲಿ (5)
11.ಹಿಮದ ಹತ್ತಿರವಿರುವವಘನತೆಯನ್ನು ಹೊಂದಿರುವವನು (3)
13.ತರಲೆ ಮಾಡುತ್ತಿರುವ ತರುಣಿ (3)
14.ಮುಂದೆ ಬರಲಿರುವ ಕಾಲ (3)
16.ಹಾಲು ಮೊಸರು ಮಾರುವವನು (4)
17.ಕಲ್ಲಿನ ಆಯುಧಗಳು ಬಳಕೆಯಲ್ಲಿದ್ದ ಕಾಲ (4)

ಮೇಲಿಂದ ಕೆಳಕ್ಕೆ
1.ಅನಿರೀಕ್ಷಿತವಾಗಿ ಬಂದ ಅತಿಥಿ (4)
2.ನಖರ ಮಾಡುವಾಗ ಕಾಣಿಸಿದ ಉಗುರು! (2)
3.ಮಧುರ ಫಲಗಳನ್ನು ನೀಡುವ ವೃಕ್ಷ (2)
4.ತಡೆ ಎನ್ನುವ ಪದಕ್ಕೊಂದು ಪರ್ಯಾಯ ಪದ (3)
6.ಚಂಬೆಳಕಿನ ಕವಿ ಎಂದೇ ಪ್ರಖ್ಯಾತರಾದವರು (7)
7.ಈ ತರಹ ತಮ್ಮ ತೋರಿದ ಭೇದಭಾವ! (4)
9.ಸೂಕ್ಷ್ಮವಾದ ಎಳೆ (4)
12.ಈತ ಲಗ್ನವಾಗುತ್ತಿರುವವನು (4)
13.ಅತಿಯಾದ ಆತುರ (3)
14.ಸುಭಗನಿಗೆ ಕಾಣಿಸಿದ ಸೂರ್ಯ! (2)
15.ಗುರುವಿಗೆ ತಕ್ಕ ವಿದ್ಯಾರ್ಥಿ ತಿರುಗಿದ್ದಾನಲ್ಲಾ! (2)



5921ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುತ್ತು 2.ಕಾಯಕಲ್ಪ
5.ಕಡಿವಾಣ 7.ರುಗ್ಣಾಲಯ
8.ರಾವುತ 9.ಜೋಕಾಲಿ
11.ಭಾವಾವೇಶ
13.ಮಧುಕರ 15.ಅಧಿಕಾರ
16.ಗಣಿ

ಮೇಲಿಂದ ಕೆಳಕ್ಕೆ:
1.ಮುದುಕ 2.ಕಾರಣ
3.ಕರಾರು 4.ಜಯಶಾಲಿ
6.ಡಿಕಾವು 8.ರಾಯಭಾರ
10.ಕಾಯಕ 12.ಶರಧಿ
13.ಮಸೂರ 14.ರಮಣಿ

ಸುಡೊಕು 6307

		6			8	5		1
			2	1				
1		2			5			8
6		9				8		
			5	4	6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6306 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಷೇರುಪೇಟೆ ವಹಿವಾಟು

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,431
ಇಂದಿನ ಅಂತ್ಯ	23,085
	345
ದಿನದ ಕನಿಷ್ಠ	23,047

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹525

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹476-655
ದ್ವಿತಳಿ (ಬಿ.ವಿ)	₹180-826

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹176

(ಪ್ರತಿ ಕೆಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1440 (1430)
ಸೋಯಾ (ರಿಫೈನ್ಡ್)	₹1310 (1265)
ಸೂರ್ಯಕಾಂತಿ (ರಿಫೈನ್ಡ್)	₹1400 (1350)
ಪಾಮೋಲಿನ್	₹1370 (1340)

ಚಿಪ್‌ಗಳ ರಫ್ತಿಗೆ ಹೊಸ ಕಾನೂನು ಪ್ರಸ್ತಾವ



ವಾಷಿಂಗ್ಟನ್ (ಎಪಿ): ದೇಶದ ಭದ್ರತೆಯನ್ನು ಗಮನದಲ್ಲಿರಿಸಿಕೊಂಡು, ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ರೂಪಿಸಲು ಬಳಸುವ ಸುಧಾರಿತ ಕಂಪ್ಯೂಟರ್ ಚಿಪ್‌ಗಳ ರಫ್ತಿಗೆ ಹೊಸ ಕಾನೂನು ಜಾರಿಗೆ ತರಲು ಜೋ ಬೈಡನ್ ಸರ್ಕಾರ ನಿರ್ಧರಿಸಿದೆ.

'120 ದೇಶಗಳ ಡೇಟಾ ಸೆಂಟರ್‌ಗಳಲ್ಲಿ ಮಾತ್ರ ಎ.ಐ ಚಿಪ್ ಬಳಕೆ ಮಾಡಲು ಹೊಸ ಕಾನೂನು ಅವಕಾಶ ಕಲ್ಪಿಸಲಿದೆ. ಈಗಿರುವ ಚಿಪ್‌ಗಳನ್ನು ವಿಡಿಯೊ ಗೇಮ್‌ಗಳಿಗಷ್ಟೇ ಬಳಸಲು ಮಿತಿ ವಿಧಿಸಲಿದೆ' ಎಂದು ಚಿಪ್ ಉದ್ಯಮದ ಉದ್ಯಮಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಎ.ಐ. ತಂತ್ರಜ್ಞಾನ ರೂಪಿಸಲು ಬಳಸುವ ಕಂಪ್ಯೂಟರ್ ಚಿಪ್‌ಗಳ ಅಭಿವೃದ್ಧಿಯಲ್ಲಿ ದೇಶದ ಪಾರುಪತ್ಯವನ್ನು ಉಳಿಸಿಕೊಳ್ಳಲು ಈ ನಿರ್ಧಾರ ಅತ್ಯಗತ್ಯವಾಗಿದೆ' ಎಂದು ಅಮೆರಿಕ ವಾಣಿಜ್ಯ ಕಾರ್ಯದರ್ಶಿ ಗಿನಾ ರೈಮೊಂಡೊ ತಿಳಿಸಿದರು.

ಎರಡು ವಾರದಲ್ಲಿ ರೂಪಾಯಿ ಮೌಲ್ಯ ₹1ಗಿಂತ ಹೆಚ್ಚು ಇಳಿಕೆ


ರೂಪಾಯಿ ಮೌಲ್ಯ 66 ಪೈಸೆ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ಒಂದೇ ದಿನದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 66 ಪೈಸೆ ಕುಸಿದಿದ್ದು ಎರಡು ವರ್ಷಗಳಲ್ಲಿ ಇದೇ ಮೊದಲು. ಡಾಲರ್ ಮೌಲ್ಯವು ₹86.70ಕ್ಕೆ ಮುಟ್ಟಿದೆ. 2024ರ ಡಿಸೆಂಬರ್ 30ರಂದು ರೂಪಾಯಿ ಮೌಲ್ಯ ₹85.52 ಇತ್ತು. ಕಳೆದ ಎರಡು ವಾರದ ವಹಿವಾಟಿನಲ್ಲಿ ಒಂದು ರೂಪಾಯಿಗೂ ಹೆಚ್ಚು ಕುಸಿದಿದೆ.

ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಸೋಮವಾರದ ವಹಿವಾಟಿನಲ್ಲಿ ₹4,892 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದರಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.14ರಷ್ಟು ಹೆಚ್ಚಳವಾಗಿದ್ದು, ಪ್ರತಿ ಬ್ಯಾರೆಲ್‌ಗೆ 80.67 ಡಾಲರ್ (₹6,993) ಆಗಿದೆ. ದೇಶೀಯ ಷೇರು ಸೂಚ್ಯಂಕಗಳ ಇಳಿಕೆ



ಯಿಂದಾಗಿ ರೂಪಾಯಿಯು ಒತ್ತಡಕ್ಕೆ ಸಿಲುಕಿದೆ ಎಂದೂ ವಿಶ್ಲೇಷಿಸಿದ್ದಾರೆ.

2023ರ ಫೆಬ್ರುವರಿ 6ರಂದು ರೂಪಾಯಿ ಮೌಲ್ಯ 68 ಪೈಸೆ ಕುಸಿತವಾಗಿತ್ತು. ಇದು ದಿನವೊಂದರಲ್ಲಿ ಆಗಿರುವ ರೂಪಾಯಿ ಮೌಲ್ಯದ ಅತಿ ದೊಡ್ಡ ಕುಸಿತವಾಗಿದೆ. 2025ರ ಜನವರಿ 10ರ ವಹಿವಾಟಿನಲ್ಲಿ 18 ಪೈಸೆ ಇಳಿಕೆಯಾಗಿತ್ತು.

ಡಾಲರ್ ಪ್ರಾಬಲ್ಯದ ಎದುರು ರೂಪಾಯಿ ಮೌಲ್ಯವು ಕುಸಿಯುತ್ತಿರುವುದನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಧ್ಯಪ್ರವೇಶಿಸುವ ಸಾಧ್ಯತೆಯಿದೆ.

ಸೋಮವಾರದ ವಹಿವಾಟಿನ ಆರಂಭದಲ್ಲಿ ₹86.12 ಇದ್ದ ರೂಪಾಯಿ ಮೌಲ್ಯವು ದಿನದ ವಹಿವಾಟಿನಲ್ಲಿ ಅಂತ್ಯಕ್ಕೆ ಅತಿ ಕನಿಷ್ಠ ಮಟ್ಟವಾದ ₹86.70ಕ್ಕೆ ಮುಟ್ಟಿತು.

ಅಮೆರಿಕದ ಉದ್ಯೋಗ ಮಾರುಕಟ್ಟೆಯಲ್ಲಿ ನಿರೀಕ್ಷಿಸಿದ್ದಕ್ಕಿಂತಲೂ ಉತ್ತಮ ಬೆಳವಣಿಗೆ ಆಗಿದೆ. ಅಮೆರಿಕದ ಬಾಂಡ್‌ಗಳ ಗಳಿಕೆಯಲ್ಲಿ ಹೆಚ್ಚಳವಾಗಿದೆ. ಇದರಿಂದ ಡಾಲರ್ ಮೌಲ್ಯ ವೃದ್ಧಿಗೊಂಡಿದೆ ಎಂದು ಹೇಳಲಾಗಿದೆ.

ಅಮೆರಿಕವು, ರಷ್ಯಾದ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ವಿಧಿಸಿದ್ದು, ಬ್ರೆಂಟ್ ಕಚ್ಚಾ ತೈಲದ ದರವನ್ನು ಪ್ರತಿ ಬ್ಯಾರೆಲ್‌ಗೆ 81 ಡಾಲರ್‌ಗೆ (₹7,016) ಹೆಚ್ಚಿಸಿದೆ.

ಕರಗಿದ ₹24 ಲಕ್ಷ ಕೋಟಿ ಸಂಪತ್ತು

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವು, ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಿಂದ ದೇಶದ ಷೇರು ಸೂಚ್ಯಂಕಗಳು ಸೋಮವಾರ ವಹಿವಾಟಿನಲ್ಲಿ ಶೇ 1ಕ್ಕಿಂತಲೂ ಹೆಚ್ಚು ಇಳಿಕೆ ಕಂಡಿವೆ.

ಷೇರು ಸೂಚ್ಯಂಕಗಳ ಇಳಿಕೆಯಿಂದ ಸೋಮವಾರ ಒಂದೇ ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹12 ಲಕ್ಷ ಕೋಟಿ ಕರಗಿದ್ದರೆ, ಕಳೆದ ನಾಲ್ಕು ದಿನದ ವಹಿವಾಟಿನಲ್ಲಿ ₹24.69 ಲಕ್ಷ ಕೋಟಿ ಕರಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹417 ಲಕ್ಷ ಕೋಟಿಗೆ ಇಳಿದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 1,048 ಅಂಶ (ಶೇ 1.36) ಕುಸಿತವಾಗಿ, 76,330ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 345 ಅಂಶ (ಶೇ 1.47) ಇಳಿಕೆಯಾಗಿ, 23,085ಕ್ಕೆ ಕೊನೆಗೊಂಡಿತು.

ಜೊಮಾಟೊ ಕಂಪನಿಯ ಷೇರಿನ ಮೌಲ್ಯ ಶೇ 7ರಷ್ಟು ಇಳಿಕೆಯಾಗಿದೆ. ಪವರ್ ಗ್ರಿಡ್, ಅದಾನಿ ಪೋರ್ಟ್ಸ್, ಟಾಟಾ ಸ್ಟೀಲ್, ಎನ್‌ಟಿಪಿಸಿ, ಟಾಟಾ ಮೋಟರ್ಸ್, ಟೆಕ್ ಮಹೀಂದ್ರ, ಮಹೀಂದ್ರ ಆ್ಯಂಡ್ ಮಹೀಂದ್ರ, ಏಷ್ಯನ್ ಪೇಂಟ್ಸ್, ಸನ್ ಫಾರ್ಮಾ ಮತ್ತು ಅಲ್ಟ್ರಾಟೆಕ್ ಸಿಮೆಂಟ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಎಕ್ಸಿಸ್ ಬ್ಯಾಂಕ್, ಹಿಂದುಸ್ತಾನ್ ಯುನಿಲಿವರ್, ಟಿಸಿಎಸ್ ಮತ್ತು ಇಂಡಸ್‌ಇಂಡ್ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ. ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಶಾಂಘೈ ಮತ್ತು ಹಾಂಗ್ ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಜನವರಿ ಆರಂಭದಿಂದ 10ರ ವರೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶದ ಈಕ್ವಿಟಿ ಮಾರುಕಟ್ಟೆಯಿಂದ ₹22,194 ಕೋಟಿ ಮೌಲ್ಯದ ಬಂಡವಾಳವನ್ನು ವಾಪಸ್ ಪಡೆದಿದ್ದಾರೆ.

ಸುದ್ದಿ 2 ನಿಮಿಷ

₹16.90 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್‌ನಿಂದ ಜನವರಿ 12ರ ವರೆಗೆ ₹16.90 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಶೇ 16ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.



ಕಾರ್ಪೊರೇಟ್ ತೆರಿಗೆ ₹7.68 ಲಕ್ಷ ಕೋಟಿ ಹಾಗೂ ಕಾರ್ಪೊರೇಟ್‌ಯೇತರ ತೆರಿಗೆ ₹8.74 ಲಕ್ಷ ಕೋಟಿ ಸಂಗ್ರಹವಾಗಿದೆ. ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ₹44,538 ಕೋಟಿ ಸಂಗ್ರಹವಾಗಿದೆ.

ಒಟ್ಟು ₹3.74 ಲಕ್ಷ ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 42.49ರಷ್ಟು ಏರಿಕೆಯಾಗಿದೆ. ನೇರ ತೆರಿಗೆಯ ಸರಾಸರಿ ಸಂಗ್ರಹವು ಶೇ 20ರಷ್ಟು ಏರಿಕೆಯಾಗಿದ್ದು, ₹20.64 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

2024-25ನೇ ಆರ್ಥಿಕ ವರ್ಷದಲ್ಲಿ ನೇರ ತೆರಿಗೆಗಳ ಮೂಲಕ ₹22.07 ಲಕ್ಷ ಕೋಟಿ ಸಂಗ್ರಹಿಸಲು ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಗುರಿ ನಿಗದಿಪಡಿಸಿದೆ.

ಎಚ್‌ಸಿಎಲ್ ಟೆಕ್ನಾಲಜೀಸ್‌ಗೆ ₹4,591 ಕೋಟಿ ಲಾಭ

ನವದೆಹಲಿ (ಪಿಟಿಐ): 2024-25ರ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಐ.ಟಿ ಸೇವಾ ಕಂಪನಿ ಎಚ್‌ಸಿಎಲ್ ಟೆಕ್ನಾಲಜೀಸ್ ₹4,591 ಕೋಟಿ ನಿವ್ವಳ ಲಾಭ ಗಳಿಸಿದೆ.

2023-24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹4,350 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 5.5ರಷ್ಟು ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ವರಮಾನದಲ್ಲಿ ಶೇ 5ರಷ್ಟು ಏರಿಕೆಯಾಗಿದ್ದು, ₹29,890 ಕೋಟಿ ಗಳಿಸಲಾಗಿದೆ ಎಂದು ತಿಳಿಸಿದೆ.

ರಿಯಲ್ ಎಸ್ಟೇಟ್ ವಲಯ ಹೂಡಿಕೆ ಪ್ರಮಾಣ ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ದೇಶದ ರಿಯಲ್ ಎಸ್ಟೇಟ್ ವಲಯದಲ್ಲಿ ಖಾಸಗಿ ಈಕ್ವಿಟಿ ಹೂಡಿಕೆ ಪ್ರಮಾಣ ಶೇ 6ರಷ್ಟು ಏರಿಕೆಯಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ವರದಿ ಸೋಮವಾರ ತಿಳಿಸಿದೆ.

2023-24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹23,002 ಕೋಟಿ ಹೂಡಿಕೆಯಾಗಿತ್ತು. ಅದು ಈ ಬಾರಿ ₹24,387 ಕೋಟಿ ಹೂಡಿಕೆಯಾಗಿದೆ. ಕೈಗಾರಿಕೆ ಮತ್ತು ಸಾಗಣೆ ವಲಯದಲ್ಲಿ ಬಂಡವಾಳ ಒಳಹರಿವಿನ ಹೆಚ್ಚಳದಿಂದ ಹೂಡಿಕೆ ಪ್ರಮಾಣ ಏರಿಕೆಯಾಗಿದೆ. ಆದರೆ, ಈ ಅವಧಿಯಲ್ಲಿ ಖಾಸಗಿ ಈಕ್ವಿಟಿ ಒಪ್ಪಂದಗಳ ಸಂಖ್ಯೆಯು 30 ರಿಂದ 24ಕ್ಕೆ ಇಳಿದಿದೆ ಎಂದು ತಿಳಿಸಿದೆ.

ವಲಯಕ್ಕೆ ವಿದೇಶಿ ಬಂಡವಾಳದ ಕೊಡುಗೆಯ ಪ್ರಮಾಣ ಶೇ 82ರಷ್ಟಿದ್ದರೆ, ದೇಶೀಯ ಕೊಡುಗೆ ಶೇ 18ರಷ್ಟಿದೆ. ಕೈಗಾರಿಕೆ ಮತ್ತು ಸಾಗಣೆ ವಲಯವು ಒಟ್ಟು ಹೂಡಿಕೆಯ ಪೈಕಿ ಶೇ 62ರಷ್ಟು ಪಾಲನ್ನು ಹೊಂದಿದೆ. ವಸತಿ ಶೇ 15, ಕಚೇರಿ ಶೇ 14 ಮತ್ತು ಇತರೆ ಶೇ 9ರಷ್ಟು ಹೊಂದಿದೆ ಎಂದು ತಿಳಿಸಿದೆ.

ವಿನಿಮಯ ದರ

$ ಡಾಲರ್	86.70
£ ಪೌಂಡ್	104.80
€ ಯುರೊ	88.24
¥ ಯೆನ್ (100ಕ್ಕೆ)	55

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹22600
ಎಸಿ	₹12150
ಆರ್‌ಪಿ	₹19200
ಆರ್‌ಸಿ	₹11125

ಚಿಲ್ಲರೆ ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ಡಿಸೆಂಬರ್ ತಿಂಗಳಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದ್ದು, ಶೇ 5.22ರಷ್ಟಾಗಿದೆ.

ಚಿಲ್ಲರೆ ಹಣದುಬ್ಬರವು 2024ರ ನವೆಂಬರ್‌ನಲ್ಲಿ ಶೇ 5.48ರಷ್ಟು ದಾಖಲಾಗಿತ್ತು. ತರಕಾರಿಗಳು ಸೇರಿದಂತೆ ಆಹಾರ ಪದಾರ್ಥಗಳ ದರ ಇಳಿಕೆಯಿಂದ ಹಣದುಬ್ಬರವು ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂಕಿ ಅಂಶಗಳು ಸೋಮವಾರ ತಿಳಿಸಿವೆ. 2023ರ ಡಿಸೆಂಬರ್‌ನಲ್ಲಿ ಶೇ 5.69ರಷ್ಟಿತ್ತು.

ನವೆಂಬರ್‌ನಲ್ಲಿ ಆಹಾರ ಪದಾರ್ಥಗಳ ಹಣದುಬ್ಬರವು ಶೇ 9.04ರಷ್ಟಿತ್ತು. ಇದು ಡಿಸೆಂಬರ್‌ನಲ್ಲಿ ಶೇ 8.39ಕ್ಕೆ ಇಳಿದಿದೆ.



ಆದರೆ, 2023ರ ಡಿಸೆಂಬರ್‌ಗೆ ಹೋಲಿಸಿದರೆ 2024ರ ಡಿಸೆಂಬರ್‌ನಲ್ಲಿ ಅವರೆಕಾಳು ಹಣದುಬ್ಬರ ದರವು ಶೇ 89.12ರಷ್ಟು ಹೆಚ್ಚಳವಾಗಿದೆ. ಆಲೂಗೆಡ್ಡೆ (ಶೇ 68), ಬೆಳ್ಳುಳ್ಳಿ (ಶೇ 58), ತೆಂಗಿನ ಎಣ್ಣೆ (ಶೇ 45) ಮತ್ತು ಹೂಕೋಸು ಶೇ 39ರಷ್ಟು ಏರಿಕೆಯಾಗಿದೆ.

ಇದೇ ಅವಧಿಯಲ್ಲಿ ಜೀರಾ, ಶುಂಠಿ, ಒಣಮೆಣಸಿನಕಾಯಿ ದರದಲ್ಲಿ ಇಳಿಕೆಯಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಚಿಲ್ಲರೆ ಹಣದುಬ್ಬರದ ತಾಳಿಕೆ ಮಟ್ಟವನ್ನು ಕನಿಷ್ಠ 2ರಷ್ಟು ಹಾಗೂ ಗರಿಷ್ಠ 6ಕ್ಕೆ ನಿಗದಿಪಡಿಸಿದೆ. ಈ ಮಟ್ಟಕ್ಕಿಂತಲೂ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಇಳಿಕೆಯಾಗಿದೆ. ಹಾಗಾಗಿ, ಮುಂದಿನ ಸಭೆಯು ರೆಪೊ ದರದ ಕಡಿತಕ್ಕೆ ಮುಂದಾಗುವ ಸಾಧ್ಯತೆಯಿದೆ ಎಂದು ಹೇಳಿದೆ. ಮುಂದಿನ ಎಂಪಿಸಿ ಸಭೆ ಫೆಬ್ರುವರಿಯಲ್ಲಿ ನಡೆಯಲಿದೆ.

ಗ್ರಾಮೀಣ ಪ್ರದೇಶದಲ್ಲಿ ಚಿಲ್ಲರೆ ಹಣದುಬ್ಬರವು ಶೇ 5.76ರಷ್ಟು ಹಾಗೂ ನಗರ ಪ್ರದೇಶದಲ್ಲಿ ಶೇ 4.58ರಷ್ಟು ದಾಖಲಾಗಿದೆ. ರಾಜ್ಯಗಳ ಪೈಕಿ ಹಣದುಬ್ಬರ ಛತ್ತೀಸಗಢದಲ್ಲಿ ಅತಿಹೆಚ್ಚು ಶೇ 7.63ರಷ್ಟಿದ್ದರೆ, ದೆಹಲಿಯಲ್ಲಿ ಕನಿಷ್ಠ ಶೇ 2.51ರಷ್ಟು ಇದೆ ಎಂದು ವರದಿ ಹೇಳಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹14170-14170
ದಾವಣಗೆರೆ	₹10700-10700

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-34500
ಹಳತು	45000-49000
ಕಾರ್ಕಳ	
ಹೊಸತು	25000-35500
ಹಳತು	30000-45000
ಕುಮಟ	
ಚಾಲಿ	33019-37799
ಚಿಪ್ಪು	16569-26509
ಕೋಕ	6509-22089
ಫ್ಯಾಕ್ಟರಿ	5089-21899
ಹಳೆಚಾಲಿ	36089-38899
ಹೊಸಚಾಲಿ	26589-30733
ಪುತ್ತೂರು	
ಕೋಕ	20500-27500
ಹೊಸತು	25000-35500
ಹಳತು	36000-49000
ಸಾಗರ	
ಬಿಳಿಗೋಟು	9399-25869
ಚಾಲಿ	24599-34201
ಕೋಕ	9099-22989
ಕೆಂಪುಗೋಟು	13219-29599
ರಾಶಿ	31899-51519
ಸಿಪ್ಪೆಗೋಟು	7000-55899
ಶಿವಮೊಗ್ಗ	
ಬೆಟ್ಟೆ	46069-55899
ಗೊರಬಲು	17000-30669
ರಾಶಿ	30999-51569
ಸರಕು	58600-84196
ಸಿದ್ದಾಪುರ	
ಬಿಳಿಗೋಟು	24339-28109
ಚಾಲಿ	32699-38499
ಕೋಕ	21299-24899
ಹೊಸಚಾಲಿ	21889-26799
ಕೆಂಪುಗೋಟು	19609-19609
ರಾಶಿ	43599-48899
ತಟ್ಟಿಬೆಟ್ಟೆ	27699-37099
ಶಿರಸಿ	
ಬೆಟ್ಟೆ	26899-41199
ಬಿಳಿಗೋಟು	20111-30399
ಚಾಲಿ	35599-39511
ಕೆಂಪುಗೋಟು	11099-23518
ರಾಶಿ	41099-46208

ಕಾಳ್ಗಿಚ್ಚು: ಮೃತರ ಸಂಖ್ಯೆ 24ಕ್ಕೆ

ಲಾಸ್ ಏಂಜಲೀಸ್ (ಎಪಿ): ಲಾಸ್ ಏಂಜಲೀಸ್‌ನಲ್ಲಿ 'ಸಂತಾ ಆನಾ' ಸುಂಟರಗಾಳಿಯು ಎಬ್ಬಿಸಿದ ಕಾಳ್ಗಿಚ್ಚನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಭಾನುವಾರವೂ ಹರಸಾಹಸಪಟ್ಟರು.

ಕಾಳ್ಗಿಚ್ಚಿನಿಂದಾಗಿ ಈ ಪ್ರದೇಶದಲ್ಲಿ ಈಗಾಗಲೇ 24 ಮಂದಿ ಮೃತಪಟ್ಟಿದ್ದು, ಸಾವಿರಾರು ಮನೆಗಳು ಸುಟ್ಟು ಕರಕಲಾಗಿವೆ. ಮೃತರ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ವಾರ ಮತ್ತೆ ಬಲವಾದ ಮಾರುತಗಳು ಬೀಸಲಿವೆ ಎಂದು ಹವಾಮಾನ ಇಲಾಖೆಯ ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಬುಧವಾರದವರೆಗೆ ಕಾಳ್ಗಿಚ್ಚು ಮತ್ತಷ್ಟು ವ್ಯಾಪಕವಾಗಿ ಹರಡುವ ಸಾಧ್ಯತೆ ಇದೆ ಎಂದು ರಾಷ್ಟ್ರೀಯ ಹವಾಮಾನ ಮುನ್ಸೂಚನಾ ಸಂಸ್ಥೆಯು ರೆಡ್ ಅಲರ್ಟ್ ಘೋಷಿಸಿದೆ.

ಗಾಳಿಯು ಗಂಟೆಗೆ 80 ಕಿ.ಮೀ. ವೇಗದಲ್ಲಿ ಬೀಸುತ್ತಿದೆ. ಪರ್ವತ ಪ್ರದೇಶದಲ್ಲಿ ಅದರ ವೇಗವು ಗಂಟೆಗೆ 113 ಕಿ.ಮೀ. ನಷ್ಟಿದೆ. ಮಂಗಳವಾರ ಲಾಸ್ ಏಂಜಲೀಸ್ ಜನರ ಪಾಲಿಗೆ ಅತ್ಯಂತ ಅಪಾಯಕಾರಿ ದಿನ ಆಗಿರಲಿದೆ ಎಂದು ಹವಾಮಾನ ತಜ್ಞ ರಿಚ್ ಥಾಮ್ಸನ್ ಹೇಳಿದ್ದಾರೆ.

'70 ನೀರಿನ ಟ್ರಕ್‌ಗಳು ಬೆಂಕಿ ನಂದಿಸಲು ಸಿಬ್ಬಂದಿಗೆ ನೆರವಾಗುತ್ತಿವೆ' ಎಂದು ಲಾಸ್ ಏಂಜಲೀಸ್ ಕೌಂಟಿಯ ಅಗ್ನಿಶಾಮಕ ಕೇಂದ್ರದ ಮುಖ್ಯಸ್ಥ ಆಂಥೋನಿ ಸಿ. ಮರ್ರೋನ್ ತಿಳಿಸಿದರು. ಎಂಟು ತಿಂಗಳಿನಿಂದ ಇಲ್ಲಿ ಸರಿಯಾಗಿ ಮಳೆಯಾಗದಿರುವುದರಿಂದ ಬೆಂಕಿಯು ವ್ಯಾಪಕವಾಗಿ ಹರಡುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.



ಕ್ಯಾಲಿಫೋರ್ನಿಯಾದ ಪ್ಯಾಲಿಸೇಡ್ಸ್‌ನಲ್ಲಿ ಕಟ್ಟಡವೊಂದು ಅಗ್ನಿಗೆ ಆಹುತಿಯಾಗಿದೆ —ಎಎಫ್‌ಪಿ ಚಿತ್ರ

ನೆರವಿನ ಮಹಾಪೂರ

ಕಾಳ್ಗಿಚ್ಚಿನಿಂದ ನಲುಗಿರುವ ಕ್ಯಾಲಿಫೋರ್ನಿಯಾಗೆ ನೆರವು ನೀಡಲು ಹಲವು ತಾರೆಯರು ಮುಂದಾಗಿದ್ದಾರೆ.

ನಟಿ ಆ್ಯಂಜಲೀನಾ ಜೋಲಿ ಸಂತ್ರಸ್ತರಿಗೆ ದಿನಸಿಯನ್ನು ಕಳುಹಿಸಿದ್ದಾರೆ. ನಟಿ, ನಿರ್ಮಾಪಕಿ ಜೆಮಿ ಲೀ ಕಾರ್ಟಸ್ ಅವರು ₹8.6 ಕೋಟಿ (1 ಮಿಲಿಯನ್ ಡಾಲರ್) ದೇಣಿಗೆ ನೀಡಿದ್ದಾರೆ. ನಟಿ ಶರೋನ್ ಸ್ಟೋನ್, ಪ್ಯಾರಿಸ್ ಹಿಲ್ಟನ್, ಗಾಯಕಿ ಸೆಲೆನಾ ಗೋಮೆಜ್ ಸೇರಿದಂತೆ ಹಲವರು ಲಾಸ್ ಏಂಜಲೀಸ್ ಸಹಾಯಹಸ್ತ ಚಾಚಿದ್ದಾರೆ. ಸ್ಥಳಾಂತರಗೊಂಡಿರುವ ಸಂತ್ರಸ್ತರಿಗೆ ನೆರವು ನೀಡುವಂತೆ ಬೆಂಬಲಿಗರಲ್ಲಿ ಮನವಿ ಮಾಡುತ್ತಿದ್ದಾರೆ.

ಜಗಳ: ಕಾಂಗ್ರೆಸ್ ತಳಮಳ

ಒಂದನೇ ಪುಟದಿಂದ...

ಪಕ್ಷದೊಳಗಿನ 'ಆಂತರಿಕ ಸಂಘರ್ಷ' ಬೀದಿಗೆ ಬಂದಿದ್ದರೂ 'ನಾಯಕರ ನಡುವೆ ಯಾವುದೇ ಗೊಂದಲ ಇಲ್ಲ' ಎನ್ನುವ ಮೂಲಕ ಪರಿಸ್ಥಿತಿ ಹೈಕಮಾಂಡ್ ಹಿಡಿತದಲ್ಲಿದೆ ಎಂದು ಸುರ್ಜೇವಾಲಾ ಘೋಷಿಸಿದರು.

'ಪಕ್ಷದ ನಾಯಕರು ಶಿಸ್ತು ಪಾಲಿಸದಿದ್ದರೆ ಕಾರ್ಯಕರ್ತರು ಶಿಸ್ತಿನಿಂದ ಇರಲು ಹೇಗೆ ಸಾಧ್ಯ? ನಮ್ಮ ಪಕ್ಷದ ನಾಯಕರ ಪೈಕಿ ಕೆಲವರು ಶಿಸ್ತು ಪಾಲಿಸುತ್ತಿಲ್ಲ. ಯಾವ ನಾಯಕರೂ ಪಕ್ಷವನ್ನು 'ಬುಲ್ಡೋಜ್' ಮಾಡಬೇಡಿ. ಪಕ್ಷಕ್ಕಿಂತ ನಾವು ದೊಡ್ಡವರು ಎಂದು ಯಾರೂ ಭಾವಿಸಬೇಡಿ' ಎಂದು ರಾಜ್ಯ ನಾಯಕರಿಗೆ ಸುರ್ಜೇವಾಲಾ ಚಾಟಿ ಬೀಸಿದರು. 'ನಾಯಕರ ಭಾವನೆ ಅರ್ಥವಾಗುತ್ತದೆ. ಆದರೆ, ಪಕ್ಷ ತಾಯಿ ಇದ್ದಂತೆ. ಸರ್ಕಾರ ಎನ್ನುವುದು ಮಗು. ಸಚಿವರು, ಶಾಸಕರು, ನಾಯಕರು ಯಾರೂ ಶಿಸ್ತು ಮೀರಬಾರದು. ಕಾರ್ಯಕರ್ತರನ್ನು ಗೌರವದಿಂದ ಕಾಣಬೇಕು' ಎಂದು ಸಚಿವರಿಗೆ ತಾಕೀತು ಮಾಡಿದರು' ಎಂದು ಗೊತ್ತಾಗಿದೆ.

'ವೈಯಕ್ತಿಕ ನೆಲೆಯಲ್ಲಿ ಜಾತಿ ಸಮಾವೇಶಗಳನ್ನು ಮಾಡಲು ಯಾರಿಗೂ ಅವಕಾಶ ಇಲ್ಲ. ಅಂತಹ ಸಮಾವೇಶಗಳನ್ನು ಪಕ್ಷದಿಂದಲೇ ಆಯೋಜಿಸಲಾಗುವುದು. ಪಕ್ಷದ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ರಾಜ್ಯದಲ್ಲಿ ಜಾರಿಯಲ್ಲಿರುವ ಗ್ಯಾರಂಟಿ ಯೋಜನೆಗಳು ಕೂಡಾ ಪಕ್ಷದ ತೀರ್ಮಾನ. ಪಕ್ಷದ ತೀರ್ಮಾನಗಳ ವಿರುದ್ಧ ಧ್ವನಿ ಎತ್ತಿದವರ ಮೇಲೆ ಕ್ರಮ ಖಚಿತ' ಎಂದು ಎಚ್ಚರಿಕೆಯನ್ನೂ ನೀಡಿದರು.

'ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಬಿಜೆಪಿಯವರು ಕಾಂಗ್ರೆಸ್ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದು ಸುರ್ಜೇವಾಲಾ ಸಮರ್ಥನೆ ನೀಡಿದರು' ಎಂದೂ ತಿಳಿದುಬಂದಿದೆ.

ಗೈರಾದ ಸಚಿವರು: ಡಿ.ಕೆ. ಶಿವಕುಮಾರ್ ಅವರು ವಿದೇಶ ಪ್ರವಾಸದಲ್ಲಿದ್ದಾಗ ಸಚಿವ ಸತೀಶ ಜಾರಕಿಹೊಳಿ ಜ. 2ರಂದು ಆಯೋಜಿಸಿದ್ದ ಔತಣಕೂಟ ಸಭೆಯಲ್ಲಿ ಮುಖ್ಯಮಂತ್ರಿ, ಕೆಲವು ಸಚಿವರು, ಶಾಸಕರು ಭಾಗವಹಿಸಿದ್ದರು. ಈ ಬೆನ್ನಲ್ಲೆ, ಪರಮೇಶ್ವರ ಅವರು ತಮ್ಮ ಸಮುದಾಯದ (ಎಸ್‌ಸಿ, ಎಸ್‌ಟಿ) ಸಮಸ್ಯೆಗಳ ಕುರಿತು ಚರ್ಚಿಸಲು ಔತಣಕೂಟ ಆಯೋಜಿಸಲು ಮುಂದಾಗಿದ್ದರು. ಈ ಸಭೆಯ ಬಗ್ಗೆ ಡಿ.ಕೆ. ಶಿವಕುಮಾರ್ ನೀಡಿದ ದೂರು, ಪಕ್ಷದೊಳಗೆ ಗುಂಪುಗಾರಿಕೆ ಸಾಧ್ಯತೆಯ ಮುನ್ಸೂಚನೆ ಸಿಗುತ್ತಿದ್ದಂತೆಯೇ ವರಿಷ್ಠರು ಮಧ್ಯಪ್ರವೇಶಿಸಿದ್ದರು. ಇದರಿಂದ ಬೇಸರಗೊಂಡಿದ್ದ ಪರಮೇಶ್ವರ ಮತ್ತು ಕೆ.ಎನ್. ರಾಜಣ್ಣ ಸಭೆಗೆ ಗೈರಾದರು ಎಂದು ಗೊತ್ತಾಗಿದೆ.

ಬೆಳಗಿನ ಸಭೆಗೆ ಗೈರಾಗಿದ್ದ ಜಿ. ಪರಮೇಶ್ವರ ಹಾಗೂ ಕೆ.ಎನ್. ರಾಜಣ್ಣ ಅವರು ಸಂಜೆ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಪಾಲ್ಗೊಂಡಿದ್ದರು.

ಹೈಕಮಾಂಡ್ ತೀರ್ಮಾನವೇ ಅಂತಿಮ– ಸಿಎಂ

'ಯಾವುದೇ ವಿಷಯದಲ್ಲಿ ಹೈಕಮಾಂಡ್ ತೀರ್ಮಾನ ಏನೇ ಇದ್ದರೂ, ನಾನೂ ಮತ್ತು ಡಿ.ಕೆ. ಶಿವಕುಮಾರ್ ಒಪ್ಪಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ನಗರದ ರ್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಸೋಮವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, ಯಾವುದೇ ವಿಷಯವನ್ನು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಬೇಕು. ಮಾಧ್ಯಮಗಳಿಗೆ ಹೇಳಿಕೆ ನೀಡಬಾರದು. ಮಾಧ್ಯಮಗಳಿಗೆ ಹೇಳಿಕೆ ನೀಡಿದರೆ ಪಕ್ಷ ಕ್ರಮ ತೆಗೆದುಕೊಳ್ಳಲಿದೆ ಎಂದು ಎಚ್ಚರಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಪಕ್ಷಾತೀತವಾಗಿ ಎಲ್ಲ ಶಾಸಕರಿಗೆ ತಲಾ ₹10 ಕೋಟಿ ಅನುದಾನ ಕೊಡಲಾಗುವುದು ಎಂದೂ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ ಎಂದೂ ಮೂಲಗಳು ತಿಳಿಸಿವೆ. 'ಬೆಳಗಾವಿಯಲ್ಲಿ ಇದೇ 21ರಂದು ನಡೆಯಲಿರುವ ಸಮಾವೇಶದ ಕುರಿತು ಸಭೆಗೆ ಮಾಹಿತಿ ನೀಡಿದ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯದ ವಿವಿಧ ಕಡೆ ಪಕ್ಷದ 100 ಕಚೇರಿಗಳನ್ನು ನಿರ್ಮಿಸಲು ಕೆಲವು ಸಚಿವರು ನಿರಾಸಕ್ತಿ ತೋರುತ್ತಿದ್ದಾರೆ. ಈ ನಡೆಯನ್ನು ಸಹಿಸುವುದಿಲ್ಲ. ಅಲ್ಲದೆ, ಏನೇ ವಿಚಾರಗಳಿದ್ದರೂ ಪಕ್ಷದ ವೇದಿಕೆಯಲ್ಲೇ ಚರ್ಚಿಸುವಂತೆ ಸೂಚಿಸಿದರು' ಎಂದು ಗೊತ್ತಾಗಿದೆ.

'ಸುರ್ಜೇವಾಲಾ ಸರಿಯಾಗಿ ಹೇಳಿದ್ದಾರೆ'

'ಸಚಿವರು ಮತ್ತು ಕಾರ್ಯಕರ್ತರ ಸಮಕ್ಷಮದಲ್ಲಿ ಜವಾಬ್ದಾರಿ ಮತ್ತು ಶಿಸ್ತಿನ ಬಗ್ಗೆ ಸುರ್ಜೇವಾಲಾ ಮಾತನಾಡಿದ್ದಾರೆ. ಮೊದಲು ಪಕ್ಷ ಎಂದು ನಾವೂ ಹೇಳಿದ್ದೇವೆ. ಆ ನಂತರ ಉಳಿದ ಎಲ್ಲ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹಾಗೆಂದು, ದಲಿತರ ಸಭೆಯ ಬಗ್ಗೆ ಸುರ್ಜೇವಾಲಾ ಹೇಳಿಲ್ಲ. ಸಚಿವರ ಜವಾಬ್ದಾರಿಗಳು, ಸಾಧನೆಗಳ ಕುರಿತು ಅವರು ಹೇಳಿದ್ದಾರೆ. ಎರಡು ತಿಂಗಳ ಒಳಗೆ ಸಚಿವರಿಗೆ ಜವಾಬ್ದಾರಿ ನೀಡುತ್ತೇವೆ ಎಂದು ಹೇಳಿದ್ದಾರೆ. ಕಾರ್ಯದಕ್ಷತೆ ನೋಡುತ್ತೇವೆ ಎಂದು ಹೇಳಿದ್ದಿಲ್ಲ' ಎಂದರು.

> ಪಕ್ಷ ಮೊದಲು, ಸರ್ಕಾರ ನಂತರ. ಪಕ್ಷ ಇದ್ದಾಗ ಎಷ್ಟು ಸರ್ಕಾರಗಳನ್ನು ಬೇಕಾದರೂ ರಚಿಸಬಹುದು ಎನ್ನುವ ಅಭಿಪ್ರಾಯವನ್ನು ಪಕ್ಷದ ಸರ್ವ ಸದಸ್ಯರ ಸಭೆಯಲ್ಲಿ ತಿಳಿಸಿದ್ದೇನೆ
> **ರಣದೀಪ್ ಸಿಂಗ್ ಸುರ್ಜೇವಾಲಾ,** ಕಾಂಗ್ರೆಸ್ ರಾಜ್ಯ ಉಸ್ತುವಾರಿ

'ಅಧಿಕಾರ ಹಂಚಿಕೆ ಚರ್ಚೆ ಆಗಿಲ್ಲ'

ತುಮಕೂರು: 'ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಕುರಿತು ಯಾವುದೇ ಚರ್ಚೆ ಆಗಿಲ್ಲ. ಈ ಬಗ್ಗೆ ಚರ್ಚೆ ನಡೆಯುತ್ತಿದೆ ಎಂಬುದು ಸತ್ಯಕ್ಕೆ ದೂರವಾದ ಮಾತು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಯಾವ ಒಪ್ಪಂದವೂ ಇಲ್ಲ: ಬೆಂಗಳೂರಿನಲ್ಲಿ ಮಾತನಾಡಿದ ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ, 'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಯಾವ ಒಪ್ಪಂದವೂ ಇಲ್ಲ. ನಮ್ಮಲ್ಲಿ ಹೈಕಮಾಂಡ್ ಇದೆ. ಇಬ್ಬರೂ ಪರಸ್ಪರ ವಿಶ್ವಾಸದಲ್ಲೇ ಇದ್ದಾರೆ' ಎಂದರು.

ಸ್ಪೇನ್–ಭಾರತದ ನಡುವೆ ಒಪ್ಪಂದ

ಮ್ಯಾಡ್ರಿಡ್ (ಪಿಟಿಐ): ಕ್ರೀಡೆ ಹಾಗೂ ಸುಸ್ಥಿರ ನಗರಾಭಿವೃದ್ಧಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಭಾರತ ಹಾಗೂ ಸ್ಪೇನ್ ಎರಡು ಒಪ್ಪಂದಗಳಿಗೆ ಸಹಿ ಹಾಕಿರುವುದಾಗಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದರು.

ಸ್ಪೇನ್‌ನ ವಿದೇಶಾಂಗ ವ್ಯವಹಾರಗಳ ಸಚಿವ ಜೋಸ್ ಮ್ಯಾನ್ಯುಯಲ್ ಅಲ್ಬರೆಸ್ ಅವರೊಟ್ಟಿಗೆ ಸಭೆ ನಡೆಸಿದ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜೈಶಂಕರ್, 'ಭಾರತದಲ್ಲಿ ಸ್ಪೇನ್‌ನ 230 ಕಂಪನಿಗಳಿವೆ. ಭಾರತದ ಮೇಕ್ ಇನ್ ಇಂಡಿಯಾ ಪರಿಕಲ್ಪನೆಗೆ ಅವೆಲ್ಲ ಕೈಜೋಡಿಸಲು ಸ್ವಾಗತಿಸುತ್ತೇನೆ' ಎಂದು ಹೇಳಿದರು.

2026ನೇ ಇಸವಿಯು ಉಭಯ ದೇಶಗಳಿಗೆ ಸಂಸ್ಕೃತಿ, ಪ್ರವಾಸೋದ್ಯಮ ಹಾಗೂ ಕೃತಕ ಬುದ್ಧಿಮತ್ತೆ ಕ್ಷೇತ್ರಗಳಲ್ಲಿ ಮುಖ್ಯವಾದುದಾಗಿದೆ. ರಕ್ಷಣೆ, ರೈಲ್ವೆ, ನಗರಾಭಿವೃದ್ಧಿ ತಂತ್ರಜ್ಞಾನ, ಪರಿಸರಸ್ನೇಹಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉಭಯ ದೇಶಗಳಿಗೆ ಒಟ್ಟಾಗಿ ಕೆಲಸ ಮಾಡುವ ಅವಕಾಶಗಳಿವೆ ಎಂದೂ ಹೇಳಿದರು.

ಸ್ಪೇನ್ ಮತ್ತು ಐರೋಪ್ಯ ಒಕ್ಕೂಟದ ಜೊತೆಗಿನ ಭಾರತದ ಬಾಂಧವ್ಯವನ್ನು 'ಈ ಪ್ರಕ್ಷುಬ್ಧ ಸಂದರ್ಭದಲ್ಲಿ ಸ್ಥಿರಗೊಳಿಸಬೇಕಾದ ಅಗತ್ಯವಿದೆ' ಎಂದೂ ಅವರು ಪ್ರತಿಪಾದಿಸಿದರು.

ಮ್ಯಾಡ್ರಿಡ್‌ನಲ್ಲಿ ನಡೆಯುತ್ತಿರುವ ರಾಯಭಾರಿಗಳ 9ನೇ ವಾರ್ಷಿಕ ಸಮ್ಮೇಳನದಲ್ಲಿ ಅವರು ಈ ವಿಷಯವನ್ನು ಮಂಡಿಸಿದರು.

ವಿದೇಶಾಂಗ ಸಚಿವರಾದ ನಂತರ ಸ್ಪೇನ್‌ಗೆ ಮೊದಲ ಬಾರಿ ಭೇಟಿ ನೀಡಿರುವ ಜೈಶಂಕರ್, ಸೋಮವಾರದಿಂದ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಸ್ಪೇನ್ ಅಧ್ಯಕ್ಷ ಪೆದ್ರೊ ಭಾರತಕ್ಕೆ ಭೇಟಿ ನೀಡಿದ ಎರಡೂವರೆ ತಿಂಗಳ ನಂತರ ಜೈಶಂಕರ್ ಇಲ್ಲಿಗೆ ಭೇಟಿ ನೀಡಿದ್ದಾರೆ.

ರಷ್ಯಾ ಸೇನೆಯಲ್ಲಿದ್ದ ಕೇರಳದ ಮತ್ತೊಬ್ಬ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಷ್ಯಾ–ಉಕ್ರೇನ್ ಯುದ್ಧಪೀಡಿತ ಪ್ರದೇಶದಲ್ಲಿ ಸಿಲುಕಿಬಿದ್ದಿದ್ದ ಕೇರಳದ ತ್ರಿಶ್ಶೂರ್ ಮೂಲದ ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದಾರೆ ಎಂದು ವರದಿಯಾಗಿದೆ.

ಬಿನಿಲ್ ಬಾಬು (32) ಯುದ್ಧದಲ್ಲಿ ಸಾವಿಗೀಡಾಗಿದ್ದಾರೆ ಎಂದು ಅವರ ಕುಟುಂಬಕ್ಕೆ ರಾಯಭಾರ ಕಚೇರಿ ಅಧಿಕಾರಿಗಳು ಹಾಗೂ ರಷ್ಯಾ ಸೇನೆಯಲ್ಲಿರುವ ಇನ್ನೊಬ್ಬ ಕೇರಳ ಮೂಲದ ವ್ಯಕ್ತಿಯು ಮಾಹಿತಿ ನೀಡಿದ್ದಾರೆ. ಆದರೆ, ಇದನ್ನು ಸರ್ಕಾರ ದೃಢಪಡಿಸಿಲ್ಲ.

ಬಿನಿಲ್ ಹಾಗೂ ಜೈನ್ ಕುರಿಯನ್ (27) ಅವರಿಗೆ ರಷ್ಯಾದಲ್ಲಿ ಎಲೆಕ್ಟ್ರೀಷಿಯನ್ ಕೆಲಸ ಕೊಡಿಸುವುದಾಗಿ ಭರವಸೆ ನೀಡಿ, ಬಳಿಕ ಅಕ್ರಮವಾಗಿ ಸೇನೆಗೆ ಸೇರಿಸುವ ಮೂಲಕ ನೇಮಕಾತಿ ಸಂಸ್ಥೆಯೊಂದು ವಂಚಿಸಿತ್ತು. ಕಳೆದ ವರ್ಷ ಜೂನ್‌ನಿಂದ ಇಬ್ಬರೂ ರಷ್ಯಾ ಸೇನೆಯಲ್ಲಿ ಯುದ್ಧಭೂಮಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಂದ ತಪ್ಪಿಸಿಕೊಳ್ಳಲು ಅವರು ಯತ್ನಿಸಿದ್ದರಾದರೂ ಅದು ಸಾಧ್ಯವಾಗಿರಲಿಲ್ಲ.

ಯುದ್ಧದಲ್ಲಿ ಜೈನ್ ಕುರಿಯನ್ ಕೂಡ ಗಾಯಗೊಂಡಿದ್ದು, ಅವರು ಮಾಸ್ಕೊದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಝಡ್–ಮೋಡ್ ಸುರಂಗದ ಉದ್ಘಾಟನೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸಚಿವ ನಿತಿನ್ ಗಡ್ಕರಿ, ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮತ್ತು ಲೆ.ಗವರ್ನರ್ ಮನೋಜ್ ಸಿನ್ಹಾ ಅವರು ಫೋಟೊಕ್ಕೆ ಪೋಸ್ ನೀಡಿದರು —ಪಿಟಿಐ ಚಿತ್ರ

- ಸುರಂಗ ನಿರ್ಮಾಣಕ್ಕೂ ಮೊದಲು ಈ ರಸ್ತೆಯು ಝಡ್ ಆಕಾರದಲ್ಲಿ ಇದ್ದ ಕಾರಣ ಇದಕ್ಕೆ ಝಡ್-ಮೋಡ್ ಸುರಂಗ ಎಂದು ಹೆಸರಿಡಲಾಗಿದೆ. ಹಿಂದಿಯಲ್ಲಿ ಝಡ್-ಮೋಡ್ ಎಂದರೆ ಝಡ್ -ತಿರುವು ಎಂದರ್ಥ.
- ಅಕ್ಟೋಬರ್ 2024ರಲ್ಲಿ ಝಡ್-ಮೋಡ್ ಸುರಂಗದ ಸಮೀಪ ಉಗ್ರರು ದಾಳಿ ನಡೆಸಿದ್ದರು. ಪರಿಣಾಮವಾಗಿ ಏಳು ಮಂದಿ ಕಾರ್ಮಿಕರು ಮೃತಪಟ್ಟಿದ್ದರು.

6.5 ಕಿ.ಮೀ ಸುರಂಗ ಮಾರ್ಗದ ಉದ್ದ

₹2,700 ಕೋಟಿ ಸುರಂಗ ನಿರ್ಮಾಣಕ್ಕೆ ಮಾಡಲಾದ ವೆಚ್ಚ

7.5 ಮೀಟರ್ ದ್ವಿಪಥ ಸುರಂಗ ಮಾರ್ಗದ ರಸ್ತೆಯಲ್ಲಿ ತುರ್ತು ಸನ್ನಿವೇಶದಲ್ಲಿ ಪಾರಾಗಲು ನಿರ್ಮಿಸಿರುವ ಮಾರ್ಗದ ಅಗಲ

8,650 ಅಡಿ ಸಮುದ್ರ ಮಟ್ಟದಿಂದ ಸುರಂಗ ಮಾರ್ಗವಿರುವ ಎತ್ತರ

ಝಡ್–ಮೋಡ್ ಸುರಂಗ ಮಾರ್ಗ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ

ಲಡಾಖ್‌ಗೆ ಸರ್ವ ಋತುವಿನಲ್ಲೂ ಸಂಪರ್ಕ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಗಾಂದರ್‌ಬಲ್ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ 6.5 ಕಿ.ಮೀ ಉದ್ದದ ಝಡ್-ಮೋಡ್ ಸುರಂಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಉದ್ಘಾಟಿಸಿದರು.

ಶ್ರೀನಗರ–ಲೇಹ್ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಾಣವಾಗಿರುವ ಈ ದ್ವಿಪಥ ಸುರಂಗವು ಶ್ರೀನಗರದಿಂದ ಸೋನಾಮಾರ್ಗ್‌ ನಡುವಿನ ಸಂಪರ್ಕವನ್ನು ಸುಧಾರಿಸಲಿದೆ ಮತ್ತು ಪಾಕಿಸ್ತಾನ, ಚೀನಾದೊಂದಿಗೆ ಗಡಿ ಹಂಚಿಕೊಂಡಿರುವ ಆಯಕಟ್ಟಿನ ಪ್ರದೇಶವಾಗಿರುವ ಲಡಾಖ್‌ಗೆ ಸರ್ವ ಋತುವಿನಲ್ಲೂ ಸಂಪರ್ಕ ಲ್ಪಿಸುತ್ತದೆ.

ಉದ್ಘಾಟನೆ ಬಳಿಕ ಸುರಂಗದ ಒಳಗೆ ತೆರಳಿ ಕಾರ್ಯಕ್ರಮ ನಿಗದಿಯಾದ ಸ್ಥಳದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ನಾನು ನೀಡಿರುವ ಎಲ್ಲ ವಾಗ್ದಾನಗಳನ್ನೂ ಈಡೇರಿಸುವೆ. ಎಲ್ಲದಕ್ಕೂ ಸರಿಯಾದ ಸಮಯ ಬರಬೇಕು. ಸರಿಯಾದ ಸಮಯಕ್ಕೆ ಎಲ್ಲವೂ ನಡೆಯಲಿವೆ ಎಂದು ಹೇಳಿದರು.

ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು, ಕೇಂದ್ರಾಡಳಿತ ಪ್ರದೇಶಕ್ಕೆ ರಾಜ್ಯದ ಸ್ಥಾನಮಾನವನ್ನು ಮರಳಿಸಬೇಕೆಂದು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಕ್ಕೆ ಪ್ರತಿಯಾಗಿ ಮೋದಿ ಈ ಹೇಳಿಕೆ ನೀಡಿದರು.

'ಜಮ್ಮು ಮತ್ತು ಕಾಶ್ಮೀರ ಈ ದೇಶದ ಕಿರೀಟ. ಇದು ಅತ್ಯಂತ ಸುಂದರ ಮತ್ತು ಸಮೃದ್ಧವಾಗಿರಬೇಕು' ಎಂದು ಬಯಸುತ್ತೇನೆ ಎಂದರು.

'ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ನೆಲಸುತ್ತಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಇದರ ಪರಿಣಾಮವನ್ನು ಕಾಣುತ್ತಿದ್ದೇವೆ. ಕಾಶ್ಮೀರದಲ್ಲಿ ಅಭಿವೃದ್ಧಿಯ ಹೊಸ ಅಧ್ಯಾಯವೊಂದು ಇಂದು ಆರಂಭವಾಗಿದೆ' ಎಂದು ಹೇಳಿದರು.

ಯೋಜನೆಯನ್ನು ನನಸು ಮಾಡಿದ ಎಂಜಿಯರ್‌ಗಳು ಮತ್ತು ಕಾರ್ಮಿಕರೊಂದಿಗೆ ಸಂವಾದ ನಡೆಸಿದರು. ಪ್ರತಿಕೂಲ ಹವಾಮಾನದ ನಡುವೆಯೂ ಸುರಂಗ ನಿರ್ಮಾಣ ಮಾಡಿದ ಅವರ ಶ್ರಮವನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಭಾಗಿಯಾಗಿದ್ದರು.

ಯುಪಿಎ ಎರಡನೇ ಅವಧಿಯ ಸರ್ಕಾರದಲ್ಲಿಯೇ ಯೋಜನೆಯನ್ನು ರೂಪಿಸಲಾಗಿತ್ತು. ಆಗಿನ ಸಾರಿಗೆ ಸಚಿವ ಸಿ.ಪಿ ಜೋಶಿ ಅವರು 2012ರಲ್ಲಿ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಸುರಂಗ ಮಾರ್ಗದ ಕಾಮಗಾರಿಯು 2015ರಲ್ಲಿ ಆರಂಭವಾಗಿತ್ತು. ಹಣಕಾಸಿನ ಸಮಸ್ಯೆಯಿಂದಾಗಿ 2018ರಲ್ಲಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು. 2019ರಲ್ಲಿ ಮತ್ತೆ ಟೆಂಡರ್ ಕರೆಯಲಾಗಿತ್ತು. 2020 ಜನವರಿಯಲ್ಲಿ ಎಪಿಸಿಒ ಇನ್‌ಫ್ರಾಟೆಕ್ ಸಂಸ್ಥೆ ನಿರ್ಮಾಣದ ಹೊಣೆ ವಹಿಸಿಕೊಂಡಿತ್ತು.

ರಕ್ಷಣಾತ್ಮಕ ಮಹತ್ವ

- ರಕ್ಷಣಾ ಸರಕುಗಳ ಸಾಗಾಟಕ್ಕೆ ನೆರವು
- ಸದ್ಯ ಸೇನೆಯು ಲಡಾಖ್‌ನ ಮುಂಚೂಣಿ ಸ್ಥಳಗಳಿಗೆ ಸಿಬ್ಬಂದಿ ನಿಯೋಜಿಸಲು ವಾಯುಮಾರ್ಗವನ್ನೇ ನೆಚ್ಚಿಕೊಂಡಿದೆ

ಪ್ರವಾಸೋದ್ಯಮ ಮಹತ್ವ

- ಸೋನಾಮಾರ್ಗ್‌ ಮತ್ತಿತರ ರಮಣೀಯ ತಾಣಗಳ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗಲಿದೆ
- ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಆರ್ಥಿಕ ಅಭಿವೃದ್ಧಿ, ಸಾಮಾಜಿಕ-ಸಾಂಸ್ಕೃತಿಕ ಸಮನ್ವಯಕ್ಕೆ ಪ್ರೋತ್ಸಾಹ ಸಿಗಲಿದೆ
- ಬೇಸಿಗೆಯಲ್ಲಿ ಪ್ರವಾಸಿಗಳು, ಸ್ಥಳೀಯರಿಂದ ತುಂಬಿ ತುಳುಕುವ ಈ ಪ್ರದೇಶವು ಚಳಿಗಾಲದಲ್ಲಿ ಹಿಮಪಾತದಿಂದ ಕೂಡಿರುತ್ತಿತ್ತು.
- ಜೋಜಿಲಾ ಸುರಂಗವು 2028ರಲ್ಲಿ ಪೂರ್ಣಗೊಂಡ ನಂತರ ಝಡ್-ಮೋಡ್ ಸುರಂಗವು ಕಾಶ್ಮೀರ ಕಣಿವೆ ಮತ್ತು ಲಡಾಖ್ ನಡುವಿನ ಅಂತರವನ್ನು 49 ಕಿ.ಮೀ ನಿಂದ 43 ಕಿ.ಮೀ ತಗ್ಗಿಸುತ್ತದೆ.

ದೆಹಲಿ ವಿಧಾನಸಭಾ ಚುನಾವಣೆ: ಮತ ಸೆಳೆಯಲು ಕಾಂಗ್ರೆಸ್, ಬಿಜೆಪಿ ಕಸರತ್ತು

ಪೂರ್ವಾಂಚಲಿ ವಿವಾದದ ಸದ್ದು

ಪ್ರಜಾವಾಣಿ ವಾರ್ತೆ

1.55 ಕೋಟಿ ನಗರದ ಮತದಾರರ ಸಂಖ್ಯೆ

40 ಲಕ್ಷ ಪೂರ್ವಾಂಚಲಿ ಮತದಾರರು

20 ಕ್ಷೇತ್ರಗಳಲ್ಲಿ ಪೂರ್ವಾಂಚಲಿಗಳ ಮತಗಳೇ ನಿರ್ಣಾಯಕ

ಪೂರ್ವಾಂಚಲಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕ್ಷೇತ್ರಗಳು: ಉತ್ತಮ್ ನಗರ, ವಿಕಾಸಪುರಿ, ಆದರ್ಶನಗರ, ಬಾದ್ಲಿ, ಬುರಾರಿ, ಕುಂಡಲಿ, ಲಕ್ಷ್ಮಿ ನಗರ, ಕೃಷ್ಣನಗರ, ಗಾಂಧಿನಗರ, ಸೀಮಾಪುರಿ, ಮುಸ್ತಾಫನಗರ, ಪತ್‌ಪರ್‌ಗಂಜ್, ರಿತಾಲ, ತ್ರಿಲೋಕಪುರಿ, ಸಂಗಮ್ ವಿಹಾರ್.

ಪ್ರಜಾ ಮತ ಜನತಂತ್ರದ ಹಬ್ಬ

ನವದೆಹಲಿ: ಪೂರ್ವಾಂಚಲಿಗಳ ಕುರಿತು ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ನೀಡಿರುವ ಹೇಳಿಕೆಯು ದೆಹಲಿ ವಿಧಾನಸಭಾ ಚುನಾವಣಾ ಕಣದಲ್ಲಿ ಕೋಲಾಹಲ ಎಬ್ಬಿಸಿದೆ. ಈ ವಿಷಯವನ್ನೇ ಪ್ರಮುಖ ಚುನಾವಣಾ ವಿಷಯವನ್ನಾಗಿಸಿಕೊಂಡು ಬಿಜೆಪಿ ಮತ ಕ್ರೋಡೀಕರಣಕ್ಕೆ ಕಸರತ್ತು ನಡೆಸಿದೆ.

ಪೂರ್ವಾಂಚಲ ಪ್ರದೇಶವು ಉತ್ತರ ಪ್ರದೇಶ ಹಾಗೂ ಬಿಹಾರದ ಕೆಲವು ಭಾಗಗಳನ್ನು ಒಳಗೊಂಡಿದೆ. ದೆಹಲಿಯ ಒಟ್ಟು ಮತದಾರರಲ್ಲಿ ಪೂರ್ವಾಂಚಲಿಗಳ ಸಂಖ್ಯೆ ಶೇ 25ರಷ್ಟಿದೆ. ಕಡು ಬಡತನದಿಂದ ಬಳಲಿ ಉದ್ಯೋಗ ಅರಸಿ ಇಲ್ಲಿಗೆ ವಲಸೆ ಬಂದವರು ಇವರು. ತರಕಾರಿ ಮಾರುತ್ತಾ, ಆಟೊ ಓಡಿಸುತ್ತಾ, ಕೂಲಿ ಕೆಲಸ ಮಾಡುತ್ತಾ ಬದುಕು ಕಟ್ಟಿಕೊಂಡಿದ್ದಾರೆ. ದೆಹಲಿಯ ಕೊಳೆಗೇರಿಗಳಲ್ಲಿ ಇವರು ಗಣನೀಯ ಸಂಖ್ಯೆಯಲ್ಲಿ ಇದ್ದಾರೆ. ಇವರ ತಿಂಗಳ ದುಡಿಮೆ ₹10 ಸಾವಿರದಿಂದ ₹15 ಸಾವಿರದಷ್ಟು. ಎಎಪಿ ಸರ್ಕಾರದ ಉಚಿತ ಹಾಗೂ ಕಲ್ಯಾಣ ಯೋಜನೆಗಳಿಂದ ಹೆಚ್ಚು ಅನುಕೂಲ ಪಡೆದವರು ಇವರು. 2015 ಹಾಗೂ 2020ರ ವಿಧಾನಸಭಾ ಚುನಾವಣೆಗಳಲ್ಲಿ ಎಎಪಿಯ ಅಭೂತಪೂರ್ವ ಗೆಲುವಿನಲ್ಲಿ ಇವರ ಮತದ ಪಾಲು ದೊಡ್ಡದು. ಎಎಪಿಯ ಸಾಂಪ್ರದಾಯಿಕ ಮತದಾರರ ಮನ ಗೆಲ್ಲಲು ಬಿಜೆಪಿ ಕಳೆದ ಆರು ತಿಂಗಳಿಂದ ಅನೇಕ ಕಾರ್ಯಕ್ರಮಗಳನ್ನು ನಡೆಸಿತ್ತು. ವಿಶೇಷವೆಂದರೆ, ಬಿಜೆಪಿ ರಾಜ್ಯ ಘಟಕದಲ್ಲಿ ಪೂರ್ವಾಂಚಲಿ ಮೋರ್ಚಾವೂ ಇದೆ. ವಲಸಿಗರ ಮತಗಳನ್ನು ಸೆಳೆಯುವ ಉದ್ದೇಶದಿಂದ ಚತ್ ಪೂಜೆಯ ಸಂದರ್ಭದಲ್ಲಿ ಎಎಪಿ ಹಾಗೂ ಬಿಜೆಪಿ ನಾಯಕರು ಅನೇಕ ಬಗೆಯ ನೆರವು ನೀಡಿದ್ದರು. ಚತ್ ಪೂಜೆಗೆ ದೆಹಲಿ ಸರ್ಕಾರ ರಜೆ ನೀಡಿ, ಅನೇಕ ವ್ಯವಸ್ಥೆಗಳನ್ನು ಮಾಡಿತ್ತು.

ತಾವು ಸ್ಪರ್ಧಿಸುತ್ತಿರುವ ನವದೆಹಲಿ ವಿಧಾನಸಭಾ ಕ್ಷೇತ್ರದಲ್ಲಿ ಡಿಸೆಂಬರ್ 15ರಿಂದ ಜನವರಿ 8ರ ನಡುವಿನಲ್ಲಿ 13 ಸಾವಿರ ಮತದಾರರನ್ನು ಸೇರ್ಪಡೆಗೊಳಿಸಲಾಗಿದೆ ಎಂದು ಕೇಜ್ರಿವಾಲ್ ಅವರು ಚುನಾವಣಾ ಆಯೋಗಕ್ಕೆ ಗುರುವಾರ ದೂರು ನೀಡಿದ್ದರು. 'ಉತ್ತರ ಪ್ರದೇಶ ಹಾಗೂ ಬಿಹಾರದ ನಕಲಿ ಮತದಾರರನ್ನು ನೋಂದಾಯಿಸಲಾಗಿದೆ. ಚುನಾವಣಾ ಫಲಿತಾಂಶ ಏರುಪೇರು ಮಾಡಲು ಬಿಜೆಪಿ ಈ ಕುತಂತ್ರ ನಡೆಸಿದೆ' ಎಂದೂ ಆರೋಪಿಸಿದ್ದರು. ಇದರ ಬೆನ್ನಲ್ಲೇ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಪಕ್ಷದ ನಾಯಕರು ಕೇಜ್ರಿವಾಲ್ ವಿರುದ್ಧ ಮುಗಿಬಿದ್ದರು. 'ಉತ್ತರ ಪ್ರದೇಶ, ಬಿಹಾರದ ಜನರನ್ನು ಕೇಜ್ರಿವಾಲ್ ಅವಮಾನಿಸಿದ್ದಾರೆ' ಎಂದೂ ಬಿಜೆಪಿ ನಾಯಕರು ಕಿಡಿ ಕಾರಿದ್ದರು. ಬಿಜೆಪಿ ಕಾರ್ಯಕರ್ತರು ಕೇಜ್ರಿವಾಲ್ ನಿವಾಸದ ಬಳಿಯಲ್ಲಿ ಜಮಾಯಿಸಿ ಪ್ರತಿಭಟಿಸಿದ್ದರು.

ಇದರಿಂದ ಎಚ್ಚೆತ್ತ ಕೇಜ್ರಿವಾಲ್, ತಮ್ಮ ಹೇಳಿಕೆಯಿಂದ ಆಗಿರುವ ಹಾನಿಯನ್ನು ಕಡಿಮೆ ಮಾಡುವ ಪ್ರಯತ್ನ ನಡೆಸಿದ್ದರು. ಪೂರ್ವಾಂಚಲಿಗಳು ವಾಸಿಸುವ ಕೊಳೆಗೇರಿಗಳ ಅಭಿವೃದ್ಧಿಗೆ ತಮ್ಮ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದ್ದರು.

ರಾಜಧಾನಿಯ ಕೊಳೆಗೇರಿಗಳ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚಿನ ಚುನಾವಣಾ ರ‍್ಯಾಲಿಗಳಲ್ಲಿ ಪ್ರಸ್ತಾಪಿಸಿದ್ದರು. ಕೊಳೆಗೇರಿಗಳ ನಿವಾಸಿಗಳಿಗೆ ತಮ್ಮ ಸರ್ಕಾರ ಹಕ್ಕುಪತ್ರ ನೀಡಲಿದೆ ಎಂದೂ ಹೇಳಿದ್ದರು.

ಮತದಾರರ ಪಟ್ಟಿಗೆ ಓಝಾ ಹೆಸರು ಸೇರ್ಪಡೆ


ಅವಧ್ ಓಝಾ

ನವದೆಹಲಿ: ಶಿಕ್ಷಣ ತಜ್ಞ, ಎಎಪಿ ಅಭ್ಯರ್ಥಿ ಅವಧ್ ಓಝಾ ಅವರ ಹೆಸರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಚುನಾವಣಾ ಆಯೋಗ ಆದೇಶಿಸಿದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಸೋಮವಾರ ತಿಳಿಸಿದರು. ಈ ಮೂಲಕ ಓಝಾ ಅವರ ಉಮೇದುವಾರಿಕೆಗೆ ಎದುರಾಗಿದ್ದ ಅಡ್ಡಿಯೊಂದು ದೂರವಾಗಿದೆ.

ಕೇಜ್ರಿವಾಲ್ ಮತ್ತು ಇತರ ಹಿರಿಯ ನಾಯಕರು ಚುನಾವಣಾ ಆಯೋಗವನ್ನು ಭೇಟಿ ಮಾಡಿದ ನಂತರ ಈ ಬೆಳವಣಿಗೆ ನಡೆದಿದೆ.

ಓಝಾ ಅವರ ಹೆಸರನ್ನು ಸೇರ್ಪಡೆ ಮಾಡಲು ಅವಕಾಶ ನೀಡಿದ ಆಯೋಗಕ್ಕೆ ಕೇಜ್ರಿವಾಲ್ ಧನ್ಯವಾದ ತಿಳಿಸಿದರು.

ಓಝಾ ಅವರ ಹೆಸರನ್ನು ಗ್ರೇಟರ್ ನೋಯ್ಡಾ ಕ್ಷೇತ್ರದ ಮತದಾರರಾಗಿ ನೋಂದಾಯಿಸಲಾಗಿದೆ. ಪಟಪಡಗಂಜ್ ಕ್ಷೇತ್ರದಿಂದ ಪಕ್ಷವು ಅವರಿಗೆ ಟಿಕೆಟ್ ನೀಡಿದೆ.

ಕಾಂಗ್ರೆಸ್ ಅರ್ಜಿ ವಿಚಾರಣೆ ನಾಳೆ

ನವದೆಹಲಿ (ಪಿಟಿಐ): 1961ರ ಚುನಾವಣಾ ನಿಯಮಗಳನ್ನು ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಬುಧವಾರ ನಡೆಸಲಿದೆ.

ಸಿಜೆಐ ಸಂಜೀವ್ ಖನ್ನಾ ಅವರ ನೇತೃತ್ವದ ಪೀಠವು ಜ.15ರಂದು ಅರ್ಜಿಯ ವಿಚಾರಣೆ ನಡೆಸಲಿದೆ ಎಂದು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗಿದೆ.


ದೆಹಲಿ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಸೋಮವಾರ ಪಕ್ಷದ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ —ಎಎಫ್‌ಪಿ ಚಿತ್ರ

'ಮೋದಿ, ಕೇಜ್ರಿವಾಲ್ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ದೆಹಲಿ ಮಾಜಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರು ಜಾತಿಗಣತಿ ವಿಷಯದಲ್ಲಿ ಮೌನ ವಹಿಸಿದ್ದಾರೆ. ಹಿಂದುಳಿದವರು, ದಲಿತರು, ಬುಡಕಟ್ಟು ಜನರು ಮತ್ತು ಅಲ್ಪಸಂಖ್ಯಾತರು ಅವರವರ ಪಾಲನ್ನು ಪಡೆಯುವುದು ಇವರಿಗೆ ಇಷ್ಟವಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ವಾಗ್ದಾಳಿ ನಡೆಸಿದರು.

ದೆಹಲಿ ಚುನಾವಣೆ ಅಂಗವಾಗಿ ಮೊದಲ ಬಾರಿಗೆ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ದೆಹಲಿಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಜಾತಿಗಣತಿ ನಡೆಸುತ್ತೇವೆ ಎಂದು ಆಶ್ವಾಸನೆ ನೀಡಿದರು.

'ಎಎಪಿ ಸಂಚಾಲಕ ಕೇಜ್ರಿವಾಲ್ ಅವರು ಮೋದಿ ಅವರ ಪ್ರಚಾರ ತಂತ್ರವನ್ನು ಅನುಸರಿಸುತ್ತಿದ್ದಾರೆ. ಸುಳ್ಳು ಭರವಸೆಗಳನ್ನು ನೀಡುತ್ತಿದ್ದಾರೆ. ಕೇಜ್ರಿವಾಲ್ ಅವರು ದೆಹಲಿಯನ್ನು ಸ್ವಚ್ಛ ಮಾಡುತ್ತೇವೆ, ಭ್ರಷ್ಟಾಚಾರ ಮುಕ್ತ ಮಾಡುತ್ತೇವೆ, ಪ್ಯಾರಿಸ್‌ನಂತೆ ಮಾರ್ಪಡಿಸುತ್ತೇವೆ ಎಂದಿದ್ದರು. ಆದರೆ ವಾಸ್ತವದಲ್ಲಿ ಏನಾಗಿದೆ. ಆದರೆ ರಾಷ್ಟ್ರ ರಾಜಧಾನಿಯಲ್ಲಿ ಮಾಲಿನ್ಯ, ಭ್ರಷ್ಟಾಚಾರ ಮತ್ತು ಹಣದುಬ್ಬರ ಮಿತಿ ಮೀರಿದೆ' ಎಂದು ಆರೋಪಿಸಿದರು.

'ದೆಹಲಿಯಲ್ಲಿ ಕಾಂಗ್ರೆಸ್ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಬಿಜೆಪಿಯಾಗಲಿ, ಕೇಜ್ರಿವಾಲ್ ಅವರಾಗಲಿ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದರು.

'ದೇಶದಲ್ಲಿ ಸೈದ್ಧಾಂತಿಕ ಸಂಘರ್ಷ ನಡೆಯುತ್ತಿದೆ. ಭಾರತ ಎಲ್ಲರಿಗೂ ಸೇರಿದ್ದು ಎಂದು ಸಂವಿಧಾನದಲ್ಲಿ ಬರೆಯಲಾಗಿದೆ. ಆದರೆ ಬಿಜೆಪಿ–ಆರ್‌ಎಸ್‌ಎಸ್ ಜನರ ಮಧ್ಯೆ ದ್ವೇಷ ಬಿತ್ತುತ್ತಿವೆ, ಜನರು ಬಡಿದಾಡುವಂತೆ ಮಾಡುತ್ತಿವೆ' ಎಂದು ಆರೋಪಿಸಿದರು.

ಅಂಬೇಡ್ಕರ್ ಅವರ ಸಂವಿಧಾನದ ಮೇಲೆ ನರೇಂದ್ರ ಮೋದಿ ಮತ್ತು ಬಿಜೆಪಿ–ಆರ್‌ಎಸ್‌ಎಸ್ ನಿತ್ಯವೂ ದಾಳಿ ನಡೆಸುತ್ತಿವೆ ಎಂದು ದೂರಿದರು.

'ನಾನು ಇರುವವರೆಗೂ ದೇಶದ ಜನರನ್ನು ರಕ್ಷಿಸುತ್ತೇವೆ. ಅವರು ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಯಾರೇ ಆಗಿರಲಿ' ಎಂದು ಹೇಳಿದರು.

ಐಐಟಿ ವಿದ್ಯಾರ್ಥಿ ಅನುಮಾನಾಸ್ಪದ ಸಾವು

ಕೋಲ್ಕತ್ತ (ಪಿಟಿಐ): ಐಐಟಿ–ಖರಗ್‌ಪುರದ ವಿದ್ಯಾರ್ಥಿಯೊಬ್ಬ ಹಾಸ್ಟೆಲ್‌ನ ತನ್ನ ಕೋಣೆಯೊಳಗೆ ಶವವಾಗಿ ಪತ್ತೆಯಾಗಿದ್ದಾನೆ.

ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನ ಮೂರನೇ ವರ್ಷದ ವಿದ್ಯಾರ್ಥಿ ಶಾನ್ ಮಲಿಕ್ ಮೃತ ಯುವಕ ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಸತತವಾಗಿ ಕರೆ ಮಾಡಿದರೂ ಸ್ವೀಕರಿಸದಿದ್ದರಿಂದ ಅನುಮಾನಗೊಂಡ ಮಲಿಕ್‌ನ ಪೋಷಕರು ಹಾಸ್ಟೆಲ್‌ಗೆ ಬಂದು ಪರಿಶೀಲಿಸಿದಾಗ, ಕೋಣೆಯೊಳಗೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ವಿದ್ಯಾರ್ಥಿಯ ಶವ ಪತ್ತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸಂಸ್ಥೆಯು ಆಂತರಿಕ ತನಿಖೆ ಕೈಗೊಂಡಿದ್ದು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮರಣಾನಂತರ ಏನು?: ಆತ್ಮಹತ್ಯೆಗೂ ಮುನ್ನ ಗೂಗಲ್ ಮಾಡಿದ್ದ ಬಾಲಕ

ಪ್ರಜಾವಾಣಿ ವಾರ್ತೆ



ಲಖನೌ: ಉತ್ತರ ಪ್ರದೇಶದ ಮೀರತ್‌ನಲ್ಲಿ ಕಳೆದ ಶನಿವಾರ ಆತ್ಮಹತ್ಯೆಗೆ ಶರಣಾದ ಬಾಲಕನು, 'ಸಾವಿನ ಬಳಿಕ ಜೀವನ ಹೇಗಿರುತ್ತದೆ, ಏನಾಗುತ್ತದೆ?' ಎಂದೆಲ್ಲಾ ಗೂಗಲ್ ಹಾಗೂ ಯುಟ್ಯೂಬ್‌ನಲ್ಲಿ ಹುಡುಕಾಟ ನಡೆಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಆತ, ಆತ್ಮಹತ್ಯೆಗೂ ಮುನ್ನ 'ಗರುಡ ಪುರಾಣ'ದ ಬಗ್ಗೆಯೂ ಹುಡುಕಾಟ ನಡೆಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಹಿಂದೂಧರ್ಮದ 18 ಮಹಾಪುರಾಣಗಳಲ್ಲಿ ಒಂದಾಗಿರುವ ಈ ಗ್ರಂಥವು, ಮಾನವನ ಅಂತ್ಯಕ್ರಿಯೆಗೆ ಸಂಬಂಧಿಸಿದ, ಮರಣಾನಂತರದ ಜೀವನ ಕುರಿತಾದ ವಿಚಾರಗಳ ಬಗ್ಗೆ ತಿಳಿಸುತ್ತದೆ.

ಬುದ್ಧಿಮಾತು ಹೇಳಿದ್ದಕ್ಕೆ ಆತ್ಮಹತ್ಯೆ?: ಓದಿನತ್ತ ಹೆಚ್ಚು ಗಮನ ಕೊಡದ ಆ ಬಾಲಕನಿಗೆ, ಅವನ ಹಿರಿಯ ಸಹೋದರ ಹಾಗೂ ತಾಯಿಯು ಬುದ್ಧಿಮಾತು ಹೇಳಿದ್ದರು. ಇದರಿಂದ ಆತ ಮನನೊಂದು ಆತ್ಮಹತ್ಯೆಗೆ ಶರಣಾಗಿರುವ ಸಾಧ್ಯತೆ ಇದೆ. ಅಲ್ಲದೆ, ಆತ ಒಂದು ದ್ವಿಚಕ್ರವಾಹನ ಹೊಂದಿದ್ದು, ಅದರ ಮೇಲೆ ವಿಪರೀತ ವ್ಯಾಮೋಹ ಬೆಳೆಸಿಕೊಂಡಿದ್ದ. ಹೀಗಾಗಿ, ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ಕಡಿಮೆಯಾಗಲಿದೆ ಎಂದು ಭಾವಿಸಿದ್ದ ಆತನ ಪೋಷಕರು, ಆ ದ್ವಿಚಕ್ರವಾಹನವನ್ನು ಈಚೆಗಷ್ಟೇ ಮಾರಾಟ ಮಾಡಿದ್ದರು ಎಂದೂ ಪೊಲೀಸರು ತಿಳಿಸಿದ್ದಾರೆ.

ಮೀರತ್‌ನ ಅಪೆಕ್ಸ್ ಕಾಲೊನಿಯಲ್ಲಿ 9ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯು ಪಿಸ್ತೂಲ್‌ನಿಂದ ತಲೆಗೆ ಗುಂಡು ಹಾರಿಸಿಕೊಂಡು ಜನವರಿ 11ರಂದು ಸಾವಿಗೀಡಾಗಿದ್ದ.

ಸಿಎಜಿ ವರದಿ ಮಂಡನೆ ವಿಳಂಬ: ಹೈಕೋರ್ಟ್ ಗರಂ

ಪಿಟಿಐ, ಪ್ರಜಾವಾಣಿ ವಾರ್ತೆ

ನವದೆಹಲಿ: 'ದೆಹಲಿ ಸರ್ಕಾರದ ನೀತಿಗಳ ಕುರಿತಂತೆ ಮಹಾಲೇಖಪಾಲರ ವರದಿ (ಸಿಎಜಿ)ಯನ್ನು ಅಧಿವೇಶನದಲ್ಲಿ ಮಂಡಿಸಬೇಕಿತ್ತು. ಆದರೆ, ವಿಳಂಬ ಧೋರಣೆ ಅನುಸರಿಸುತ್ತಿರುವುದನ್ನು ಗಮನಿಸಿದರೆ, ಸರ್ಕಾರದ ಪ್ರಾಮಾಣಿಕತೆಯ ಮೇಲೆ ಅನುಮಾನ ಮೂಡಿದೆ' ಎಂದು ದೆಹಲಿ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಸಿಎಜಿ ವರದಿಯನ್ನು ವಿಧಾನಸಭೆಯಲ್ಲಿ ಚರ್ಚಿಸಲು ಸ್ಪೀಕರ್‌ಗೆ ನಿರ್ದೇಶನ ನೀಡಬೇಕು ಎಂದು ಕೋರಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿಜೇಂದರ್ ಗುಪ್ತಾ ಕಳೆದ ವರ್ಷ ಡಿಸೆಂಬರ್‌ನಲ್ಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಏಕ ಸದಸ್ಯ ಪೀಠದ ನ್ಯಾಯಮೂರ್ತಿ ಸಚಿನ್ ದತ್ತಾ, 'ಚರ್ಚೆಯಾಗುವುದನ್ನು ತಪ್ಪಿಸುವ ಉದ್ದೇಶದಿಂದಲೇ ವರದಿ ಮಂಡನೆ ವಿಳಂಬ ಮಾಡಿರುವುದು ಕಂಡುಬರುತ್ತಿದೆ. ನೀವು ವರದಿಯನ್ನು ಲೆಫ್ಟಿನೆಂಟ್ ಗವರ್ನರ್‌ಗೆ ಕಳುಹಿಸಿದ ಅವಧಿ, ನಂತರ ಸ್ಪೀಕರ್‌ಗೆ ಕಳುಹಿಸಿದ ದಿನಾಂಕ ಗಮನಿಸಿದರೆ ವಿಳಂಬ ಧೋರಣೆ ಅನುಸರಿಸುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ' ಎಂದು ತಿಳಿಸಿತು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸರ್ಕಾರದ ಪರ ವಕೀಲರು, 'ನ್ಯಾಯಾಲಯಕ್ಕೆ ರಾಜಕೀಯ ಪ್ರೇರಿತ ಅರ್ಜಿ ಸಲ್ಲಿಸಲಾಗಿದೆ. ಸಿಎಜಿ ವರದಿಯನ್ನು ಎಲ್.ಜಿ. ಕಚೇರಿಯಿಂದ ಬಹಿರಂಗಗೊಳಿಸಿ, ನಂತರ ಮಾಧ್ಯಮಗಳಿಗೂ ಸೋರಿಕೆ ಮಾಡಲಾಗಿದೆ' ಎಂದು ತಿಳಿಸಿದರು.

'ಇದು ವಿಧಾನಸಭೆಯ ಕಾರ್ಯವಿಧಾನದ ಆಂತರಿಕ ವಿಚಾರವಾಗಿದೆ. ಈ ಕುರಿತು ಸ್ಪೀಕರ್ ಅವರಿಗೆ ನ್ಯಾಯಾಲಯವು ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿಗಳು ಸ್ಪಷ್ಟಪಡಿಸಿದರು.

ದೆಹಲಿಯ ಆಮ್ ಆದ್ಮಿ ಪಕ್ಷದ ನೇತೃತ್ವದ ಸರ್ಕಾರದ ನೀತಿಗಳ ಕುರಿತಂತೆ ಸಿಎಜಿ ವರದಿಯಲ್ಲಿ ಟೀಕಿಸಲಾಗಿದ್ದು, ಈಗ ರದ್ದಾಗಿರುವ ಅಬಕಾರಿ ನೀತಿಯಿಂದ ಸರ್ಕಾರದ ಖಜಾನೆಗೆ ಆರ್ಥಿಕ ನಷ್ಟ ಉಂಟಾಗಿರುವುದನ್ನು ಉಲ್ಲೇಖಿಸಲಾಗಿತ್ತು.

ಮತ್ತೊಂದು ಮಗುವಿನಲ್ಲಿ ಎಚ್‌ಎಂಪಿವಿ ಪತ್ತೆ

ಪುದುಚೇರಿ (ಪಿಟಿಐ): ಪುದುಚೇರಿಯಲ್ಲಿ ಮತ್ತೊಂದು ಮಗುವಿನಲ್ಲಿ ಎಚ್‌ಎಂಪಿವಿ ಸೋಂಕು ಇರುವುದು ದೃಢಪಟ್ಟಿದ್ದು ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಜ್ವರ, ಕೆಮ್ಮು ಹಾಗೂ ಶೀತದಿಂದ ಬಳಲುತ್ತಿದ್ದ ಹೆಣ್ಣು ಮಗುವಿನಲ್ಲಿ ಎಚ್‌ಎಂಪಿವಿ ಸೋಂಕು ಇರುವುದು ದೃಢಪಟ್ಟಿದೆ. ಮಗುವಿನ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಸೋಂಕು ಹರಡುವಿಕೆ ತಡೆಯಲು ಆಡಳಿತವು ಹೆಚ್ಚಿನ ಕ್ರಮ ಕೈಗೊಳ್ಳುತ್ತಿದೆ' ಎಂದು ಆರೋಗ್ಯ ಇಲಾಖೆಯ ನಿರ್ದೇಶಕ ವಿ. ರವಿಚಂದ್ರನ್ ತಿಳಿಸಿದರು.

ಇದು ಪುದುಚೇರಿಯಲ್ಲಿ ಪತ್ತೆಯಾದ 2ನೇ ಪ್ರಕರಣವಾಗಿದೆ.

ಮೂರು ವರ್ಷದ ಹೆಣ್ಣು ಮಗುವಿನಲ್ಲಿ ಸೋಂಕು ಇರುವುದು ಕಳೆದ ವಾರ ದೃಢಪಟ್ಟಿತ್ತು. ಸಂಪೂರ್ಣ ಗುಣಮುಖವಾಗಿರುವ ಆ ಮಗುವನ್ನು ಶನಿವಾರ ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಹೋಗಲಾಗಿದೆ.

ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ

ಸಾತ್ವಿಕ್–ಚಿರಾಗ್ ಮೇಲೆ ನಿರೀಕ್ಷೆ


ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ

ನವದೆಹಲಿ (ಪಿಟಿಐ): ಭಾರತದ ತಾರಾ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಂಗಳವಾರ ಇಲ್ಲಿನ ಇಂದಿರಾಗಾಂಧಿ ಕ್ರೀಡಾಂಗಣದ ಕೆ.ಡಿ. ಜಾಧವ್ ಒಳಾಂಗಣ ಕ್ರೀಡಾಂಗಣದಲ್ಲಿ ಆರಂಭವಾಗುವ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆತಿಥೇಯ ಭಾರತ ತಂಡದ ಸವಾಲನ್ನು ಮುನ್ನಡೆಸಲಿದ್ದಾರೆ.

ಕಳೆದ ವಾರ ಮಲೇಷ್ಯಾ ಓಪನ್ ಸೂಪರ್ 1000 ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಸೆಮಿಫೈನಲ್ ತಲುಪುವ ಮೂಲಕ ಸಾತ್ವಿಕ್– ಚಿರಾಗ್ ಜೋಡಿ 2025ರ ಋತುವಿನಲ್ಲಿ ಉತ್ತಮ ಆರಂಭ ಪಡೆದಿದೆ. 2022ರ ಚಾಂಪಿಯನ್ ಭಾರತದ ಜೋಡಿ, ಕಳೆದ ವರ್ಷ ಪ್ರಶಸ್ತಿ ಸುತ್ತಿನಲ್ಲಿ ಮುಗ್ಗರಿಸಿತ್ತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 9ನೇ ಸ್ಥಾನದಲ್ಲಿರುವ ಸಾತ್ವಿಕ್– ಚಿರಾಗ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಿರಾಸೆ ಅನುಭವಿಸಿದರೂ, ಕಳೆದ ಎರಡು ವರ್ಷಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಒಟ್ಟು ₹8.23 ಕೋಟಿ ಬಹುಮಾನ ಮೊತ್ತವನ್ನು ಹೊಂದಿರುವ ಇಲ್ಲಿ ಮೂರು ವರ್ಷಗಳ ಬಳಿಕ ಮತ್ತೆ ಪ್ರಶಸ್ತಿ ಜಯಿಸುವ ಛಲದಲ್ಲಿದ್ದಾರೆ.

ಏಳನೇ ಶ್ರೇಯಾಂಕದ ಭಾರತದ ಜೋಡಿಯು ಮೊದಲ ಸುತ್ತಿನಲ್ಲಿ ಮಲೇಷ್ಯಾದ ವೈ ಚಾಂಗ್ ಮನ್ ಮತ್ತು ಕೈ ವುನ್ ಟೀ ವಿರುದ್ಧ ಅಭಿಯಾನ ಆರಂಭಿಸಲಿದೆ.

ಸಿಂಧು ಮತ್ತೆ ಕಣಕ್ಕೆ: ಮದುವೆಯ ಕಾರಣಕ್ಕೆ ಮಲೇಷ್ಯಾ ಓಪನ್‌ನಿಂದ ದೂರ ಉಳಿದಿದ್ದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಹೊಸ ಕೋಚ್ ಇಂಡೊನೇಷ್ಯಾದ ಇರ್ವಾನ್‌ಸ್ಯಾ ಆದಿ ಪ್ರಥಮಾ ಅವರ ಮಾರ್ಗದರ್ಶನದಲ್ಲಿ ಕಣಕ್ಕೆ ಇಳಿಯಲು ಸಜ್ಜಾಗಿದ್ದಾರೆ.

ಇಂಡೊನೇಷ್ಯಾದ ಜೊನಾಟನ್ ಕ್ರಿಸ್ಟಿ ಮತ್ತು ಆ್ಯಂಟನಿ ಗಿಂಟಿಂಗ್ ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿರುವ ಇರ್ವಾನ್‌ಸ್ಯಾ ಅವರಿಂದ ಬೆಂಗಳೂರಿನಲ್ಲಿ ಒಂದೂವರೆ ವಾರ ತರಬೇತಿ ಪಡೆದಿರುವ ಸಿಂಧು, ಸ್ಪರ್ಧಾ ಕಣಕ್ಕೆ ಮರಳಿದ್ದಾರೆ.

ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಸ್ವದೇಶದ ಉದಯೋನ್ಮುಖ ಆಟಗಾರ್ತಿ ಅನುಪಮಾ ಉಪಾಧ್ಯಾಯ ಅವರನ್ನು ಎದುರಿಸುವರು.

ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್, ಎಚ್‌.ಎಸ್. ಪ್ರಣಯ್, ಪ್ರಿಯಾಂಶು ರಾಜಾವತ್ ಕಣಕ್ಕೆ ಇಳಿಯುವರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋಡ್, ಆಕರ್ಷಿ ಕಶ್ಯಪ್ ಸ್ಪರ್ಧೆಯಲ್ಲಿದ್ದಾರೆ.

ಟೆನಿಸ್ ಡಬಲ್ಸ್: ತನುಷ್ ಶೇಖರ್ ಚಾಂಪಿಯನ್

ಬೆಂಗಳೂರು: ಕರ್ನಾಟಕದ ತನುಷ್ ಶೇಖರ್ ಬಿ.ಸಿ ಅವರು ನವದೆಹಲಿಯಲ್ಲಿ ನಡೆದ ಎಐಟಿಎ 12 ವರ್ಷದೊಳಗಿನ ರಾಷ್ಟ್ರೀಯ ಸರಣಿ ಟೆನಿಸ್ ಟೂರ್ನಿಯ ಬಾಲಕರ ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದರೆ, ಸಿಂಗಲ್ಸ್‌ನಲ್ಲಿ ರನ್ನರ್ ಅಪ್ ಆದರು.

ನಾಲ್ಕನೇ ಶ್ರೇಯಾಂಕದ ಬೆಂಗಳೂರಿನ ತನುಷ್ ಮತ್ತು ಅನ್ವಯ್ ಬೇಲೆ ಜೋಡಿಯು ಡಬಲ್ಸ್ ಫೈನಲ್‌ನಲ್ಲಿ 6-4, 7-6 (7-3)ರಿಂದ ಮೂರನೇ ಶ್ರೇಯಾಂಕದ ನಿಹಾಲ್ ಎಸ್. ರೆಡ್ಡಿ (ಕರ್ನಾಟಕ) ಮತ್ತು ತೇಗ್ವೀರ್ ಸಿಂಗ್ ಅವರನ್ನು ಮಣಿಸಿ ಚಾಂಪಿಯನ್ ಆಯಿತು.

ಬೆಂಗಳೂರಿನ 10 ವರ್ಷ ವಯಸ್ಸಿನ ತನುಷ್ ಸಿಂಗಲ್ಸ್‌ನ ಫೈನಲ್‌ನಲ್ಲಿ 0-6, 6-1, 3-6ರಿಂದ ಲಕ್ಷ್ಯ ತ್ರಿಪಾಠಿ ಅವರಿಗೆ ಶರಣಾದರು.

ಮರಳಿ ಅರಳಿದ ಕರುಣ್

ಪ್ರಜಾವಾಣಿ ವಾರ್ತೆ


ಕರುಣ್ ನಾಯರ್

ಬೆಂಗಳೂರು: 'ಪ್ರಿಯ ಕ್ರಿಕೆಟ್ ನನಗೆ ಇನ್ನೊಂದು ಅವಕಾಶ ಕೊಡು'–

2022ರ ಡಿಸೆಂಬರ್‌ನಲ್ಲಿ ಕರ್ನಾಟಕದ ಕ್ರಿಕೆಟಿಗ ಕರುಣ್ ನಾಯರ್ ಅವರು ಹಾಕಿದ್ದ ಎಕ್ಸ್ ಸಂದೇಶ ಇದು. ಕ್ರಿಕೆಟ್ ಅವರಿಗೆ ಮತ್ತೊಂದು ಅವಕಾಶ ನೀಡಿತು. ಅದನ್ನು ಅವರು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. ಅವರು ಈಗ ನಡೆಯುತ್ತಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ವಿದರ್ಭ ತಂಡದಲ್ಲಿ ಆಡುತ್ತಿದ್ದಾರೆ. ಒಟ್ಟು 5 ಶತಕಗಳನ್ನು ಬಾರಿಸಿದ್ದಾರೆ. 7 ಪಂದ್ಯಗಳಲ್ಲಿ 664 ರನ್ ಕಲೆಹಾಕಿ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

2022ರಲ್ಲಿ ಅವರು ತಮ್ಮ ಫಾರ್ಮ್ ಕೊರತೆ ಅನುಭವಿಸಿದ್ದರು. ತಮ್ಮ ತವರು ಕರ್ನಾಟಕ ತಂಡದಿಂದ ಬಹುತೇಕ ಸ್ಥಾನ ಕಳೆದುಕೊಂಡಿದ್ದರು. ನಂತರದ ಋತುವಿನಲ್ಲಿ ಅವರು ವಿದರ್ಭ ತಂಡಕ್ಕೆ ಸೇರ್ಪಡೆಯಾದರು. 33 ವರ್ಷದ ಕರುಣ್ ತಮ್ಮ ಆಟದ ಮೂಲಕ ಭಾರತ ತಂಡದ ಆಯ್ಕೆ ಸಮಿತಿಯ ಗಮನ ಸೆಳೆಯುವ ಪ್ರಯತ್ನ ನಡೆಸಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ತಂಡದ ಆಯ್ಕೆ ಇನ್ನೂ ಬಾಕಿ ಇದೆ. ವಿಜಯ್ ಹಜಾರೆ ಟೂರ್ನಿಯಲ್ಲಿ ಉತ್ತಮವಾಗಿ ಆಡುತ್ತಿರುವವರ ಮೇಲೆ ಆಯ್ಕೆ ಸಮಿತಿಯ ನಿಗಾ ಇದೆ. ಕರುಣ್ ಭರ್ಜರಿ ಫಾರ್ಮ್‌ನಲ್ಲಿದ್ದು ಅವರ ಆಟದಿಂದಾಗಿ ವಿದರ್ಭ ಸೆಮಿಫೈನಲ್ ಪ್ರವೇಶಿಸಿದೆ.

'ಭಾರತ ತಂಡಕ್ಕೆ ಮರಳುವ ಹಾದಿ ಅಷ್ಟು ಸುಲಭವಲ್ಲ ಎಂಬುದರ ಅರಿವು ನನಗಿದೆ. ಆದರೂ ಆ ಅವಕಾಶ ಹತ್ತಿರದಲ್ಲಿದೆ ಎಂಬ ಭಾವದೊಂದಿಗೆ ಆಡುತ್ತಿದ್ದೇನೆ. ಅದ್ದರಿಂದ ನಾನೀಗ ಮಾಡುತ್ತಿರುವ ಕಾರ್ಯವನ್ನು ಮುಂದುವರಿಸುತ್ತೇನೆ. ತಲೆಬಾಗಿ ಆಡುವುದಷ್ಟೇ ಈಗ ಇರುವ ಅವಕಾಶ. ಉಳಿದಿದ್ದು ನನ್ನ ಕೈಗಳಲ್ಲಿ ಇಲ್ಲ' ಎಂದು ಕರುಣ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಗಳಿಸಿದ ಭಾರತದ ಎರಡನೇ ಆಟಗಾರ ಕರುಣ್ ನಾಯರ್. 6 ಟೆಸ್ಟ್ ಮತ್ತು 2 ಏಕದಿನ ಪಂದ್ಯಗಳನ್ನು ಅವರು ಭಾರತದ ಪರವಾಗಿ ಆಡಿದ್ದಾರೆ.

'ಹೆಚ್ಚು ಎಸೆತಗಳನ್ನು ಎದುರಿಸುವಂತಹ ಸಾಧಾರಣ ಅಭ್ಯಾಸವನ್ನು ಮಾಡುತ್ತಿದ್ದೇನೆ. ಹೆಚ್ಚು ಕ್ಲಿಷ್ಟಕರಗೊಳಿಸಿಕೊಳ್ಳುವುದಿಲ್ಲ. ನಾನು ಲಯಕ್ಕೆ ಮರಳಿದರೆ ಉಳಿದ ಕೌಶಲಗಳನ್ನು ಪ್ರಯೋಗಿಸುವುದು ಸುಲಭ. ಜಿಮ್ನಾಷಿಯಂನಲ್ಲಿ ಕಸರತ್ತು ಮಾಡಿ ಫಿಟ್‌ನೆಸ್‌ಗೆ ಒತ್ತು ನೀಡುತ್ತಿದ್ದೇನೆ. ಆಗಿ ಹೋಗಿರುವುದನ್ನು ಬಿಟ್ಟು ಮುಂದಿನ ಯೋಜನೆ ಬಗ್ಗೆ ಗಮನ ಕೊಡುತ್ತೇನೆ' ಎಂದರು.

ಫೆ.19ರಿಂದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ

ಆಸ್ಟ್ರೇಲಿಯಾ ತಂಡಕ್ಕೆ ಪ್ಯಾಟ್ ಕಮಿನ್ಸ್


ಪ್ಯಾಟ್ ಕಮಿನ್ಸ್

ಮೆಲ್ಬರ್ನ್ (ಎಎಫ್‌ಪಿ): ನಾಯಕ ಪ್ಯಾಟ್ ಕಮಿನ್ಸ್ ಅವರು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಆಸ್ಟ್ರೇಲಿಯಾ ತಂಡಕ್ಕೆ ಮರಳಿದ್ದಾರೆ.

ಗಾಯಾಳಾಗಿರುವ ಇನ್ನೊಬ್ಬ ವೇಗಿ ಜೋಶ್ ಹ್ಯಾಜಲ್‌ವುಡ್ ಅವರೂ ಸೋಮವಾರ ಪ್ರಕಟಿಸಲಾದ 15 ಆಟಗಾರರ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈ ತಿಂಗಳ ಕೊನೆಯಲ್ಲಿ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿರುವ ತಂಡದಿಂದ ಅವರು ಹಿಂದೆಸರಿದಿದ್ದರು. ಕಮಿನ್ಸ್ ಎರಡನೇ ಮಗುವಿನ ನಿರೀಕ್ಷೆಯಲ್ಲಿದ್ದಾರೆ.

ಭಾರತ ವಿರುದ್ಧ ಪಂದ್ಯದ ವೇಳೆ ಅವರು ಮೊಣಕಾಲು ನೋವಿನಿಂದಲೂ ಬಳಲುತ್ತಿದ್ದರು. ಮೀನಖಂಡದ ನೋವಿನಿಂದ ಬಳಲುತ್ತಿದ್ದ ಹೇಜಲ್‌ವುಡ್ ಅವರೂ ತಂಡಲಕ್ಕೆ ಮರಳಿದ್ದಾರೆ. ಆರಂಭ ಆಟಗಾರ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅವರನ್ನು ಕೈಬಿಡಲಾಗಿದೆ.

ಎಂಟು ರಾಷ್ಟ್ರಗಳ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಸ್ಟ್ರೇಲಿಯಾ ಎರಡು ಬಾರಿ ಚಾಂಪಿಯನ್ ಆಗಿದೆ. ಫೆ. 19ರಿಂದ ಮಾರ್ಚ್ 19ರವರೆಗೆ ಈ ಟೂರ್ನಿ ಪಾಕಿಸ್ತಾನ ಮತ್ತು ಯುಎಇಯಲ್ಲಿ ನಡೆಯಲಿದೆ.

ತಂಡ ಹೀಗಿದೆ: ಪ್ಯಾಟ್ ಕಮಿನ್ಸ್ (ನಾಯಕ), ಅಲೆಕ್ಸ್ ಕ್ಯಾರಿ, ನಥಾನ್ ಎಲ್ಲಿಸ್, ಆರನ್ ಹಾರ್ಡಿ, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮಾರ್ನಸ್ ಲಾಬುಷೇನ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಮ್ಯಾಥ್ಯೂ ಶಾರ್ಟ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೊಯಿನಿಸ್ ಮತ್ತು ಆ್ಯಡಂ ಜಂಪಾ.



ತೇಜಸ್ವಿನಿಗೆ ಚಿನ್ನ

ಬೆಂಗಳೂರು: ಕರ್ನಾಟಕದ ತೇಜಸ್ವಿನಿ ಜಿ. ರಾವ್ ಅವರು ಜಾರ್ಖಂಡ್‌ನಲ್ಲಿ ನಡೆದ ರಾಷ್ಟ್ರೀಯ ಶಾಲಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 14 ವರ್ಷದೊಳಗಿನ ಬಾಲಕಿಯರ ಶಾಟ್‌ಪಟ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ತೇಜಸ್ವಿನಿ 12.07 ಮೀಟರ್ ದೂರ ಶಾಟ್‌ಪಟ್ ಎಸೆದರು. ಹರಿಯಾಣದ ಹನ್‌ಪ್ರೀತ್ ಮತ್ತು ರಾಜಸ್ಥಾನದ ದಿವ್ಯಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ದಕ್ಷಿಣ ಆಫ್ರಿಕಾ ತಂಡಕ್ಕೆ ನಾಕಿಯಾ

ಜೊಹಾನೆಸ್‌ಬರ್ಗ್ (ಎಎಫ್‌ಪಿ): ವೇಗದ ಬೌಲರ್ ಆ್ಯನ್ರಿಚ್ ನಾಕಿಯಾ ಅವರು ಪಾಕಿಸ್ತಾನದಲ್ಲಿ ಫೆಬ್ರುವರಿ–ಮಾರ್ಚ್‌ನಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಸೋಮವಾರ ಪ್ರಕಟಿಸಿದ ದಕ್ಷಿಣ ಆಫ್ರಿಕಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

31 ವರ್ಷ ವಯಸ್ಸಿನ ನಾಕಿಯಾ ಅವರು ಪಕ್ಕೆಲುಬಿನ ನೋವಿನ ನಂತರ 2023ರ ಸೆಪ್ಟೆಂಬರ್ ನಂತರ ಏಕದಿನ ಪಂದ್ಯ ಆಡಿಲ್ಲ. ಕಳೆದ ಜೂನ್‌ನಲ್ಲಿ ನಡೆದ ಟಿ20 ವಿಶ್ವಕಪ್‌ಗೆ ಪುನರಾಗಮನ ಮಾಡಿದ್ದ ಅವರು ದಕ್ಷಿಣ ಆಫ್ರಿಕಾದ ಯಶಸ್ವಿ ಬೌಲರ್ ಎನಿಸಿದ್ದರು. ಆದರೆ ಬಾರ್ಬಾಡೋಸ್‌ನಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಭಾರತ ವಿರುದ್ಧ ಆಡಿದ ನಂತರ ಯಾವುದೇ ಅಂತರರಾಷ್ಟ್ರೀಯ ಪಂದ್ಯ ಆಡಿಲ್ಲ.

ದಕ್ಷಿಣ ಆಫ್ರಿಕಾ ಇದುವರೆಗೆ ಐಸಿಸಿಯ ಯಾವುದೇ ಪ್ರಮುಖ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿಲ್ಲ. ದಕ್ಷಿಣ ಆಫ್ರಿಕಾ ಟೂರ್ನಿಯ 'ಬಿ' ಗುಂಪಿನಲ್ಲಿದೆ. ಇಂಗ್ಲೆಂಡ್, ಅಫ್ಗಾನಿಸ್ತಾನ ಮತ್ತು ಆಸ್ಟ್ರೇಲಿಯಾ ಈ ಗುಂಪಿನ ಇತರ ತಂಡಗಳು. ಫೆ. 21ರಂದು ಅಫ್ಗಾನಿಸ್ತಾನ ವಿರುದ್ಧ (ಕರಾಚಿಯಲ್ಲಿ), 25ರಂದು ಆಸ್ಟ್ರೇಲಿಯಾ ವಿರುದ್ಧ (ರಾವಲ್ಪಿಂಡಿಯಲ್ಲಿ) ಮತ್ತು ಮಾ. 1ರಂದು ಇಂಗ್ಲೆಂಡ್ ವಿರುದ್ಧ (ಕರಾಚಿಯಲ್ಲಿ) ಆಡಲಿದೆ.

ತಂಡ ಹೀಗಿದೆ: ತೆಂಬಾ ಬವುಮಾ (ನಾಯಕ), ಟೋನಿ ಡಿ ಝೋರ್ಜಿ, ಮಾರ್ಕೊ ಯಾನ್ಸನ್, ಹೆನ್ರಿಚ್ ಕ್ಲಾಸೆನ್ (ವಿಕೆಟ್ ಕೀಪರ್), ಕೇಶವ್ ಮಹಾರಾಜ್, ಏಡನ್ ಮರ್ಕರಂ, ಡೇವಿಡ್ ಮಿಲ್ಲರ್, ವಿಯಾನ್ ಮುಲ್ಡರ್, ಲುಂಗಿ ಗಿಡಿ, ಆ್ಯನ್ರಿಚ್ ನಾಕಿಯಾ, ಕಗಿಸೊ ರಬಾಡ, ರಿಯಾನ್ ರಿಕೆಲ್ಟನ್ (ವಿಕೆಟ್ ಕೀಪರ್), ತಬ್ರೇಜ್ ಸಂಶಿ, ಟ್ರಿಸ್ಟನ್ ಸ್ಟಬ್ಸ್, ರಸೀ ವಾನ್‌ಡರ್ ಡಸೆನ್.



ಸಾಂಸ್ಕೃತಿಕ ವೈಭವ

ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ಕೊಕ್ಕೊ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಸಮಾರಂಭದಲ್ಲಿ ಗಮನಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ ಪಿಟಿಐ ಚಿತ್ರ

ಚೊಚ್ಚಲ ಟೂರ್ನಿಗೆ ಚಾಲನೆ ನೀಡಿದ ಉಪರಾಷ್ಟ್ರಪತಿ ಜಗದೀಪ್ ಧನಕರ್

ಕೊಕ್ಕೊ ವಿಶ್ವಕಪ್: ಭಾರತ ಶುಭಾರಂಭ

ನವದೆಹಲಿ (ಪಿಟಿಐ): ಮೊತ್ತಮೊದಲ ಕೊಕ್ಕೊ ವಿಶ್ವಕಪ್‌ಗೆ ಸೋಮವಾರ ವರ್ಣರಂಜಿತ ಸಮಾರಂಭದಲ್ಲಿ ಚಾಲನೆ ನೀಡಲಾಯಿತು. ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಬೆಳಗುವ ಮೂಲಕ ಏಳು ದಿನಗಳ ವಿಶ್ವಕಪ್‌ ಅನ್ನು ಅಧಿಕೃತವಾಗಿ ಉದ್ಘಾಟಿಸಿದರು.

ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಸೇರಿದಂತೆ ಹಲವು ಗಣ್ಯರು, ಕೊಕ್ಕೊ ಪ್ರೇಮಿಗಳಿಂದ ಇಂದಿರಾ ಗಾಂಧಿ ಕ್ರೀಡಾಂಗಣ ಕಿಕ್ಕಿರಿದು ತುಂಬಿತ್ತು.

ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಉದ್ಘಾಟನಾ ಕಾರ್ಯಕ್ರಮಕ್ಕೆ ಮೆರುಗು ತುಂಬಿದವು. ಮರಳು ಶಿಲ್ಪದ ಮೂಲಕ ಭೂಮಾತೆಗೆ ವಂದನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಆರಂಭವಾಯಿತು. ನಂತರ ತಂಡಗಳಿಂದ ಪರೇಡ್ ನಡೆಯಿತು. ಈ ವೇಳೆ ಗ್ಯಾಲರಿಯ ಎಲ್ಲೆಡೆ ತ್ರಿವರ್ಣ ಧ್ವಜಗಳು ಹಾರಾಡಿದವು.

ಭಾರತ ಕೊಕ್ಕೊ ಫೆಡರೇಷನ್, ಪ್ರೇಕ್ಷಕರ ಹರ್ಷೋದ್ಗಾರಗಳ ನಡುವೆ ಪುರುಷರ ಮತ್ತು ಮಹಿಳಾ ವಿಭಾಗದ ಟ್ರೋಫಿಗಳನ್ನು ಅನಾವರಣಗೊಳಿಸಿತು. ದೇಶದ ಶ್ರೀಮಂತ ಸಂಸ್ಕೃತಿಯನ್ನು ಸಾರುವ ನೃತ್ಯ ಕಾರ್ಯಕ್ರಮಗಳು ನಡೆದವು.

ಕೇಂದ್ರ ಕ್ರೀಡಾ ಖಾತೆ ರಾಜ್ಯ ಸಚಿವ ರಕ್ಷಾ ಖಾಡ್ಸೆ, ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಭಾರತ ಕೊಕ್ಕೊ ಫೆಡರೇಷನ್ ಅಧ್ಯಕ್ಷ ಸುಧಾಂಶು ಮಿತ್ತಲ್ ಅವರು ಉಪಸ್ಥಿತರಿದ್ದ ಗಣ್ಯರಲ್ಲಿ ಒಳಗೊಂಡಿದ್ದರು.

‘ಇಡೀ ವಿಶ್ವವೇ ಕೊಕ್ಕೊ ಆಟವನ್ನು ಸಂಭ್ರಮಿಸಿದಂತೆ ಕಾಣುತ್ತಿದೆ. ಕೊಕ್ಕೊ ಆಟ ಮಾತ್ರವಲ್ಲ, ಕಲೆ ಕೂಡ. ಇದರಲ್ಲಿ ಕೌಶಲ, ವೇಗ, ಜಾಣ್ಮೆ ಎಲ್ಲವೂ ಬೇಕು’ ಎಂದು ತಂಡಗಳನ್ನು ಸ್ವಾಗತಿಸಿದ ಧನಕರ್ ಹೇಳಿದರು.

ಭವಿಷ್ಯದಲ್ಲಿ ಏಷ್ಯನ್ ಕ್ರೀಡೆಗಳಲ್ಲಿ ಕೊಕ್ಕೊ ಆಟವನ್ನು ಸೇರ್ಪಡೆ ಮಾಡುವಂತೆ ಏಷ್ಯಾ ಒಲಿಂಪಿಕ್ ಕೌನ್ಸಿಲ್‌ಗೆ ಪತ್ರ ಬರೆಯುವುದಾಗಿ ಕ್ರೀಡಾ ಸಚಿವ ಮಾಂಡವೀಯ ಹೇಳಿದರು.

ಇದೇ 19ರವರೆಗೆ ನಡೆಯುವ ಟೂರ್ನಿಯ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಒಟ್ಟು 39 ತಂಡಗಳು ಭಾಗವಹಿಸುತ್ತಿವೆ.



ಪಥಸಂಚಲನದಲ್ಲಿ ರಾಷ್ಟ್ರಧ್ವಜದೊಂದಿಗೆ ಭಾರತದ ಕೊಕ್ಕೊ ತಂಡದ ಆಟಗಾರರು –ಪಿಟಿಐ ಚಿತ್ರ

ಭಾರತ ಪುರುಷರ ತಂಡಕ್ಕೆ ಮಣಿದ ನೇಪಾಳ

ನವದೆಹಲಿ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಭಾರತ ಪುರುಷರ ತಂಡವು ಇಲ್ಲಿ ಸೋಮವಾರ ಆರಂಭವಾದ ಕೊಕ್ಕೊ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ಆತಿಥೇಯ ತಂಡವು 42–37 ಪಾಯಿಂಟ್‌ಗಳಿಂದ ನೇಪಾಳ ತಂಡವನ್ನು ಮಣಿಸಿತು. ಪ್ರತೀಕ್ ವೈಕರ್ ನೇತೃತ್ವದ ಭಾರತ ತಂಡವು ಆರಂಭದಿಂದಲೇ ಚುರುಕಿನ ಆಟವಾಡಿತು. ಮೊದಲ ಟರ್ನ್‌ನ ಮೊದಲ ನಿಮಿಷದಲ್ಲೇ ನೇಪಾಳದ ಮೂರು ಡಿಫೆಂಡರ್‌ಗಳನ್ನು ಔಟ್ ಮಾಡಿ ಗಮನ ಸೆಳೆಯಿತು.

ಅದ್ಭುತ ಫ್ಲೈಯಿಂಗ್ ಜಂಪ್‌ಗಳನ್ನು ಪ್ರದರ್ಶಿಸಿದ ಆತಿಥೇಯ ತಂಡದ ಆಟಗಾರರು ಮೊದಲ ಟರ್ನ್‌ನಲ್ಲಿ ಮೂರು ನಿಮಿಷಗಳು ಬಾಕಿ ಇರುವಂತೆ ಎದುರಾಳಿ ತಂಡದ ಎರಡು ಬ್ಯಾಚ್‌ಗಳನ್ನು ಹೊರಹಾಕಿ 14 ಅಂಕಗಳ ಮುನ್ನಡೆ ಪಡೆದರು.



ನಂತರದಲ್ಲಿ ಪ್ರತೀಕ್ ಬದಲಿಗೆ ‘ವಜೀರ್’ ಆಗಿ ಬಂದ ಸಚಿನ್ ಭಾರ್ಗೋ, ಅದ್ಭುತವಾಗಿ ಸ್ಕೈಡೈವ್ ಮೂಲಕ ವಿರಾಮದ ವೇಳೆ ಭಾರತದ ಟಚ್ ಪಾಯಿಂಟ್ಸ್ 24ಕ್ಕೆ ಏರಿಸುವಲ್ಲಿ ಉಪಯುಕ್ತ ಕಾಣಿಕೆ ನೀಡಿದರು.

ಭಾರತವು ಗುಂಪು ಹಂತದ ಎರಡನೇ ಪಂದ್ಯದಲ್ಲಿ ಮಂಗಳವಾರ ಬ್ರೆಜಿಲ್ ತಂಡವನ್ನು ಎದುರಿಸಲಿದೆ. ಭಾರತ ಮಹಿಳೆಯರ ತಂಡವು ದಕ್ಷಿಣ ಕೊರಿಯಾ ವಿರುದ್ಧ ಅಭಿಯಾನವನ್ನು ಆರಂಭಿಸಲಿದೆ.

ಸಿನ್ನರ್, ಜೊಕೊವಿಚ್ ಮುನ್ನಡೆ

ಆಸ್ಟ್ರೇಲಿಯನ್ ಓಪನ್ ಟೆನಿಸ್: ಕಿರ್ಗಿಯೋಸ್, ಸಿಸಿಪಸ್, ಅಜರೆಂಕಾ ನಿರ್ಗಮನ

ಮೆಲ್ಬರ್ನ್ (ಎಎಫ್‌ಪಿ): ಚಾರಿತ್ರಿಕ ದಾಖಲೆಯ ಹೊಸ್ತಿಲಲ್ಲಿರುವ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಗೆಲ್ಲುವ ಮೊದಲು ಸ್ವಲ್ಪ ಆತಂಕ ಎದುರಿಸಿದರು. ಆದರೆ ಸಕಾಲದಲ್ಲಿ ಚೇತರಿಸಿಕೊಂಡರು. ಅವರೊಂದಿಗೆ ಕಾರ್ಲೋಸ್ ಅಲ್ಕರಾಜ್ ಮತ್ತು ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಅವರೂ ಸೋಮವಾರ ಎರಡನೇ ಸುತ್ತಿಗೆ ಮುನ್ನಡೆದರು.

ಆದರೆ ತವರಿನ ನೆಚ್ಚಿನ ಆಟಗಾರ ನಿಕ್ ಕಿರ್ಗಿಯೋಸ್ ಮತ್ತು ಗ್ರೀಸ್‌ನ ಸ್ಟೆಫಾನೊಸ್ ಸಿಸಿಪಸ್ ಅವರ ಮೊದಲ ಸುತ್ತಿನಲ್ಲೇ ಹೊರಬಿದ್ದ ಪ್ರಮುಖರೆನಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ, ಎರಡು ಬಾರಿಯ ಚಾಂಪಿಯನ್ ಅರಿನಾ ಸಬಲೆಂಕಾ ಅವರ ಆದಿಪತ್ಯಕ್ಕೆ ಸವಾಲೊಡ್ಡುವ ಯತ್ನದಲ್ಲಿರು ಪೋಲೆಂಡ್‌ನ ಶ್ವಾಂಟೆಕ್ ಮತ್ತು ಅಮೆರಿಕದ ಕೊಕೊ ಗಾಫ್ ಅವರು ನೇರ ಸೆಟ್‌ಗಳ ಗೆಲುವಿನೊಡನೆ ಶುಭಾರಂಭ ಮಾಡಿದರು.

ಮೆಲ್ಬರ್ನ್‌ನಲ್ಲಿ ಎರಡನೇ ದಿನ ತಡವಾಗಿ ಮುಗಿದ ಪಂದ್ಯದಲ್ಲಿ ಜೊಕೊ ವಿಚ್ ಅವರು 107ನೇ ಕ್ರಮಾಂಕದಲ್ಲಿರುವ ಅಮೆರಿಕದ ಆಟಗಾರ, ಭಾರತ ಮೂಲದ ನಿಶೇಷ್ ಬಸವರೆಡ್ಡಿ ಎದುರು ಮೊದಲ ಸೆಟ್ ಕಳೆದುಕೊಂಡರು. ಆದರೆ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮತ್ತು ಇಲ್ಲಿ 11ನೇ ಬಾರಿ ಕಿರೀಟ ಧರಿಸುವ ಗುರಿಯಲ್ಲಿರುವ ಸರ್ಬಿಯಾದ ಆಟಗಾರ ಚೇತರಿಸಿಕೊಂಡು 4–6, 6–3, 6–4, 6–2ರಲ್ಲಿ ಜಯಗಳಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರ ಸಿನ್ನರ್ ಅವರು ರಾಡ್ ಲೇವರ್ ಅರೇನಾದಲ್ಲಿ 7–6 (2), 7–6 (5), 6–1 ರಿಂದ ಚಿಲಿಯ ನಿಕೋಲಸ್ ಜಾರಿ ಅವರ ಹೋರಾಟವನ್ನು ಬದಿಗೊತ್ತಿದರು. ಕಳೆದ ಅಕ್ಟೋಬರ್‌ನಲ್ಲಿ ಬೀಜಿಂಗ್ ಫೈನಲ್‌ನಲ್ಲಿ ಸ್ಪೇನ್‌ನ ಅಲ್ಕರಾಜ್ ಅವರಿಗೆ ಸೋತ ಬಳಿಕ ಇಟಲಿಯ ದಿಗ್ಗಜ ಒಂದೂ ಪಂದ್ಯ ಸೋತಿಲ್ಲ.

ಮೂರನೇ ಕ್ರಮಾಂಕದ ಅಲ್ಕರಾಜ್ 6–1, 7–5 6–1 ರಿಂದ ಕಜಕಸ್ತಾನದ ಅಲೆಕ್ಸಾಂಡರ್ ಶೆವ್ಚೆಂಕೊ ಅವರನ್ನು ಸೋಲಿಸಲು ಕಷ್ಟ-ಪಡಲಿಲ್ಲ. ಗ್ರ್ಯಾನ್‌ಸ್ಲಾಮ್‌ನಲ್ಲಿ ನಾಲ್ಕು ಪ್ರಶಸ್ತಿಗಳನ್ನು ಗೆದ್ದಿರುವ 21 ವರ್ಷ ವಯಸ್ಸಿನ ಅಲ್ಕರಾಜ್, ಇಲ್ಲಿ ಮೊದಲ ಕಿರೀಟದ ಯತ್ನದಲ್ಲಿದ್ದಾರೆ.

ಸಿನ್ನರ್ ಅವರು 7–6 (2), 7–6 (5), 6–1 ರಿಂದ ನಿಕೋಲಸ್ ಜಾರಿ ಅವರನ್ನು ಹಿಮ್ಮೆಟ್ಟಿಸಿ ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಶುಭಾರಂಭ ಮಾಡಿದರು.



ಗ್ರೀಸ್‌ನ ಸ್ಟೆಫಾನೊಸ್ ಸಿಸಿಪಸ್ ಅವರನ್ನು ಮಣಿಸಿದ ಅಲೆಕ್ಸ್ ಮೈಕೆಲ್ಸನ್ ಸಂಭ್ರಮ –ಎಎಫ್‌ಪಿ ಚಿತ್ರ

ಹೋರಾಟ ತೋರಿದ ನಿಶೇಷ್ ಬಸವರೆಡ್ಡಿ



ಭಾರತ ಮೂಲದ ಅಮೆರಿಕದ ಆಟಗಾರ ನಿಶೇಷ್ ಬಸವರೆಡ್ಡಿ, ತಮ್ಮ ದಿಗ್ಗಜ ಎದುರಾಳಿ ಜೊಕೊವಿಚ್ ಎದುರು ಮೊದಲ ಸೆಟ್ ಗೆದ್ದು ಗಮನಸೆಳೆದರು. 19 ವರ್ಷ ವಯಸ್ಸಿನ ಅಮೆರಿಕದ ಆಟಗಾರ ಮೊದಲ ಸೆಟ್‌ನಲ್ಲಿ ನಾಜೂಕಿನ ಡ್ರಾಪ್ ಹೊಡೆತಗಳನ್ನು ಮತ್ತು ‘ಲಾಬ್’ಗಳನ್ನು ಆಡಿದರು.

‘ಅವನ ಆಟವನ್ನು ತುಂಬಾ ಮೆಚ್ಚಿಕೊಂಡೆ. ಇಡೀ ಕ್ರೀಡಾಂಗಣ ಕೂಡ ಮೆಚ್ಚಿತು. ಅದಕ್ಕಾಗಿಯೇ ಪ್ರೇಕ್ಷಕರಿಂದ ಸಾಕಷ್ಟು ಹರ್ಷೋದ್ಗಾರಗಳು ಕೇಳಿಬಂದವು’ ಎಂದು 37 ವರ್ಷ ವಯಸ್ಸಿನ ಆಟಗಾರ ಶ್ಲಾಘಿಸಿದರು. ‘ಅವನೊಬ್ಬ ಪರಿಪೂರ್ಣ ಆಟಗಾರ, ಹೊಡೆತಗಳಲ್ಲಿ ಇನ್ನಷ್ಟು ಪಕ್ವತೆ ಕಾಣಬೇಕಿದೆ. ಆದರೆ ಅವನಲ್ಲಿ ಒಳ್ಳೆಯ ಆಟವಿದೆ’ ಎಂದೂ ಸರ್ಬಿಯಾದ ಆಟಗಾರ ಹೇಳಿದರು

ನಿಶೇಷ್ ಪೋಷಕರು ಹೈದರಾಬಾದ್ ಮತ್ತು ನೆಲ್ಲೂರು ಮೂಲದವರು. ತಂದೆ ಮುರಳಿ ರೆಡ್ಡಿ ಟೆಕ್ ಕಂಪನಿಯಲ್ಲಿ ಉದ್ಯೋಗಿ.

ಕಳೆದ ವರ್ಷ ಎಟಿಪಿ ಚಾಲೆಂಜರ್ ಟೂರ್ನಿಗಳಲ್ಲಿ ತೋರಿದ ಉತ್ತಮ ಪ್ರದರ್ಶನದಿಂದ ಅವರು ಈ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದರು. ಬಾಲ್ಯದಿಂದ ನಿಶೇಷ್‌ಗೆ ಜೊಕೊವಿಚ್ ಅಚ್ಚುಮೆಚ್ಚಿನ ಆಟಗಾರ.

ಮಹಿಳಾ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ 6–3, 6–4 ರಿಂದ ಡಬಲ್ಸ್ ಪರಿಣಿತೆ ಕ್ಯಾತರಿಕಾ ಸಿನಿಕೊವಾ (ಝೆಕ್ ರಿಪಬ್ಲಿಕ್) ಅವರನ್ನು ಮಣಿಸಿದರು. ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಐದು ಪ್ರಶಸ್ತಿ ಗೆದ್ದಿರುವ ಪೋಲೆಂಡ್‌ನ ಆಟಗಾರ್ತಿ ಮೆಲ್ಬರ್ನ್‌ನಲ್ಲಿ ಒಮ್ಮೆಯೂ ಪ್ರಶಸ್ತಿ ಗೆದ್ದಿಲ್ಲ.

ಒಳ್ಳೆಯ ಲಯದಲ್ಲಿರುವ ಮೂರನೇ ಕ್ರಮಾಂಕದ ಕೊಕೊ ಗಾಫ್ ಅವರು ಸ್ವದೇಶದ ಸೋಫಿಯಾ ಕೆನಿನ್ ಅವರನ್ನು ಸೋಲಿಸಿದರು. ಗಾಫ್ 6–3, 6–3 ರಿಂದ 2020ರ ಚಾಂಪಿಯನ್ ಕೆನಿನ್ ಅವರನ್ನು ಸೋಲಿಸಲು 80 ನಿಮಿಷ ತೆಗೆದುಕೊಂಡರು.

ಅಮೆರಿಕ ತಂಡವು ಯುನೈಟೆಡ್ ಕಪ್ ಗೆಲ್ಲಲು ನೆರವಾಗಿರುವ ಗಾಫ್ ಈ ವರ್ಷ ಅಜೇಯರಾಗುಳಿದಿದ್ದಾರೆ. 2023ರಲ್ಲಿ ಅವರು ಇಲ್ಲಿ ಚಾಂಪಿಯನ್ ಆಗಿದ್ದರು.

ತವರಿನ ತಾರೆ ನಿಕ್ ನಿರ್ಗಮನ

ಮೆಲ್ಬರ್ನ್ (ರಾಯಿಟರ್ಸ್): ಗ್ರ್ಯಾನ್‌ಸ್ಲಾಮ್ ಟೂರ್ನಿಗೆ ನಿಕ್ ಕಿರ್ಗಿಯೋಸ್ ಅವರ ಬಹುನಿರೀಕ್ಷಿತ ಪುನರಾಗಮನ ಸೋಲಿನಲ್ಲಿ ಅಂತ್ಯಕಂಡಿತು. ಬ್ರಿಟನ್‌ನ ಜಾಕೋಬ್ ಫೆರ್ನ್‌ಲಿ ಅವರು ತವರಿನ ನೆಚ್ಚಿನ ಆಟಗಾರರನ್ನು ಸೋಮವಾರ ಮೊದಲ ಸುತ್ತಿನಲ್ಲಿ ನೇರ ಸೆಟ್‌ಗಳಿಂದ ಸೋಲಿಸಿದರು.

ಜಾನ್ ಕೇನ್ ಅರೇನಾ ಪ್ರೇಕ್ಷಕರಿಂದ ತುಂಬಿದ್ದು, 29 ವರ್ಷ ವಯಸ್ಸಿನ ನಿಕ್ ಕಿರ್ಗಿಯೋಸ್ ಅವರು ಹೊಟ್ಟೆಯ ಸ್ನಾಯು ಸಮಸ್ಯೆಯಿಂದ ಹೊರಬಂದು ಗೆಲ್ಲುವರೆಂಬ ನಿರೀಕ್ಷೆಯಲ್ಲಿತ್ತು. ಆದರೆ ಬ್ರಿಟನಿನ ಆಟಗಾರ 7–6 (3), 6–3, 7–6 (2) ರಲ್ಲಿ ಜಯಗಳಿಸಿದ್ದರಿಂದ ನಿರಾಸೆ ಅನುಭವಿಸಿತು. ಇದು ಫೆರ್ನ್‌ಲಿ ಅವರಿಗೆ ಪದಾರ್ಪಣೆಯ ಗ್ರ್ಯಾನ್‌ಸ್ಲಾಮ್ ಟೂರ್ನಿ.

ಸಿಸಿಪಸ್‌ಗೆ ಆಘಾತ

11ನೇ ಶ್ರೇಯಾಂಕದ ಸಿಸಿಪಸ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಅಮೆರಿಕದ ಯುವ ಆಟಗಾರ ಅಲೆಕ್ಸ್ ಮೈಕೆಲ್ಸನ್ ಅವರು 7–5, 6–3, 2–6, 6–4 ರಿಂದ 26 ವರ್ಷ ವಯಸ್ಸಿನ ಗ್ರೀಸ್ ಆಟಗಾರರನ್ನು ಸೋಲಿಸಿದರು.

2023ರ ಫೈನಲ್‌ನಲ್ಲಿ ಜೊಕೊವಿಚ್ ಎದುರು ಫೈನಲ್ ಆಡಿದ್ದ ಸಿಸಿಪಸ್, 20 ವರ್ಷ ವಯಸ್ಸಿನ ಅಮೆರಿಕದ ಆಟಗಾರನ ಎದುರು ಲಯ ಕಂಡುಕೊಳ್ಳ-ಲಾಗಲಿಲ್ಲ. ಅಲೆಕ್ಸ್, ಅನುಭವಿ ಎದುರಾಳಿಯನ್ನು ಅಂಕಣದುದ್ದ-ಕ್ಕೂ ಓಡಾಡುವಂತೆ ಮಾಡಿದರು.

ಇದು 42ನೇ ಕ್ರಮಾಂಕದ ಅಮೆರಿಕದ ಆಟಗಾರ, ಅಗ್ರ 20ರಲ್ಲಿರುವ ಆಟಗಾರನೊಬ್ಬನ ಎದುರು ದಾಖಲಿಸಿದ ಮೊದಲ ಜಯ ಎನಿಸಿತು.

ಅಜರೆಂಕಾ ನಿರ್ಗಮನ: ಇಲ್ಲಿ 2012 ಮತ್ತು 2013ರಲ್ಲಿ ಮಹಿಳಾ ಸಿಂಗಲ್ಸ್ ಚಾಂಪಿಯನ್ ಆಗಿದ್ದ ವಿಕ್ಟೋರಿಯಾ ಅಜರೆಂಕಾ ಬೇಗನೇ ಹೊರಬಿದ್ದರು.

ಇಟಲಿಯ ಲೂಸಿಯಾ ಬ್ರೊಂಝೆಟ್ಟಿ ಅವರು 6–2, 7–6 (2) ರಲ್ಲಿ ಬೆಲಾರೂಸ್‌ನ ಆಟಗಾರ್ತಿಯನ್ನು ಮಣಿಸಿದರು.

ರಣಜಿ ಶಿಬಿರ ಬಿಟ್ಟ ಡೆಲ್ಲಿ ಬ್ಯಾಟರ್ ರಾವತ್‌ಗೆ ಸಂಕಷ್ಟ?

ನವದೆಹಲಿ (ಪಿಟಿಐ): ದೆಹಲಿಯ ಅನುಭವಿ ವಿಕೆಟ್ ಕೀಪರ್– ಬ್ಯಾಟರ್ ಅನುಜ್ ರಾವತ್ ಅವರು ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ತಂಡದ ತರಬೇತಿ ಶಿಬಿರ ನಡೆಯುತ್ತಿದ್ದರೂ, ಸೂರತ್‌ಗೆ ಹೋಗಿ ತಮ್ಮ ಹೊಸ ಐಪಿಎಲ್ ತಂಡ ಗುಜರಾತ್ ಟೈಟನ್ಸ್‌ನ ನೆಟ್ಸ್‌ಗೆ ಸೇರಿಕೊಂಡಿದ್ದಾರೆ.



ಆಟಗಾರರು ರಣಜಿ ಪಂದ್ಯಗಳಿಗೆ ಆದ್ಯತೆ ನೀಡಬೇಕು ಎಂದು ಬಿಸಿಸಿಐ ವರಿಷ್ಠರು ಕಟ್ಟುನಿಟ್ಟು ಮಾಡಿದ್ದರೂ, ರಾವತ್ ನಡೆ ಅವರ ಆದ್ಯತೆಯನ್ನು ತೋರಿಸಿದೆ. ದೆಹಲಿ ತನ್ನ ಮುಂದಿನ ಪಂದ್ಯವನ್ನು ಸೌರಾಷ್ಟ್ರದಲ್ಲಿ ರಾಜಕೋಟ್ ವಿರುದ್ಧ ಆಡಬೇಕಿದೆ.

‘ಸೂರತ್‌ನಲ್ಲಿ ಸಿದ್ಧತಾ ಶಿಬಿರ ಆರಂಭಿಸುವ ಮೂಲಕ ಟೈಟನ್ಸ್ ಐಪಿಎಲ್ 2025ರ ತಯಾರಿ ಆರಂಭಿಸಿದೆ. ಇದರಲ್ಲಿ ಅನುಜ್ ರಾವತ್, ಇಶಾಂತ್ ಶರ್ಮಾ, ಜಯಂತ್ ಯಾದವ್, ಕುಮಾರ್ ಕುಶಾಗ್ರ, ತರಬೇತುದಾರ, ಸಹಾಯಕ ಸಿಬ್ಬಂದಿ ಭಾಗವಹಿಸಿದ್ದಾರೆ’ ಎಂದು ಟೈಟನ್ಸ್ ಹೇಳಿಕೆ ತಿಳಿಸಿದೆ.

ರಾಷ್ಟ್ರೀಯ ತಂಡಕ್ಕೆ ತಮಗೆ ಕಷ್ಟವಾಗಿರುವ ಕಾರಣ ಇನ್ನು ಮುಂದೆ ರೆಡ್‌ಬಾಲ್ ಕ್ರಿಕೆಟ್ ಆಡುವುದಿಲ್ಲ ಎಂದು ಇಶಾಂತ್ ಈ ಮೊದಲೇ ಡೆಲ್ಲಿ ಕ್ರಿಕೆಟ್ ಸಂಸ್ಥೆಗೆ (ಡಿಡಿಸಿಎ) ಈ ಮೊದಲೇ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅನ್ವಯ್ ದ್ರಾವಿಡ್ ಅಜೇಯ ಶತಕ

ಬೆಂಗಳೂರು: ಅನ್ವಯ್ ದ್ರಾವಿಡ್, ಬಿಸಿಸಿಐ ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಮವಾರ ಶತಕ ಹೊಡೆದು ಕರ್ನಾಟಕದ ಮುಖಭಂಗ ತಪ್ಪಿಸಿದರು. ಆದರೆ, ಅಹ್ಮದಾಬಾದ್‌ನ ರೈಲ್ವೆ ಕ್ರಿಕೆಟ್ ಮೈದಾನದಲ್ಲಿ ‘ಡ್ರಾ’ ಆದ ಈ ಕ್ವಾ-ರ್ಟರ್‌ಫೈನಲ್ ಪಂದ್ಯದಲ್ಲಿ ಪ್ರಾಬಲ್ಯ ಮೆರೆದ ಪಂಜಾಬ್ ತಂಡ ನಿರೀಕ್ಷೆಯಂತೆ ಸೆಮಿಫೈನಲ್ ತಲುಪಿತು.

ನಾಲ್ಕು ದಿನಗಳ ಈ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಪೂರ್ಣಗೊಳ್ಳಲಿಲ್ಲ.

ಸ್ಕೋರುಗಳು (ಕ್ವಾರ್ಟರ್‌ಫೈನಲ್): 246.3 ಓವರುಗಳಲ್ಲಿ 9 ವಿಕೆಟ್‌ಗೆ 742 (ಗುರುಸಿಮ್ರಣ ಸಿಂಗ್ 230, ಶಾನ್ವಿರ್ ಕಲ್ಸಿ 84, ಅದ್ವಿಕ್ ಸಿಂಗ್ 81, ಸಂದೀಪ್ ಸಿಂಗ್ 85, ನಿಕೇತ್ ನಂದಾ ಔಟಾಗದೇ 51, ಸಾಹಿಬ್ ಜೋತ್‌ವೀರ್ ಸಿಂಗ್ 68; ಧ್ಯಾನ್ ಎಂ.ಹಿರೇಮಠ 152ಕ್ಕೆ4); ಕರ್ನಾಟಕ: 117 ಓವರುಗಳಲ್ಲಿ 7 ವಿಕೆಟ್‌ಗೆ 280 (ಧ್ರುವ್ ಕೃಷ್ಣನ್ 73, ಸ್ಯಾಮಂತಕ್ ಅನಿರುದ್ಧ 31, ಅನ್ವಯ್ ದ್ರಾವಿಡ್ ಔಟಾಗದೇ 110, ಧ್ಯಾನ್ ಎಂ.ಹಿರೇಮಠ 33; ಸಾಕ್ಷೆಯ 86ಕ್ಕೆ5).

ಮಹಿಳಾ ಟಿ20: ನಾಕೌಟ್‌ಗೆ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡ, ಕಟಕ್‌ನ ಎಂಜಿಎಂ ಸ್ಕೂಲ್ ಆಫ್ ಸ್ಪೋರ್ಟ್ಸ್ ಮೈದಾನದಲ್ಲಿ ಸೋಮವಾರ ನಡೆದ ಬಿಸಿಸಿಐ 23 ವರ್ಷದೊಳಗಿನ-ವರ ಮಹಿಳಾ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಪುದುಚೇರಿ ತಂಡವನ್ನು 74 ರನ್‌ಗಳಿಂದ ಸೋಲಿಸಿತು. ಈ ಗೆಲುವಿನಿಂದ ನಾಕೌಟ್ ಹಂತಕ್ಕೆ ಪ್ರವೇಶಿಸಿತು.

ಕರ್ನಾಟಕ ತಂಡ, ಇದೇ 16ರಂದು ತಿರುವನಂತಪುರಂನ ಮಂಗಳಾಪುರಂ ಮೈದಾನದಲ್ಲಿ ನಡೆಯುವ ಪಂದ್ಯದಲ್ಲಿ ಬರೋಡಾ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 8ಕ್ಕೆ 136 (ಕೃಷಿಕಾ ರೆಡ್ಡಿ 36, ಪ್ರೇರಣಾ ಜಿ.ಆರ್. 54; ಶರ್ಲಿ ರಾಣಿ 26ಕ್ಕೆ2); ಪುದುಚೇರಿ: 20 ಓವರ್‌ಗಳಲ್ಲಿ 8ಕ್ಕೆ 62 (ಸುನಾಯನ ಔಟಾಗದೇ 27, ಶಿಶಿರಾ ಎ ಗೌಡ 14ಕ್ಕೆ4, ಸಲೋನಿ 13ಕ್ಕೆ3).